SAPTHAGIRI (KANNADA)
SPIRITUAL ILLUSTRATED MONTHLY
Volume:03, Issue: 2 Pages:56
September - 2023, Price Rs.20/-

ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಆಧ್ಯಾತ್ಮಿಕ ಸಚಿತ್ರ ಮಾಸಪತ್ರಿಕೆ

ಸೆಪ್ಟೆಂಬರ್ 2023
ಬೆಲೆ ರೂ. 20/-



22-09-2023
ಶುಕ್ರವಾರ
ಹಗಲು : ಪಲ್ಲಕಿಯಲ್ಲಿ
ಮೋಹಿನೀಅವತಾರೋತ್ಸವ

ತಿರುಮಲೆ
ಶ್ರೀ ವೆಂಕಟೇಶ್ವರ ಸ್ವಾಮಿಯವರ ವಾರ್ಷಿಕ ಬ್ರಹ್ಮೋತ್ಸವಗಳು
2023 ಸೆಪ್ಟೆಂಬರ್ 18 ರಿಂದ 26 ರ ವರೆಗೆ



# ತಿರುಮಲೆ
# ಶ್ರೀವೇಂಕಟೇಶ್ವರ ಸ್ವಾಮಿಯವರ ನವರಾತ್ರಿ ಬ್ರಹ್ಮೋತ್ಸವಗಳು
# 2023 ಅಕ್ಟೋಬರ್ 15 ರಿಂದ 23 ರ ವರೆಗೆ

**15-10-2023**
ಭಾನುವಾರ
ಹಗಲು : ಬಂಗಾರು ತಿರುಚ್ಚಿ ಉತ್ಸವ
ರಾತ್ರಿ : ದೊಡ್ಡಶೇಷವಾಹನ

**16-10-2023**
ಸೋಮವಾರ
ಹಗಲು : ಚಿಕ್ಕಶೇಷವಾಹನ
ರಾತ್ರಿ : ಹಂಸವಾಹನ

**17-10-2023**
ಮಂಗಳವಾರ
ಹಗಲು : ಸಿಂಹವಾಹನ
ರಾತ್ರಿ : ಮುತ್ತಿನಚಪ್ಪರವಾಹನ

**18-10-2023**
ಬುಧವಾರ
ಹಗಲು : ಕಲ್ಪವೃಕ್ಷವಾಹನ
ರಾತ್ರಿ : ಸರ್ವಭೂಪಾಲವಾಹನ

**19-10-2023**
ಗುರುವಾರ
ಹಗಲು : ಪಲ್ಲಕಿಯಲ್ಲಿ
ಮೋಹಿನೀಅವತಾರೋತ್ಸವ
ರಾತ್ರಿ : ಗರುಡವಾಹನ

**20-10-2023**
ಶುಕ್ರವಾರ
ಹಗಲು : ಹನುಮದ್ವಾಹನ
ರಾತ್ರಿ : ಗಜವಾಹನ

**21-10-2023**
ಶನಿವಾರ
ಹಗಲು : ಸೂರ್ಯಪ್ರಭವಾಹನ
ರಾತ್ರಿ : ಚಂದ್ರಪ್ರಭವಾಹನ

**22-10-2023**
ಭಾನುವಾರ
ಹಗಲು : ಸ್ವರ್ಣರಥೋತ್ಸವ
ರಾತ್ರಿ : ಅಶ್ವವಾಹನ

**23-10-2023**
ಸೋಮವಾರ
ಹಗಲು : ಚಕ್ರಸ್ನಾನ
ರಾತ್ರಿ : ತಿರುಚ್ಚಿ ಉತ್ಸವ

# ಭಗವದ್ಗೀತೆ



ಕಾರ್ಪಣ್ಯದೋಷೋಪಹತಸ್ವಭಾವಃ
ಪೃಚ್ಛಾಮಿ ತ್ವಾಂ ಧರ್ಮ ಸಂಮೂಢ ಚೇತಾಃ।
ಯಚ್ಛ್ರೇಯಃ ಸ್ಯಾನ್ನಿಶ್ಚಿತಂ ಬ್ರೂಹಿ ತನ್ಮೇ
ಶಿಷ್ಯಸ್ತೇಽಹಂ ಶಾಧಿ ಮಾಂತ್ವಾಂ ಪ್ರಪನ್ನಮ್ ॥

(ಶ್ರೀಮದ್ಭಗವದ್ಗೀತೆ ಅಧ್ಯಾಯ - 2, ಶ್ಲೋಕ -7)

ದೈನ್ಯದಿಂದ ಕಂಗೆಟ್ಟಿದ್ದೇನೆ, ಧರ್ಮದ ಬಗೆಗೆ ಮನಸ್ಸು ನಿರ್ಧರಿಸಲಾರದಾಗಿದೆ. ಅದರಿಂದ ನಿನ್ನನ್ನು ಕೇಳಿಕೊಳ್ಳುತ್ತೇನೆ, ಯಾವುದು ಸರಿ ಎಂಬುದನ್ನು ನೀನೆ ನನಗೆ ತಿಳಿ ಹೇಳಬೇಕು. ನಾನು ನಿನ್ನ ಶಿಷ್ಯ. ಶರಣು ಬಂದಿರುವ ನನಗೆ ನೀನೆ ದಾರಿ ತೋರಬೇಕು.



ಇಷ್ಟು ದಿನ ಈ ವೈಕುಂಠ ಎಷ್ಟು ದೂರವೋ ಎನ್ನುತಲಿದ್ದೆ
ದೃಷ್ಟಿಯಿಂದಲಿ ನಾನು ಕಂಡೆ ಸೃಷ್ಟಿಗಿರೀಶನೇ ಶ್ರೀರಂಗಶಾಯೀ

ಎಂಟು ಏಳನು ಕಳೆದುದರಿಂದೆ ಬಂಟರೈವರ ತುಳಿದುದರಿಂದೆ
ತುಂಟಕನೊಬ್ಬನ ತರಿದುದರಿಂದೆ ಬಂಟನಾಗಿ ಬಂದೆನೋ ಶ್ರೀರಂಗಶಾಯೀ

ವಜ್ರ ವೈಢೂರ್ಯದ ತೊಲೆಗಳ ಕಂಡೆ ಪ್ರಜ್ವಲಿಪ ಮಹಾದ್ವಾರವ ಕಂಡೆ
ನಿರ್ಜರಾದಿ ಮುನಿಗಳ ನಾ ಕಂಡೆ ದುರ್ಜನಾಂತಕನೆ ಶ್ರೀರಂಗಶಾಯೀ

ರಂಭೇ - ಊರ್ವಶೀ ಮೇಳವ ಕಂಡೆ ತುಂಬುರು ಮುನಿನಾರದರನು ಕಂಡೆ
ಅಂಬುಜೋದ್ಭವ ರುದ್ರರ ಕಂಡೆ ಶಂಬರಾರಿ ಪಿತನೇ ಶ್ರೀರಂಗಶಾಯೀ

ನಾಗಶಯನನ ಮೂರುತಿ ಕಂಡೆ ಭೋಗಿ ಭೂಷಣ ಶಿವನನು ಕಂಡೆ ಭಾಗವತರ
ಸಮ್ಮೇಳವ ಕಂಡೆ ಕಾಗಿನೆಲೆಯಾದಿ ಕೇಶವನ ನಾ ಕಂಡೆ

- ಕನಕದಾಸರು

(ಒಂಬತ್ತನೆಯ ದಶಕ)

# ದಯಾ ಶತಕಮ್



- ಎನ್. ನರಸಿಂಹಾಚಾರ್ಯ

**ಸಟಾಪಟಲಭೀಷಣೇ ಸರಭಸಾಟ್ಟಹಾಸೋದ್ಭಟೇ ಸ್ಫುರತ್ಕ್ರುಧಿ  ಪರಿಸ್ಫುಟದ್ಭ್ರುಕುಟಿಕೇ ಽಪಿ ವಕ್ತ್ರೇ ಕೃತೇ**
**ದಯೇ ವೃಷಗಿರೀಶಿತುರ್ದನುಜಡಿಂಭದತ್ತಸ್ತನಾ ಸರೋಜಸದೃಶಾ ದೃಶಾ ಸಮುದಿತಾಕೃತಿರ್ದೃಶ್ಯಸೇ ॥84॥**

ಶ್ರೀ ನರಸಿಂಹಾವತಾರ ಮೂಲಕವಾಗಿ ದಯಾದೇವಿಯು ಮಾಡಿದ ಉಪಕಾರವು ಈ ಪದ್ಯದಲ್ಲಿ ವರ್ಣಿಸಲ್ಪಡುವುದು. ವಿಚಿತ್ರವಾದ ಸೇರುವಿಕೆಯುಳ್ಳ ನರಸಿಂಹಾವತಾರದಲ್ಲಿ ದಯಾದೇವಿಯ ಕಾರ್ಯವೂ ವಿಚಿತ್ರವಾದುದು. 'ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಂ'-ಎಂಬಂತೆ ಅವತಾರಗಳಿಗೆ ಮುಖ್ಯವಾದ ಪ್ರಯೋಜನವು ಸಾಧುಜನ ಸಂರಕ್ಷಣವೇ ದುರ್ಜನ ನಾಶವೆಂಬುದು ಅನುಷಂಗಿಕವಾದುದು. ಆದ್ದರಿಂದ ಈ ಅವತಾರಕ್ಕೂ ಮುಖ್ಯವಾದ ಪ್ರಯೋಜನವು ಮಹಾಭಾಗವತ ಶಿಖಾಮಣಿಯಾದ ಪ್ರಹ್ಲಾದನ ಮಾತನ್ನು ಪರಿಪಾಲಿಸಿ, ಅವನನ್ನು ಸಂರಕ್ಷಿಸುವುದೇ. ಅನುಷಂಗಿಕವಾಗಿ ಹಿರಣ್ಯಾಸುರ ಸಂಹಾರವು ಉಂಟಾಯಿತು. ಈ ಅವತಾರವು ಇದ್ದುದು ಕೆಲವು ನಿಮಿಷಗಳು ಮಾತ್ರ. ಅಷ್ಟರಲ್ಲಿ ನಡೆದ ಒಂದು ವಿಚಿತ್ರ ವೃತ್ತಾಂತವನ್ನು ಇಲ್ಲಿ ವರ್ಣಿಸುತ್ತಾರೆ. ಸಿಂಹಜಾತಿಗೆ ಸ್ವಭಾವ ಸಿದ್ಧವಾದ ಕೇಸರಗಳು ಗೊಂಚಲು ಗೊಂಚಲಾಗಿ ಮುಖದಲ್ಲಿ ಕೆದರಿಕೊಂಡಿರುವುದರಿಂದ ಮಹಾಭಯಂಕರವಾಗಿಯೂ, ಕಂಭದಿಂದ ಆವಿರ್ಭವಿಸುವಾಗಲೇ ಅತ್ಯಂತ ಕೋಪದಿಂದಲೂ, ರಭಸದಿಂದಲೂ ಅಟ್ಟಹಾಸವನ್ನು ಮಾಡಿದ ಮಾತ್ರದಿಂದಲೇ ಪ್ರಪಂಚವೇ ನಡುಗುವಂತೆಯೂ , ಕೋಪವೇ ರೂಪುಗೊಂಡಿದೆಯೋ ಎಂಬಂತಿರುವ ಭ್ರೂಭಂಗಗಳಿಂದ ಕೂಡಿ ಮಹಾಭಯಂಕರವಾದ ಕಣ್ಣುಗಳಿಂದ ಕೂಡಿದ ದಿವ್ಯವಾದ ಮುಖಮಂಡಲವು ಯಾವ ಕ್ಷಣದಲ್ಲಿ ಕಂಡು ಬಂದಿತೋ, ಅದೇ ಕ್ಷಣದಲ್ಲಿ ಅದೇ ಮುಖದಲ್ಲಿರುವ ಕಣ್ಣುಗಳ ಮೂಲಕ ದಯಾದೇವಿಯ ಪ್ರವಾಹವುಂಟಾಗಿ ಅತಿ ಮಧುರವಾಗಿಯೂ, ಶೀತಲವಾಗಿಯೂ ಇರುವ ಕಟಾಕ್ಷವೆಂಬ ಸ್ತನ್ಯದಿಂದ ಅಸುರಕುಮಾರನಾದ ಪ್ರಹ್ಲಾದನನ್ನು ಸಮಾಧಾನಪಡಿಸಿ ತನ್ಮೂಲಕವಾಗಿ ಪ್ರಪಂಚದಲ್ಲಿ ನಾರಾಯಣಪರತ್ವವನ್ನು ಸ್ಥಾಪಿಸಿದನು. ಯಾವ ಕ್ಷಣದಲ್ಲಿ ಭಗವಂತನ ದಿವ್ಯ ನೇತ್ರಗಳು ಅಸುರನಿಗೆ ಮಹಾಭಯಂಕರಗಳಾಗಿದ್ದುವೋ, ಅದೇ ಕ್ಷಣದಲ್ಲಿ ಅದೇ ದಿವ್ಯನೇತ್ರಗಳು ಕಮಲಪುಷ್ಪದಂತೆ ಪ್ರಹ್ಲಾದನಿಗೆ ಪರಮ ಭೋಗ್ಯವಾಗಿಯೂ, ಆನಂದವನ್ನುಂಟು ಮಾಡುವುವುಗಳಾಗಿಯೂ, ಅತ್ಯಂತ ಶಾಂತವಾಗಿಯೂ ಇದ್ದುವು. ಇದೇ ಇಲ್ಲಿನ ವಿಚಿತ್ರವಾದ ಸಂಘಟನೆ. ಇದೇ ದಯಾದೇವಿಯು ಮಾಡಿದ ಸಾಧು ಪರಿತ್ರಾಣ ರೂಪವಾದ ಮಹೋಪಕಾರ. ಅಂತಹ ಒಬ್ಬ ಸಾಧುವನ್ನು ಕಾಪಾಡುವುದರಿಂದ ಅವನ ಮೂಲಕವಾಗಿ ಪ್ರಪಂಚಕ್ಕೆ ಉಂಟಾಗುವ ಉಪಕಾರವು ಅನಂತವಾದುದೆಂದು ಹೇಳಬಹುದು. ಕೋಪವಾಗಲಿ, ಅನುಗ್ರಹವಾಗಲಿ, ವಾತ್ಸಲ್ಯವಾಗಲಿ ಇವುಗಳೆಲ್ಲವೂ ಕಣ್ಣುಗಳ ಮೂಲಕವಾಗಿಯೇ ಇತರರಿಗೆ ಗೋಚರಿಸುವುದಲ್ಲವೆ? ದಯಾಮಾತೆಯು ತನ್ನ ಮಗುವಿನಂತಿರುವ ಭಾಗವತರತ್ನನಾದ ಪ್ರಹ್ಲಾದನಿಗೆ ಅನುಗ್ರಹಮಯವಾದ ಕಟಾಕ್ಷವೆಂಬ ಸ್ತನ್ಯವನ್ನು ಕೊಟ್ಟು ಅವನಿಗೆ ಆತ್ಮಧಾರಣೆಯನ್ನುಂಟು ಮಾಡಿದಳು. ಆಗ ದಯಾದೇವಿಯ ಸ್ವರೂಪವು ಭಗವಂತನ ದಿವ್ಯವಾದ ನಯನಗಳಲ್ಲಿ ಸ್ಪಷ್ಟವಾಗಿ ಪ್ರಕಾಶಿಸಿದುವು. ಆದ್ದರಿಂದ ಈ ಅವತಾರದಲ್ಲಿಯೂ ದಯಾದೇವಿಯು ಕಣ್ಣುಗಳಲ್ಲಿಯೇ ಪ್ರವೇಶಿಸಿದಳೆಂದು ಭಾವವು. "ಕೃತೇಽಪಿ" ಎಂಬ ಪದದಿಂದ ಕೋಪವೆಂಬುದು ಭಗವಂತನಿಗೆ ಕೋಪ ಮಹಾರಯತ್ತೀವ್ರಂ ಎಂದು ವಾಲ್ಮೀಕಿಯು ಹೇಳಿರುವಂತೆ ಆಗಂತುಕವಾಗಿಯೂ, ತಾತ್ಕಾಲಿಕವಾಗಿಯೂ, ಇರುವುದೆಂಬುದೂ, ಉತ್ತರಾರ್ಧದಲ್ಲಿ ಹೇಳಿರುವ ವಾತ್ಸಲ ಪರಿಪೂರ್ಣವಾದ ಕಟಾಕ್ಷವೇ ಸ್ವಭಾವಿಕವಾದುದೆಂಬುದೂ ವಿವಕ್ಷಿತವಾದುದು.

ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಆಧ್ಯಾತ್ಮಿಕ ಸಚಿತ್ರ ಮಾಸ ಪತ್ರಿಕೆ

ಶ್ರೀ ಶೋಭಕೃತ್ ನಾಮಸಂವತ್ಸರ ನಿಜ ಶ್ರಾವಣ - ಭಾದ್ರಪದ ಮಾಸ ಸಂಚಿಕೆ

ಸಂಪುಟ : 03 ಸೆಪ್ಟೆಂಬರ್ - 2023 ಸಂಚಿಕೆ : 02



ವೆಂಕಟಾದ್ರಿ ಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ
ವೇಂಕಟೇಶ ಸಮೋದೇವೋ ನ ಭೂತೋ ನ ಭವಿಷ್ಯತಿ

**ಗೌರವ ಸಂಪಾದಕರು**
ಎ.ವಿ. ಧರ್ಮಾರೆಡ್ಡಿ, ಐ.ಡಿ.ಇ.ಎಸ್.
ಕಾರ್ಯನಿರ್ವಹಣಾಧಿಕಾರಿ, (ಎಫ್.ಎ.ಸಿ.)
ತಿ.ತಿ.ದೇ., ತಿರುಪತಿ.

**ಪ್ರಧಾನ-ಸಂಪಾದಕರು**
ಡಾ॥ ಕೆ. ರಾಧಾರಮಣ, ಎಮ್.ಎ.ಎಮ್.ಫಿಲ್.ಪಿಎಚ್.ಡಿ.

**ಸಂಪಾದಕರು**
ಡಾ॥ ವಿ.ಜಿ. ಚೊಕ್ಕಲಿಂಗಂ, ಎಮ್.ಎ.ಪಿಎಚ್.ಡಿ.

**ಮುದ್ರಣ**
ಶ್ರೀ. ಪಿ. ರಾಮರಾಜು, ಎಮ್.ಎ.
ವಿಶೇಷಾಧಿಕಾರಿ,
ತಿ.ತಿ.ದೇ., ಮುದ್ರಣಾಲಯ, ತಿರುಪತಿ.

**ಡಿ.ಟಿ.ಪಿ.**
ಪ್ರಧಾನ ಸಂಪಾದಕರ -ಕಾರ್ಯಾಲಯ
ತಿ.ತಿ.ದೇ. ತಿರುಪತಿ.

**ಛಾಯಗ್ರಹಣ**
ಶ್ರೀ ಪಿ.ಎನ್.ಶೇಖರ್,
ಸಹಾಯ ಛಾಯಗ್ರಹಣ, ತಿ.ತಿ.ದೇ.
ಶ್ರೀ ಬಿ.ವೆಂಕಟರಮಣ,
ಸಹಾಯ ಛಾಯಗ್ರಹಣ ತಿ.ತಿ.ದೇ.

**ಲೇಖನ / ಚಂದಾ ಮಿಕ್ಕ ವಿವರಗಳಿಗೆ**
ಪ್ರಧಾನ ಸಂಪಾದಕರು
ತಿ.ತಿ.ದೇವಸ್ಥಾನಗಳು,
ಕೆ.ಟಿ.ರಸ್ತೆ. ತಿರುಪತಿ - 517 507

**ಇತರ ವಿವರಗಳಿಗೆ**
ಕಾರ್ಯಾಲಯ : 0877 - 2264543
: 0877 - 2264359
ಸಂಪಾದಕರು : 0877 - 2264360

ಸಲಹೆ/ದೂರುಗಳಿಗೆ ಟೋಲ್ ಫ್ರೀ ಸಂಖ್ಯೆ :
1800-425-4141
ಸಲಹೆ/ಸೂಚನೆ/ದೂರುಗಳಿಗಾಗಿ
sapthagiri.helpdesk@tirumala.org
24x7 ಕೆಲಸ ಮಾಡುವ ದೂರವಾಣಿ ಸಂಖ್ಯೆ
0877 - 2277777, 2233333

ಸಪ್ತಗಿರಿ ಮಾಸಪತ್ರಿಕೆಯನ್ನು ವೀಕ್ಷಕರು
www.tirumala.org
ಮೂಲಕ ಓದಬಹುದು.

## ವಿಷಯಸೂಚಿಕೆ

| | | |
|---|---|---|
| ಸಂಪಾದಕೀಯ | | 06 |
| ಪರಮ ಪುರುಷಶ್ರೀವಿಷ್ಣುಸ್ತವನ | -ಮೂರ್ತಿ ರಾಮನಾಥಪುರ | 07 |
| ಋಷಿ ಪಂಚಮಿ | -ಶ್ರೀಮತಿ. ಮಾಧುರಿ ದೇಶಪಾಂಡೆ | 09 |
| ಭಾದ್ರಪದ ಮಾಸದ ವ್ರತಃ ಗೌರಿ ವ್ರತ | - ಹನುಮಂತ ಮ. ದೇಶಕುಲಕರ್ಣಿ | 10 |
| ಸಂಪ್ರದಾಯ ಹಾಡುಗಳಲ್ಲಿ ಲಕ್ಷ್ಮೀದೇವಿ | - ಡಾ॥ ಎ. ಕುಮುದ | 12 |
| ಶಂಬರಾರಿಯ ತಾತ ಸಲಹೋ ಶ್ರೀನಾಥ | - ಡಾ॥ ಸುಭಾಸ.ಭೀ. ಕಾಖಂಡಕಿ | 14 |
| ಆಯುರ್ವೇದದ ಆರೋಗ್ಯ ಸೂತ್ರ | - ಡಾ॥ ಎಸ್.ಬಿ.ಎ. ಸಂಧ್ಯಾ | 16 |
| ಶ್ರೀ ವರಾಹವೈಭವ | - ಡಾ॥ ಗುರುರಾಜ ಪೋಶೆಟ್ಟಿಹಳ್ಳಿ | 18 |
| ಶ್ರುತಾವತೀ | - ಡಾ॥ ವಾಣಿಶ್ರೀ ಬಿ. ಎಂ. | 21 |
| ಚನ್ನಪಟ್ಟಣದ ಶ್ರೀ ವರಪ್ರದ ವರದರಾಜಸ್ವಾಮಿ ದೇವಾಲಯ | -ಕೆಂಗೇರಿ ಚಕ್ರಪಾಣಿ | 22 |
| ಬಲರಾಮ - ಬಲದೇವ- ಬಲಭದ್ರ | -ಡಾ॥ ಎನ್.ಕೆ. ರಾಮಶೇಷನ್ | 24 |
| ಶ್ರೀಕೃಷ್ಣಜನ್ಮಾಷ್ಟಮಿ | -ಶ್ರೀಮತಿ. ಕೆ.ವಿ. ಲತಾ | 31 |
| ಶ್ರೀ ವಾದಿರಾಜರು | -ಶ್ರೀಧರ ರಾಯಸಂ | 34 |
| ಪುಸ್ತಕ ಪರಿಚಯ - | | |
| ಸಿರಿಕಾಂತವಿಠಲ ಶ್ರೀ ವಿಷ್ಣುಸಹಸ್ರನಾಮ ಮಹಾಕಾವ್ಯ | - ವಿ. ಎಸ್. ಕುಮಾರ್ | 36 |
| ಶ್ರೀ ಅನಂತಪದ್ಮನಾಭ ವ್ರತಾಚರಣೆ | -ಶ್ರೀಮತಿ. ಪಾರಿಜಾತ ಬಿ.ಎಸ್. | 38 |
| ಮಹಾಮಹಿಮ ಜಗನ್ನಾಥದಾಸರು | -ಡಾ॥ ಆರ್.ವಾದಿರಾಜು | 40 |
| ಜಗತ್ತಿನ ಪ್ರಥಮ ಶಿಲ್ಪಿ ಬ್ರಹ್ಮಮಾನಸ ಪುತ್ರ ವಿಶ್ವಕರ್ಮ | -ಡಾ॥ ಎಸ್. ನಂಜುಂಡಸ್ವಾಮಿ | 42 |
| ರಾಶಿ ಫಲಗಳು | - ಬ್ರಹ್ಮಶ್ರೀ ಟಿ.ವಿ.ಕೆ.ಪೂರ್ಣ ಪ್ರಸಾದ್ ಸಿದ್ಧಾಂತಿ | 44 |
| ಸಂಸ್ಕೃತ ಕಲಿಯೋಣ | - ವಿ. ಪ್ರದೀಪ್ ಕುಮಾರ್ | 45 |
| ನೀತಿ ಕಥೆ -ಅರಳಿಮರವೇಕೆ ಬಾಡುವುದಿಲ್ಲ? | -ಕೃಪೆ | 48 |
| ರಸಪ್ರಶ್ನೆಗಳು | | 50 |
| ಚಿತ್ರ ಕಥೆ - ಕಾಳೀಯ ಮರ್ದನ | -ಶ್ರೀನಿವಾಸ ದೀಕ್ಷಿತರು | 52 |

ಮುಖಚಿತ್ರ -ಮೋಹಿನಿ ಅವತಾರದಲ್ಲಿ ಶ್ರೀ ಮಲೆಯಪ್ಪ ಸ್ವಾಮಿಯವರು, ತಿರುಮಲೆ
ಹಿಂಬದಿಚಿತ್ರ - ರಥೋತ್ಸವ, ತಿರುಮಲೆ

ಸಪ್ತಗಿರಿಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅಭಿಪ್ರಾಯಗಳು ಸಂಪಾದಕವರ್ಗದ, ಪತ್ರಿಕೆಯ, ಅಭಿಪ್ರಾಯಗಳೇ ಆಗಿರಬೇಕು ಎಂದಿಲ್ಲ. - ಸಂಪಾದಕ

| | |
|---|---|
| ಬಿಡಿ ಪ್ರತಿ | ರೂ. 20/- |
| ವಾರ್ಷಿಕ ಚಂದಾ | ರೂ. 240/- |
| ಆಜೀವ ಚಂದಾ | ರೂ. 2400/- (12 ವರ್ಷಗಳು) |
| ವಿದೇಶಿವಾರ್ಷಿಕಚಂದಾ | ರೂ. 1030/- |

# ಸಂಪಾದಕೀಯ

# ತಿರುಮಲೆ ಬೀದಿಯಲ್ಲಿ ಬ್ರಹ್ಮೋತ್ಸವದ ಸಂಭ್ರಮ

ವೇಂಕಟಾದ್ರಿ ಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ।
ವೇಂಕಟೇಶ ಸಮೋದೇವೋ ನ ಭೂತೋ ನ ಭವಿಷ್ಯತಿ॥

ಸಮಸ್ತ ಬ್ರಹ್ಮಾಂಡದಲ್ಲೆಲ್ಲಾ ಹುಡುಕಿದರೂ "ವೇಂಕಟಾದ್ರಿಗೆ ಸಮನಾದ ಪವಿತ್ರವಾದ ಸ್ಥಳವು ಇಲ್ಲ. ವೇಂಕಟಾದ್ರಿವಾಸನಾದ ಶ್ರೀವೇಂಕಟೇಶ್ವರನಿಗೆ ಸಮಾನವಾದ ದೇವರು ಯಾವ ಕಾಲದಲ್ಲೂ ಇಲ್ಲ. ಅದಕ್ಕೇ "ತಿರುಮಲೆಯು ಕಲಿಯುಗದ ವೈಕುಂಠ" ಎಂದು ಎಲ್ಲರೂ ಕೊಂಡಾಡುತ್ತಿದ್ದಾರೆ. ವೇಂಕಟಾದ್ರಿಯ ಸ್ಪರ್ಶ ಮಾತ್ರದಿಂದಲೇ ಸರ್ವಪಾಪಗಳೂ ಕಳೆದುಹೋಗುತ್ತವೆ ಎಂದು ಎಲ್ಲರ ನಂಬಿಕೆ. ತಿರುಮಲೆಯ ಪ್ರಭುವಾದ ತಿರುವೇಂಕಟನಾಥನಿಗೆ ವರ್ಷದಲ್ಲಿ ಅನೇಕ ಉತ್ಸವಗಳು, ಅನೇಕ ಆರಾಧನೆಗಳು ಆ ಸನ್ನಿಧಿಯಲ್ಲಿ ನಿತ್ಯವೂ ಕಲ್ಯಾಣ ನಡೆಯುತ್ತದೆ, ಪ್ರತಿಘಳಿಗೆಯಲ್ಲೂ ಅಲ್ಲಿ ಹಬ್ಬ ನಡೆಯುತ್ತಿರುತ್ತದೆ."ಉತ್ಸವ" ಎಂದರೆ "ಸವಂ" ಎಂಬ ಪದಕ್ಕೆ "ಉತ್" ಉಪಸರ್ಗವನ್ನು ಸೇರಿಸುವುದರಿಂದ ಉತ್ಸವ ಎಂದಾಗುತ್ತದೆ. "ಸವಂ" ಅಂದರೆ ಯಜ್ಞ, ಯಾಗ ಎಂಬ ಅರ್ಥವು ಬರುತ್ತದೆ. ಅಂದರೆ ಒಂದು ಅಧಿಷ್ಠಾನ ದೈವದ ಸಂತೃಪ್ತಿಗಾಗಿ , ಇಹಪರಗಳಿಗೆ ಸಂಬಂಧಿಸಿದ ಪ್ರಯೋಜನವನ್ನು ಆಶಿಸಿ ಶಾಸ್ತ್ರ ವಿಧಿಯಾಗಿ ನಡೆಯುವ ಕಾರ್ಯವೆಂದು ಅರ್ಥ. ಆದರೆ "ಉತ್" ಎಂದರೆ ಉಪಸರ್ಗಾತ್ಮಕವಾದ ಪ್ರಯೋಗದೊಂದಿಗೆ, ಆ ಶಬ್ದ ಬಹುಳಾರ್ಥಸಾಧಕವಾದ ಸಾಮಾಜಿಕ ಸಂಕ್ಷೇಮಕ್ಕೆ ಸಹಾಯಕವಾಗುತ್ತದೆ. ರಾಮಾಯಣದ ಶ್ರೀರಾಮಪಟ್ಟಾಭಿಷೇಕದ ಸಮಯದಲ್ಲಿ "ಉತ್ಸವಶ್ಚ ಮಹಾನ್ ಅಸೀತ್ ಅಯೋಧ್ಯಾಯಾಂ ಜನಾಹುತಿಃ" ಎಂದು ಪ್ರಯೋಗಿಸಲಾಗಿದೆ ಮತ್ತೆ ಸರ್ವಮಾನವ ಸಂಕ್ಷೇಮಾರ್ಥವಾಗಿ ಏರ್ಪಟ್ಟಿರುವ ದೇವಾಲಯಗಳಲ್ಲಿ ಉತ್ಸವಗಳು ನಿಜವಾಗಿಯೂ ಸರ್ವಮಾನವ ಕಲ್ಯಾಣದ ಸೋಪಾನಗಳು ಎನ್ನುವುದರಲ್ಲಿ ಸಂದೇಹವಿಲ್ಲ.

ಆದರೂ ನಾವು ಧನ್ಯರಾಗುವುದಕ್ಕೆ ಸರ್ವದೇವತೆಗಳು ನೆಲೆಸಿರುವ ವಾಹನಗಳ ಮೇಲೆ ಪದಕವಿತಾಪಿತಾಮಹನಾದ ಅನ್ನಮಯ್ಯನು, "ತಿರುವೀಧುಲ ಮೆರಸೀ ದೇವದೇವುಡೂ " "ನಾನಾ ದಿಕ್ಕುಲ ನರುಲೆಲ್ಲಾ ವಾನಲಲೋನೇ ವತ್ತುರು" ಅಂದರೆ "ಸನ್ನಿಧಿ ಬೀದಿಗಳಲ್ಲಿ ಮೆರೆಯುವಂತಹಾ ದೇವದೇವನು" ನರರೆಲ್ಲರೂ ದಶ ದಿಕ್ಕುಗಳಿಂದಲೂ ಮಳೆಯಲ್ಲೂ ಬರುತ್ತಿದ್ದಾರೆ ಎಂದು ಕೀರ್ತಿಸಿದಂತೆ, ವಿವಿಧ ವಾಹನಗಳ ಮೇಲೆ ಮೆರವಣಿಗೆಯಲ್ಲಿ ಬರುವ ಶ್ರೀನಿವಾಸನನ್ನು ದರ್ಶಿಸುವುದಕ್ಕೆ ವರ್ಷಕ್ಕೊಮ್ಮೆ ಬ್ರಹ್ಮೋತ್ಸವಗಳನ್ನು ನಿರ್ವಹಿಸುತ್ತಾರೆ. ಸ್ವಾಮಿಯ ಆದೇಶದಂತೆ ಸಾಕ್ಷಾತ್ತು ಚತುರ್ಮುಖ ಬ್ರಹ್ಮದೇವನು ಪ್ರಾರಂಭಿಸಿದ ಉತ್ಸವಗಳಾದ್ದರಿಂದ ಅವುಗಳನ್ನು "ಸಾಲಕಟ್ಲ ಬ್ರಹ್ಮೋತ್ಸವ" ಎಂದು ಕರೆಯುತ್ತಾರೆ. ಈ ಬ್ರಹ್ಮೋತ್ಸವಗಳನ್ನು ಹತ್ತು ದಿನಗಳ ಕಾಲ ಆಚರಿಸುತ್ತಾರೆ. ಈ ವರ್ಷ ಸೆಪ್ಟೆಂಬರ್ 17 ಭಾನುವಾರ ದಿಂದ 26 ಶುಕ್ರವಾರ ದವರೆಗೂ ಈ ಸಾಲಕಟ್ಲ ಬ್ರಹ್ಮೋತ್ಸವವನ್ನು ತಿರುಮಲೆಯಲ್ಲಿ ಅತ್ಯಂತ ವೈಭವದಿಂದ ನಡೆಸುತ್ತಾರೆ. ಜೊತೆಗೆ ಈ ವರ್ಷ ಅಧಿಕಮಾಸವು ಬಂದಿದ್ದರಿಂದ ಶ್ರೀನಿವಾಸನಿಗೆ ಎರಡನೆಯ ಬ್ರಹ್ಮೋತ್ಸವ ಅಕ್ಟೋಬರ್ 14 ಶನಿವಾರ ದಿಂದ 23 ಸೋಮವಾರ ದವರೆಗೂ ನೆರವೇರಿಸುತ್ತಾರೆ. ಇದನ್ನೇ "ನವರಾತ್ರಿ ಬ್ರಹ್ಮೋತ್ಸವ" ಎಂದು ಕರೆಯುತ್ತಾರೆ. ಲಕ್ಷಾಂತರ ಭಕ್ತಾದಿಗಳು ದೇಶವಿದೇಶಗಳಿಂದ ಇಲ್ಲಿಗೆ ಆಗಮಿಸಿ ಈ ವಿರಾಟ್ಪುರುಷನನ್ನು ದರ್ಶಿಸಿ ಪುಳಕಿತರಾಗಿ, ಪಾವನರಾಗಿ, ಧನ್ಯ ರಾಗುತ್ತಾ ಈ ಉತ್ಸವವನ್ನು ಮತ್ತೆ ಮತ್ತೆ ನೋಡಬೇಕೆಂಬ ಆಸೆಯಿಂದ ತೆರಳುತ್ತಾರೆ.

ಉತ್ಸವವೆಂದರೆ ಒಂದು ಮಹಾಯಜ್ಞವನ್ನು ಮಾಡಿದಂತೆ. ಈ ಯಜ್ಞದಿಂದಾಗಿ ಅತ್ತ ದೇವತಾಪ್ರೀತಿ, ಇತ್ತ ಮಾನವರಾದ ನಮಗೆ ಸಂತೃಪ್ತಿಯು ಉಂಟಾಗುತ್ತದೆ. ಶ್ರೀ ಭಗವದ್ರಾಮಾನುಜರು ಪುಣ್ಯಕ್ಷೇತ್ರವಾದ ತಿರುಮಲೆಯ ಪರ್ವತವನ್ನು ಪಾದಗಳಿಂದ ಸ್ಪರ್ಶಿಸಿದರೂ ಪಾಪವು ಬರುತ್ತದೆಂದು ಭಾವಿಸಿ ಮೊಣಕಾಲುಗಳಿಂದ ಈ ಪರ್ವತವನ್ನು ಹತ್ತಿದರಂತೆ! ಅದಕ್ಕೆ ಈ ಸಪ್ತಗಿರಿಗಳು ಅತ್ಯಂತ ಪವಿತ್ರತೆಯನ್ನು ಹೊಂದಿದೆ. ತಿರುಮಲೆಯಲ್ಲಿ ಇರುವಾಗ ನಮ್ಮ ಆಚಾರ ವ್ಯವಹಾರಗಳನ್ನು ಪಾಲಿಸಬೇಕು. ಆಲಯದ ಪರಿಸರಗಳಲ್ಲಿ ನಡೆದಾಡುವಾಗ ಪಾದರಕ್ಷೆಗಳನ್ನು ಬಳಸದೇ "ಗೋವಿಂದ " ನಾಮವನ್ನು ಮೌನವಾಗಿ ಜಪಿಸಬೇಕು. ಶುಚಿ, ಶುಭ್ರತೆಯಿಂದ ಶ್ರೀಹರಿಯನ್ನು ಮನಸಾರ ಧ್ಯಾನಿಸುತ್ತಾ ದೇವಾಲಯದೊಳಗೆ ಪ್ರವೇಶಿಸಬೇಕು. ಕೋಟ್ಯಾಂತರ ಭಕ್ತರು ತಿರುಮಲೆಗೆ ಶ್ರೀಹರಿಯ ದರ್ಶನಕ್ಕಾಗಿ ಅಲ್ಲದೇ ಇತರ ಉದ್ದೇಶ್ಯಗಳಿಂದ ಅಲ್ಲಿಗೆ ಹೋಗಬಾರದು. ತಿರುಮಲೆಯ ದೇವದೇವನ ಸಂದರ್ಶನ ಸರ್ವ ಪಾಪಹರವಾದುದು.

ಪವಿತ್ರತೆ ಎಂದರೆ "ಪರಮಾತ್ಮ" ನ ನಿಲಯವೆಂದು ಅರ್ಥ. ಅದಕ್ಕೆ ತಿರುಮಲೆಯ ಕ್ಷೇತ್ರವನ್ನು ಪರಿಶುದ್ಧವಾಗಿರಿಸುವುದು ನಮ್ಮ ಜವಾಬ್ದಾರಿ. ಎಲ್ಲೆಂದರಲ್ಲಿ ಪ್ಲಾಸ್ಟಿಕ್, ಕಸಗಳನ್ನು ಎಸೆಯುವಂತಹಾ ಕೆಲಸಗಳನ್ನು ಮಾಡಬಾರದು. ಲಕ್ಷಾಂತರ ಭಕ್ತರು ಒಂದೇ ಕಡೆ ಸೇರಿದರೂ ತಿರುಮಲೆಯ ಪ್ರದೇಶಗಳನ್ನು ಶುಭ್ರವಾಗಿ ಇದೆಯೋ ಎಂದು ಎಲ್ಲರೂ ಆಶ್ಚರ್ಯ ಪಡುವಂತೆ ನಾವು ಪ್ರಯತ್ನಿಸೋಣ.

ಆ ಬ್ರಹ್ಮಾಂಡನಾಯಕನ ಸಾಲಕಟ್ಲ ಬ್ರಹ್ಮೋತ್ಸವಗಳಲ್ಲಿ ಭಕ್ತರೆಲ್ಲರೂ ಪಾಲ್ಗೊಂಡು ಸ್ವಾಮಿಯ ಕೃಪಾಕಟಾಕ್ಷಕ್ಕೆ ಪಾತ್ರರಾಗೋಣ.

ವಿನಾವೇಂಕಟೇಶಂ ನನಾಥೋ ನನಾಥೋ

ಸದಾ ವೇಂಕಟೇಶಂ ಸ್ಮರಾಮಿ ಸ್ಮರಾಮಿ

ಗೋವಿಂದಾ !ಗೋವಿಂದಾ!! ಗೋವಿಂದಾ!!



ಓಂ ಸಹಸ್ರಶೀರ್ಷಾಪುರುಷಃ। ಸಹಸ್ರಾಕ್ಷಃಸಹಸ್ರಪಾತ್।
ಸ ಭೂಮಿಂ ವಿಶ್ವತೋವೃತ್ವಾ! ಅತ್ಯತಿಷ್ಠ ದ್ದಶಾಂಗುಲಮ್॥

ಆ ಪರಮ ಪುರುಷನಿಗೆ ಸಹಸ್ರಾರು (ಅನಂತ) ಮಸ್ತಕಗಳು, ಸಹಸ್ರಾರು ನೇತ್ರಗಳು ಮತ್ತು ಸಹಸ್ರಾರು ಚರಣಗಳು, ಆತ ಈ ಸಂಪೂರ್ಣ ವಿಶ್ವದ ಸಮಸ್ತ ಭೂಮಿಯನ್ನು

# ಪರಮ ಪುರುಷ ಶ್ರೀ ವಿಷ್ಣು ಸ್ತವನ

- ಮೂರ್ತಿ ರಾಮನಾಥಪುರ
99720 64322

ಎಲ್ಲೆಡೆಯಿಂದ ವ್ಯಾಪಿಸಿ ಇದರಿಂದ ಹತ್ತು ಅಂಗುಲ (ಅನಂತಯೋಜನ) ಮೇಲಿದ್ದಾನೆ. ಅಂದರೆ ಅವನು ಬ್ರಹ್ಮಾಂಡದಲ್ಲಿ ವ್ಯಾಪಿಸಿದ್ದೂ ಬೇರೆಯೇ ಇದ್ದಾನೆ.

ಪುರುಷ ಏವೇದಗ್ಂ ಸರ್ವಮ್ ಯದ್ಭೂತಂ ಯಚ್ಚ ಭವ್ಯಮ್।
ಉತಾಮೃತತ್ವಸ್ಯೇಶಾನಃ ಯದನ್ನೇನಾತಿರೋಹತಿ॥

-ಇದು ಈಗಲಾದರೋ ವರ್ತಮಾನ (ಜಗತ್ತು) ಕಳೆದು ಹೋದದ್ದು ಮತ್ತು ಮುಂದೆ ಆಗುವಂತಹದು-ಅವೆಲ್ಲವೂ ಪರಮ ಪುರುಷವೇ ಇದರ ಹೊರತು ಆತ ದೇವತೆಗಳ ಹಾಗೂ ಯಾವ ಆಹಾರ ದಿಂದ (ಭೋಜನದ ಮೂಲಕ) ಬದುಕಿದ್ದಾರೋ ಅವರೆಲ್ಲರಿಗೂ ಭಗ ವಂತನೇ (ಅಧೀಶ್ವರ).

ಏತಾವಾನಸ್ಯ ಮಹಿಮಾ। ಅತೋ ಜ್ಯಾಯಾಗ್ಶ್ಚ ಪೂರುಷಃ।
ಪಾದೋಽಸ್ಯ ವಿಶ್ವಾ ಭೂತಾನಿ। ತ್ರಿಪಾದಸ್ಯಾಮೃತಂ ದಿವಿ॥

ಈ ಭೂತ, ಭವಿಷ್ಯ,ವರ್ತಮಾನಕ್ಕೆ ಸಂಬಂಧಿಸಿದ ಸಮಸ್ತ ಜಗತ್ತು ಈ ಪರಮಪುರುಷನ ವೈಭವ, ಆತ ತನ್ನ ಈ ವಿಭೂತಿ ವಿಸ್ತಾರ ದಿಂದಲೇ ಮಹಾನ್ ಆಗಿದ್ದಾನೆ. ಆ ಭಗವಂತನ ಏಕಪಾದ್ವಿಭೂತಿ (ನಾಲ್ಕನೆಯ ಒಂದು ಭಾಗ)ಯಲ್ಲಿಯೇ ಈ ಪಂಚಭೂತಾತ್ಮಕ ಜಗ ತ್ತಿದೆ. ಅವನ ಉಳಿದ ಮೂರನೆಯ ಒಂದು ಭಾಗದಲ್ಲಿ ಶಾಶ್ವತ ದಿವ್ಯ ಲೋಕ. (ವೈಕುಂಠ, ಗೋಲೋಕ, ಸಾಕೇತ, ಶಿವಲೋಕ ಇತ್ಯಾದಿ) ಗಳಿವೆ.

ತ್ರಿಪಾದೂರ್ಧ್ವ ಉದೈತ್ಪುರುಷಃ। ಪಾದೋಽಸ್ಯೇಹಾಭವಾತ್ಪುನಃ।
ತತೋ ವಿಷ್ವಙ್ಗ್ವ್ಯಕ್ರಾಮತ್। ಸಾಶನಾನಶನೇ ಅಭಿ॥

ಆ ಪರಮ ಪುರುಷ ಸ್ವರೂಪತಃ ಈ ಮಾಯೆಯ ಜಗತ್ತಿನಿಂದ ಬೇರೆಯಾಗಿ ತ್ರಿಪಾದ್ವಿಭೂತಿಯಲ್ಲಿ ಪ್ರಕಾಶಮಾನನಾಗಿದ್ದಾನೆ. (ಅಲ್ಲಿ ಮಾಯೆಯ ಪ್ರವೇಶವಿಲ್ಲದ್ದರಿಂದ ಅವನ ಸ್ವರೂಪ ನಿತ್ಯ ಪ್ರಕಾಶಮಾನ ವಾಗಿದೆ).ಈ ವಿಶ್ವದ ರೂಪದಲ್ಲಿ ಅವನ ಒಂದು ಪಾದವೇ ಪ್ರಕಟವಾಗಿ ರುವುದು. ಅಂದರೆ,ಒಂದು ಪಾದದಿಂದ ಆತ ವಿಶ್ವರೂಪನೂ ಹೌದು, ಅವನೇ ಸಂಪೂರ್ಣ ಜಡ ಹಾಗೂ ಚೇತನಮಯ ಉಭಯಾತ್ಮಕ ಜಗತ್ತನ್ನು ಪರಿವ್ಯಾಪ್ತಿಗೊಳಿಸಿಕೊಂಡಿದ್ದಾನೆ.

ತಸ್ಮಾದ್ವಿರಾಯಜಾಯತ। ವಿರಾಜೋ ಅಧಿ ಪುರುಷಃ।
ಸ ಜಾತೋ ಅತ್ಯರಿಚ್ಯತ। ಪಶ್ಚಾದ್ಭೂಮಿಮಥೋ ಪುರಃ॥

ಆ ಆದಿ ಪುರುಷನಿಂದಲೇ ವಿರಾಟ್ (ಬ್ರಹ್ಮಾಂಡ) ಉತ್ಪನ್ನವಾಗಿರು ವುದು. ಆ ಪರಮಪುರುಷನೇ ವಿರಾಟ್‌ನ ಅಧಿಪುರುಷ-ಅಧಿದೇವತೆ (ಹಿರಣ್ಯ ಗರ್ಭ) ರೂಪದಿಂದ ಉತ್ಪನ್ನನಾಗಿ ಅತ್ಯಂತ ಪ್ರಕಾಶಿತನಾಗಿದ್ದಾನೆ. ಹಿಂದೆ ಆತ ಭೂಮಿ (ಲೋಕಾದಿ) ಹಾಗೂ ಶರೀರ (ದೇವ, ಮಾನವ, ತಿರ್ಯಕ್ ಮುಂತಾದ) ಗಳನ್ನು ಉತ್ಪನ್ನ ಗೊಳಿಸಿದ.

ತಸ್ಮಾದ್ಯಜ್ಞಾತ್ಸ ರ್ವಹುತಃ। ಸಂಭೃತಂ ಪೃಷದಾಜ್ಯಮ್।
ಪಶೂಗ್‌ಸ್ತಾಗ್‌ಶ್ಚಕ್ರೇವಾಯವ್ಯಾನ್ ಆರಣ್ಯಾ ನ್‌ಗ್ರಾಮ್ಯಾಶ್ಚಯೇ॥

ಯಾವುದರಲ್ಲಿ ಎಲ್ಲವನ್ನು ಹವನ ಮಾಡಿದೆಯೋ ಆ ಯಜ್ಞ ಪುರುಷನಿಂದ ಆತನೇ ಮೊಸರು,ತುಪ್ಪ ಇತ್ಯಾದಿ ಉತ್ಪನ್ನಗೊಳಿಸಿದ. ಅಲ್ಲದೆ ಗಾಳಿಯಲ್ಲಿ ಕಾಡಿನಲ್ಲಿ ಹಾಗೂ ಗ್ರಾಮದಲ್ಲಿ ವಾಸಿಸಲು ಅರ್ಹವಾದ ಪ್ರಾಣಿಗಳನ್ನು ಸೃಷ್ಟಿಸಿದ.

ತಸ್ಮಾದ್ಯಜ್ಞಾತ್ಸರ್ವಹುತಃ। ಋಚ ಸ್ಸಾಮಾನಿ ಜಜ್ಞಿರೇ।
ಛಂದಾಗ್ಂಸಿ ಜಜ್ಞಿರೇ ತಸ್ಮಾತ್ಯಜುತಸ್ಮಾತ್ಅಜಾಯತ ॥

ಅದೇ ಸರ್ವಹುತ ಯಜ್ಞ ಪುರುಷನಿಂದ ಋಗ್ವೇದ ಮತ್ತು ಸಾಮ ವೇದಗಳ ಮಂತ್ರಗಳು ಹುಟ್ಟಿದವು. ಅವನಿಂದಲೇ ಯಜುರ್ವೇದ ಮಂತ್ರಗಳು ಸೃಷ್ಟಿಯಾದದ್ದಲ್ಲದೆ ಎಲ್ಲ ಛಂದಸ್ಸುಗಳೂ ಸಹ ಹುಟ್ಟಿದವು.

ತಸ್ಮಾದಶ್ವಾ ಅಜಾಯಂತ ಯೇ ಕೇ ಚೋಭಯಾದತಃ
ಗಾವೋ ಹ ಜಜ್ಞಿರೇ ತಸ್ಮಾತ್। ತಸ್ಮಾತ್ಜ್ಞಾತಾ ಅಜಾವಯಃ॥

- ಅವನಿಂದಲೇ ಕುದುರೆಗಳು ಹುಟ್ಟಿದ್ದು, ಅವನಿಂದಲೇ ಗೋವುಗಳು ಹುಟ್ಟಿದವು. ಆಡು, ಕುರಿಗಳೂ ಸಹ ಅವನಿಂದಲೇ ಹುಟ್ಟಿದವು. ಅವು ಎರಡು ಕಡೆಯೂ ಹಲ್ಲುಳ್ಳ ಜೀವಿಗಳು.

( ಮುಂದುವರೆಯುತ್ತದೆ )



# ತಿರುಮಲೆಯಲ್ಲಿ ಬ್ರಹ್ಮೋತ್ಸವದ ವಿವಿಧ ವಾಹನೋತ್ಸವಗಳು

ಪ್ರಪಂಚದ ಒಡೆಯ ಶ್ರೀನಿವಾಸನಿಗೆ ನಾವು ವಿವಿಧ ಉತ್ಸವಗಳನ್ನು ನವರಾತ್ರಿಯಲ್ಲಿ ಮಾಡಿ ಸಂಭ್ರಮಿಸುತ್ತೇವೆ. ದೇವರ ಮದುವೆಯನ್ನು ಮಾಡಿ ನಮಗೆ ಕಲ್ಯಾಣ ಮಾಡೆಂದು ಪ್ರಾರ್ಥನೆಯನ್ನು ಮಾಡಿ ಬೇಡಿಕೊಳ್ಳುತ್ತೇವೆ. ಇಂತಹ ಸುಂದರವಾದ ಉತ್ಸವದಲ್ಲಿ ಪ್ರತಿ ದಿನ ಮುಂಜಾನೆ ಮತ್ತು ಸಂಜೆಯ ಹೊತ್ತಿನಲ್ಲಿ 7 ದಿನ ವಿವಿಧ ವಾಹನಗಳ ಉತ್ಸವವನ್ನು ನಡೆಸುತ್ತಾರೆ. ಎಂಟನೇ ದಿನ ಬ್ರಹ್ಮರಥೋತ್ಸವ ಮತ್ತು ದಶಮಿಯ ದಿನ ಪಲ್ಲಕ್ಕಿ ಉತ್ಸವ ಮತ್ತು ಚಕ್ರ ಸ್ನಾನವನ್ನು ಮಾಡಿ ನವರಾತ್ರೋತ್ಸವ ಮಾಡುತ್ತಾರೆ.

ಪ್ರತಿಯೊಂದು ವಾಹನಕ್ಕೂ ಅದರದೇ ಆದ ಮಹತ್ವ ಇದೆ. ಶೇಷವಾಹನ, ಗರುಡವಾಹನ, ಸಿಂಹವಾಹನ, ಗಜವಾಹನ, ಅಶ್ವವಾಹನ, ಹಂಸವಾಹನ, ಮುತ್ತಿನ ಅಲಂಕಾರದ ವಾಹನ, ಕಲ್ಪವೃಕ್ಷವಾಹನ, ಸರ್ವಭೂಪಾಲವಾಹನ, ಮೋಹಿನ ಅವತಾರ,ಬಂಗಾರದ ರಥೋತ್ಸವ,ಹನುಮಂತವಾಹನ, ಪುಷ್ಪಕವಾಹನ, ಸೂರ್ಯಪ್ರಭವಾಹನ, ಚಂದ್ರಪ್ರಭವಾಹನ ಮಾಡುತ್ತಾರೆ.

ಎಲ್ಲ ವಾಹನಗಳದ್ದೂ ಅದರದೇ ಆದ ವಿಶೇಷತೆ ಇರುತ್ತದೆ. ಇಲ್ಲಿ ದೇವರಿಗೆ ಎಲ್ಲ ಜೀವವಿರುವ ಪ್ರಾಣಿ, ಪಕ್ಷಿ, ಮನುಷ್ಯರು ಮತ್ತು ದೇವತೆಗಳು ಎಲ್ಲರೂ ತಮ್ಮ ಸೇವೆ ಮಾಡುವುದನ್ನು ಗಮನಿಸಬಹುದು.





# ಋಷಿ ಪಂಚಮಿ



**ಶ್ರೀಮತಿ. ಮಾಧುರಿ ದೇಶಪಾಂಡೆ**
**94810 70245**

ಋಷಿಪಂಚಮಿಯು ಭಾದ್ರಪದ ಶುಕ್ಲ ಪಕ್ಷದ ಪಂಚಮಿಯಂದು ಬರುತ್ತದೆ. ಪ್ರತಿ ವರ್ಷ ಗಣೇಶ ಚತುರ್ಥಿಯ ಮಾರನೆಯ ದಿನ ಈ ವ್ರತವನ್ನು ಮುತ್ತೈದೆತನಕ್ಕಾಗಿ ಆಚರಿಸುತ್ತಾರೆ. ಸಪ್ತರ್ಷಿಗಳ ಪೂಜೆಯಾಗಿದ್ದು ನದೀ ತೀರದಲ್ಲಿ ಅಥವಾ ಮನೆಯಲ್ಲಿಯೇ ನದಿ ತೀರದಲ್ಲಿ ಸಿಗುವ 7 ಕಲ್ಲುಗಳನ್ನು ಋಷಿಗಳ ರೂಪದಲ್ಲಿಟ್ಟುಕೊಂಡು ಪೂಜಿಸುತ್ತಾರೆ. 50 ವರ್ಷ ಆದ ಅಂದರೆ ಋತುಬಂಧ ಆದ ಹೆಣ್ಣು ಮಕ್ಕಳು ಮತ್ತು ಪುರುಷರು ಮನೆಯಲ್ಲಿ ತಮ್ಮ ತಾಯಿ ಅಥವಾ ಅಜ್ಜಿಗೆ ಆಗದೇ ಹೋದ ಪಕ್ಷದಲ್ಲಿ ಅವರ ಪರವಾಗಿ ಈ ವ್ರತವನ್ನು ಆಚರಿಸುತ್ತಾರೆ.

ಋಷಿ ಪಂಚಮಿಯ ವ್ರತವನ್ನು ನದೀ ತೀರದಲ್ಲಿ ಮಾಡುವ ಕಾರಣ ಆ ದಿನ 108 ತಂಬಿಗೆ ನೀರನ್ನು ಸ್ನಾನ ಮಾಡಬೇಕು. ಹಿಂದಿನ ಕಾಲದಲ್ಲಿ ಮನೆಗೆ ಬಾವಿಯಿಂದ ಅಷ್ಟೊಂದು ನೀರು ತಂದು ಮಾಡುವುದು ಶ್ರಮವಾಗುವುದು ಮತ್ತು ನದೀ ತೀರದಲ್ಲಿ ಪ್ರಾಕೃತಿಕ ಅನುಕೂಲತೆಗಳೂ ಹೂವು, ಹಣ್ಣು ಜೊತೆಗೆ ಪ್ರಶಾಂತವಾದ ವಾತಾವರಣ ಇರುವ ಕಾರಣ ಅಲ್ಲಿಯೇ ಮಾಡಲು ಬಯಸುತ್ತಿದ್ದರು. ಒಟ್ಟು ಏಳು ವರ್ಷ ವ್ರತವನ್ನು ಮಾಡಬೇಕು. ಮೊದಲಿಗೆ ಮಧ್ಯದಲ್ಲಿ ಅಥವಾ ಕೊನೆಗೆ ಯಾವಾಗಲಾದರೂ ಒಮ್ಮೆ ಉದ್ಯಾಪನೆಯನ್ನು ಮಾಡಬೇಕು.

ವ್ರತದ ಹಿನ್ನೆಲೆ ಮತ್ತು ಮಹತ್ವ ಒಮ್ಮೆ ಧರ್ಮ ರಾಜನು ಶ್ರೀ ಕೃಷ್ಣ ಪರಮಾತ್ಮನಿಗೆ ಎಲ್ಲ ಪಾಪಗಳನ್ನು ಕಳೆಯುವ ವ್ರತದ ಬಗೆಗೆ ಕೇಳಿದನು ಆಗ ಶ್ರೀ ಕೃಷ್ಣ ಪರಮಾತ್ಮನು ಯುಧಿಷ್ಠಿರನಿಗೆ ಹೇಳುತ್ತಾನೆ. ಮಹಿಳೆಯರು ಮಾಡಬಹುದಾದ ಎಲ್ಲ ಪಾಪಗಳನ್ನು ಕಳೆಯುವ ಋಷಿಪಂಚಮಿ ವ್ರತ ಕಥೆ.

ಮಹಿಳೆಯರು ರಜಸ್ವಲಾ ಸಮಯದಲ್ಲಿ ಮನೆಯ ಯಾವ ಪದಾರ್ಥವನ್ನು ಮುಟ್ಟುವ ಹಾಗಿರುವುದಿಲ್ಲ. ತಿಳಿದು ತಿಳಿಯದೆಯೋ ರಜಸ್ವಲೆಯಾದಾಗ ಮನೆಯ ಪಾತ್ರೆ ಪಡಗಗಳನ್ನು ಸಾಮಾನುಗಳನ್ನು ಮುಟ್ಟಿದರೆ ಉಂಟಾಗುವ ಪಾಪ ಪರಿಹಾರಕ್ಕೆ ಋಷಿ ಪಂಚಮಿ ವ್ರತವನ್ನು ಮಾಡುತ್ತಾರೆ. ಋಷಿ ಪಂಚಮಿ ಕತೆಯೇನೆಂದರೆ ವಿದರ್ಭದಲ್ಲಿ ಶೇನಜಿತ್ ಎಂಬ ರಾಜನಿದ್ದ ಅವನ ರಾಜ್ಯದಲ್ಲಿ ಸುಮಿತ್ರ ಎಂಬ ಬ್ರಾಹ್ಮಣನು ತನ್ನ ಹೆಂಡತಿ ಜಯಶ್ರೀ ಜೊತೆಗೆ ಇರುತ್ತಿದ್ದ ಒಮ್ಮೆ ರಜಸ್ವಲೆಯಾದಾಗ ಅವಳು ಯಾರಿಗೂ ಹೇಳದೆ ತನ್ನ ಮನೆಯ ಕೆಲಸಗಳನ್ನು ಮಾಡಿದ್ದಳು ಆ ಜನ್ಮ ಮುಗಿದು ಸತ್ತ ನಂತರ ಅವರಿಬ್ಬರೂ ತಮ್ಮ ಮಗ ಮನೆಯಲ್ಲಿ ನಾಯಿ ಮತ್ತು ಎತ್ತುಗಳಾಗಿ ಹುಟ್ಟುತ್ತಾರೆ.

ಒಂದು ದಿನ ಮಗ ಸುಮತಿ ಮನೆಯಲ್ಲಿ ಶ್ರಾದ್ಧ ಕಾರ್ಯವನ್ನು ಮಾಡುತ್ತಲಿದ್ದ ಆಗ ಅವನ ಹೆಂಡತಿ ಚಂದ್ರವತಿ ಬ್ರಾಹ್ಮಣರಿಗೆ ಭೋಜನವನ್ನು ತಯಾರಿಸಿದ್ದಳು ಆದರೆ ಆ ಅಡುಗೆಯ ಪಾಯಸದಲ್ಲಿ ಹಾವಿನ ವಿಷ ಬಿದ್ದಿತು ಇದನ್ನು ನೋಡಿ ನಾಯಿ ರೂಪದಲ್ಲಿದ್ದ ಜಯಶ್ರೀ ಆ ಭೋಜನವನ್ನು ಮುಟ್ಟಿಬಿಡುತ್ತಾಳೆ ಏಕೆಂದರೆ ಮಗನಿಗೆ ಬ್ರಹ್ಮ ಹತ್ಯಾ ದೋಷ ಉಂಟಾಗಬಾರದು ಎಂಬ ಕಾರಣದಿಂದ ಆ ದೃಶ್ಯವನ್ನು ನೋಡಿದ ಸೊಸೆ ನಾಯಿ ಮತ್ತು ಎತ್ತಿನ ರೂಪದಲ್ಲಿದ್ದ ಅತ್ತೆ ಮಾವನಿಗೆ ಏನನ್ನೂ ಕೊಡಲಿಲ್ಲ. ಉಪವಾಸವಿದ್ದ ನಾಯಿ ಮತ್ತು ಎತ್ತು ಇಂದು ಮನೆಯಲ್ಲಿ ಶ್ರಾದ್ಧ ಮಾಡಿದರೂ ನಮಗೆ ತಿನ್ನಲು ಮಗ ಏನನ್ನೂ ಕೊಡಲಿಲ್ಲ ಎಂದು ಮಾತನಾಡಿಕೊಳ್ಳುತ್ತಿರುವುದನ್ನು ಕೇಳಿಸಿಕೊಂಡು ಸುಮತಿ ಋಷಿಗಳ ಬಳಿ ಹೋಗಿ ತಂದೆ ತಾಯಿಯ ಈ ಪರಿಸ್ಥಿತಿಗೆ ಕಾರಣ ಮತ್ತು ಈ ಯೋನಿ ಯಿಂದ ಮುಕ್ತಿಯ ಮಾರ್ಗವನ್ನು ಕೇಳಿದಾಗ ಆ ಋಷಿಗಳು ಈ ಋಷಿ ಪಂಚಮಿ ವ್ರತವನ್ನು ಮಾಡುವ ಬಗೆಯನ್ನು ಹೇಳುತ್ತಾರೆ.

ಹೀಗೆ ಋಷಿಗಳ ಪೂಜೆಯ ವಿಧಾನವನ್ನು ತಿಳಿದು ಬಂದು ತಂದೆ ತಾಯಿಯ ಮುಕ್ತಿಗಾಗಿ ಈ ವ್ರತವನ್ನು ಆಚರಿಸುತ್ತಾನೆ.

ಋಷಿ ಪಂಚಮಿಯ ದಿನ ಬಿಳಿ ಬಟ್ಟೆಯುಟ್ಟು ಪೂಜೆಯನ್ನು ಮಾಡಬೇಕು. ಬಿಳಿಯಾದ ಪದಾರ್ಥಗಳನ್ನು ಮಾತ್ರ ಸೇವಿಸಬೇಕು. ಆದರೆ ಊಟ ಮಾಡದೇ ಪೂಜಿಸಬೇಕು ಬೆಳಗ್ಗಿನ ಜಾವದಲ್ಲಿ ಪೂಜೆಯನ್ನು ಮಾಡಬೇಕು. ಮಾರನೆಯ ದಿನ ಬ್ರಾಹ್ಮಣರಿಗೆ ಭೋಜನ ಮಾಡಿಸಿ ತಾವೂ ಕೂಡ ಊಟವನ್ನು ಮಾಡಬೇಕು.



# ಭಾದ್ರಪದ ಮಾಸದ ವ್ರತಃ ಗೌರಿ ವ್ರತ



- ಹನುಮಂತ.ಮ. ದೇಶಕುಲಕರ್ಣಿ
94803 64915

ಗೌರಿ ಹಬ್ಬಕ್ಕೆ ವಿಶೇಷ ಸ್ಥಾನವಿದ್ದು, ಗೌರಿ ಇಂದು ಭೂಮಿಗೆ ಬರುತ್ತಾಳೆ ಎಂಬ ನಂಬಿಕೆಯಿದ್ದು ಗೌರಿಯನ್ನು ಭೂಮಿಯಲ್ಲಿ ಸ್ವಾಗತಿಸಲು ಗಣೇಶ ಬರುತ್ತಾನೆಂಬ ಪ್ರತೀತಿಯಿದೆ.ಎಲ್ಲಾ ದೇವತೆಗಳಿಗಿಂತ ಶಕ್ತಿಶಾಲಿ ದೇವತೆಯಾದ ಗೌರಿ ಆದಿ ಶಕ್ತಿ ಮಹಾಮಾಯಾ ಅವತಾರವೆಂದು ಪರಿಗಣಿಸಲಾಗಿದೆ.

ಭಾದ್ರಪದ ಮಾಸದ ತದಿಗೆಯ 13 ನೇ ದಿನ ಗೌರಿಯನ್ನು ತನ್ನ ತಂದೆ, ತಾಯಿಗಳ ಮನೆಗೆ ಸ್ವಾಗತಿಸಲಾಗುತ್ತದೆ. ಮರುದಿನ ಗೌರಿಯ ಪುತ್ರ ಗಣೇಶ ತಾಯಿಯನ್ನು ಕೈಲಾಸಕ್ಕೆ ಕರೆದುಕೊಂಡು ಹೋಗಲು ಭೂಮಿಗೆ ಆಗಮಿಸುತ್ತಾನೆ. ಸ್ವರ್ಣ ಗೌರಿವ್ರತವನ್ನು ಈ ಸಂದರ್ಭದಲ್ಲಿ ಗೌರಿಯನ್ನು ತೃಪ್ತಿ ಪಡಿಸಲು ಆಚರಿಸಲಾಗುತ್ತದೆ.

ಗೌರಿ ಹಬ್ಬವನ್ನು ಗಣೇಶ ಚತುರ್ಥಿಗೆ ಮುಂಚಿನ ದಿನ ಆಚರಿಸಲಾಗುತ್ತದೆ. ಗಣೇಶ ಮತ್ತು ಸುಬ್ರಹ್ಮಣ್ಯನ ತಾಯಿ ಭಗವಾನ್ ಶಿವನ ಪತ್ನಿ ಗೌರಿ ತನ್ನ ಭಕ್ತರಿಗೆ ಶಕ್ತಿ, ಧೈರ್ಯ ತುಂಬುವ ಸಾಮರ್ಥ್ಯದಿಂದ ಪೂಜೆಗೆ ಅರ್ಹಳಾಗಿದ್ದಾಳೆ.ವಿವಾಹಿತ ಮಹಿಳೆಯರು ತಮ್ಮ ಪತಿಯ ದೀರ್ಘಾ ಯುಷ್ಯಕ್ಕಾಗಿ, ಅವಿವಾಹಿತ ಹುಡುಗಿಯರು ಉತ್ತಮ ಪತಿಯನ್ನು ಪಡೆಯುವುದಕ್ಕಾಗಿ ಗೌರಿ ಹಬ್ಬವನ್ನು ಆಚರಿಸುತ್ತಾರೆ.



ಈ ದಿನ ಹಿಂದೂ ಮಹಿಳೆಯರು ಮತ್ತು ಯುವತಿಯರು ಸಾಂಪ್ರದಾಯಿಕ ಉಡುಗೆ ತೊಡುಗೆ ಧರಿಸುತ್ತಾರೆ. ಅವರು ಜಲಗೌರಿ ಅಥವಾ ಅರಿಶಿನ ಗೌರಿಯ ಮೂರ್ತಿಗೆ ಪೂಜೆ ನೆರವೇರಿಸುತ್ತಾರೆ.ಗೌರಿ ಮೂರ್ತಿಯನ್ನು ಅಕ್ಕಿ ಅಥವಾ ಗೋದಿ ಧಾನ್ಯದೊಂದಿಗೆ ತಟ್ಟೆಯಲ್ಲಿರಿಸಲಾಗುತ್ತದೆ. ವ್ರತದ ಪ್ರಕಾರ ಶುಚಿ ಮತ್ತು ಶ್ರದ್ಧೆಯಿಂದ ಪೂಜೆ ನೆರವೇರಿಸಲಾಗುತ್ತದೆ.

### ಗೌರಿ ವ್ರತ :

ಮಹಿಳೆಯರು 16 ಗಂಟುಗಳ ಪವಿತ್ರ ಗೌರಿ ದಾರವನ್ನು ತಮ್ಮ ಬಲಗೈಗೆ ಕಟ್ಟಿಕೊಳ್ಳುತ್ತಾರೆ. ಇದು ಗೌರಿಯ ಆಶೀರ್ವಾದವೆಂದು ಭಾವಿಸುತ್ತಾರೆ. ವ್ರತದ ಅಂಗವಾಗಿ 5 ಬಾಗಿನಗಳನ್ನು ಅರ್ಪಿಸಲಾಗುತ್ತದೆ. ಪ್ರತಿ ಬಾಗಿನವು ಅರಿಶಿನ, ಕುಂಕುಮ, ಕಪ್ಪು ಬಳೆಗಳು,ಕಪ್ಪು ಮಣಿಗಳು, ಬಾಚಣಿಗೆ, ಸಣ್ಣ ಕನ್ನಡಿ, ತೆಂಗು, ಬ್ಲೌಸ್ ಪೀಸ್, ಧಾನ್, ಅಕ್ಕಿ, ಗೋಧಿರವೆ, ಬೆಲ್ಲ ಮುಂತಾದವು ಒಳಗೊಂಡಿರುತ್ತದೆ. ಒಂದು ಬಾಗಿನವನ್ನು ಗೌರಿ ದೇವತೆಗೆ ಅರ್ಪಿಸಲಾಗುತ್ತದೆ. ಉಳಿದ ಗೌರಿ ಬಾಗಿನಗಳನ್ನು ಮುತ್ತೈದೆಯರಿಗೆ ನೀಡಲಾಗುತ್ತದೆ. ಗೌರಿ ಹಬ್ಬದ ಇನ್ನೊಂದು ವಿಶೇಷತವರು ಮನೆಯವರು ಗೌರಿ ಹಬ್ಬದ ಮಂಗಳದ್ರವ್ಯವನ್ನು ತಮ್ಮ ಕುಟುಂಬದ ವಿವಾಹಿತ ಯುವತಿಯರಿಗೆ ಕಳಿಸುತ್ತಾರೆ.

ಮಂಗಳ ದ್ರವ್ಯದ ಭಾಗವಾಗಿ ಹಣವನ್ನು ಕೂಡ ಕೆಲವರು ಕಳಿಸುತ್ತಾರೆ. ದಕ್ಷಿಣ ಭಾರತದಲ್ಲಿ ಹೋಳಿಗೆ, ಒಬ್ಬಟ್ಟು, ಪಾಯಸ, ಹುಗ್ಗಿ, ಚಿತ್ರಾನ್ನ, ಬಜ್ಜಿ, ಕೋಸಂಬರಿಯನ್ನು ಸಿದ್ಧಪಡಿಸಿ ದೇವರಿಗೆ ಅರ್ಪಿಸಲಾಗುತ್ತದೆ. ಭಗವಾನ್ ಗಣೇಶನ ಉತ್ಸವದಲ್ಲಿ ಕೂಡ ಈ ಆಚರಣೆ ಮುಂದುವರಿಯುತ್ತದೆ.

**ಶ್ರೀ ಸ್ಕಾಂದಪುರಾಣ ಕಥೆ :**

ಪ್ರಾಚೀನ ಕಾಲದಲ್ಲಿ ''ವಿಮಲಾ'' ಎಂಬ ನಗರವನ್ನು ಆಳುತ್ತಿದ್ದ ಚಂದ್ರಪ್ರಭನೆಂಬ ರಾಜನು ಬೇಟೆಗಾಗಿ ಅರಣ್ಯಕ್ಕೆ ಹೋದಾಗ ಅಲ್ಲಿ ಸುಂದರ ಸರೋವರದ ತೀರದಲ್ಲಿ ಸ್ವರ್ಣಗೌರೀ ವ್ರತವನ್ನು ಆಚರಿಸುತ್ತಿದ್ದ ಅಪ್ಸರೆಯರನ್ನು ಇದಾವ ವ್ರತವೆಂದು ಕೇಳಿದಾಗ ಆ ಸ್ತ್ರೀಯರಿತ್ತ ಉತ್ತರ

ಶ್ರುಣು ರಾಜನ್ ಪ್ರವಕ್ಷ್ಯಾಮೋ ನಭಃ ಶುಕ್ಲೇ ತೃತೀಯಕೇ।
ಆರಬ್ಧವ್ಯಂ ವ್ರತಮಿದಂ ಗೌರ್ಯಾರ್ಥ ಷೋಡಶ ವತ್ಸರಾನ್॥

ಈ ಶ್ಲೋಕ.''ಭಾದ್ರಪದ ಶುಕ್ಲದ ತದಿಗೆಯಂದು ಆರಂಭಿಸಿ ಹದಿನಾರು ಗ್ರಂಥಿಯುಳ್ಳ ದಾರದ ಜೊತೆಗೆ ಕಲಶವನ್ನು ವಿಧಿವತ್ತಾಗಿ ಸ್ಥಾಪಿಸಿ ಗೌರಿಯನ್ನು ಹದಿನಾರು ಉಪಚಾರಗಳಿಂದ ಪೂಜಿಸಿ ಹದಿನಾರು ಬಾಗಿನಗಳನ್ನು ಸುವಾಸಿನಿಯರಿಗೆ ನೀಡಿ ಹದಿನಾರು ವರ್ಷ ಕಾಲ ಈ ವ್ರತವನ್ನು ಆಚರಿಸಿ ಉದ್ಯಾಪನೆ ಮಾಡಿದರೆ ಸಕಲ ಸಂಪತ್ತುಗಳೂ ಉಂಟಾಗುತ್ತವೆ'' ಎಂದು ಸಂಕ್ಷೇಪವಾಗಿ ವ್ರತದ ಮಹಿಮೆಯನ್ನು ರಾಜನಿಗೆ ಅಪ್ಸರೆಯರು ತಿಳಿಸುತ್ತಾರೆ.

ರಾಜನು ಅವರ ಮಾತನ್ನು ಕೇಳಿ ವ್ರತವನ್ನು ಮಾಡಿ ಪವಿತ್ರ ದಾರವನ್ನು ಧರಿಸಿ ತನ್ನ ಪಟ್ಟಣಕ್ಕೆ ಹೋದನು. ದೊರೆಯ ಮೊದಲ ಪತ್ನಿ 'ಮಹಾದೇವಿ'ಯು ದುರಹಂಕಾರದಿಂದ ರಾಜನ ತೋಳಿನ ದಾರವನ್ನು ಕಿತ್ತು ಬಿಸುಟಳು. ಅದು ಒಣಗಿದ ಮರದ ಮೇಲೆ ಬಿದ್ದಾಗ ಅದರ ಮಹಿಮೆಯಿಂದ ಮರ ಚಿಗುರಿದ್ದನ್ನು ಕಂಡು ಕಿರಿಯ ಪತ್ನಿ 'ಬಲಾ' ಎನ್ನುವವಳು ಆ ದಾರವನ್ನು ತಾನು ಧರಿಸಿದಳು. ಆ ಪವಿತ್ರ ದಾರದ ಬಲದಿಂದ ಅವಳು ರಾಜನಿಗೆ ಪ್ರೀತಿಪಾತ್ರಳಾದಳು.

ಮೊದಲ ಪತ್ನಿಯು ಮಾನಸಿಕ ಕ್ಲೇಶಕ್ಕೆ ಒಳಗಾಗಿ ಕಾಡಿನಲ್ಲಿ ಅಲೆಯುತ್ತಾ ಅಲ್ಲಿ ಋಷಿಗಳನ್ನು ಕಂಡು ಅವರ ಸಹಾಯದಿಂದ ಗೌರಿಯನ್ನು ಆರಾಧಿಸಿ ಕ್ಲೇಶದೋಷಗಳನ್ನು ಕಳೆದುಕೊಂಡು ಪುನಃ ಅರಮನೆಗೆ ಬಂದು ರಾಜನೊಂದಿಗೆ ವ್ರತವನ್ನು ಆಚರಿಸಿದಳು. ಅನೇಕ ವರ್ಷ ಸುಖ ಸಮೃದ್ಧಿಯಿಂದ ಪ್ರಜೆಗಳನ್ನು ಪಾಲಿಸಿ ರಾಜನು ಇಬ್ಬರೂ ಪತ್ನಿಯರೊಡನೆ ಸ್ವರ್ಗವನ್ನು ಸೇರಿದನು.



ಈ ಕಥೆಯು ಶ್ರೀಸ್ಕಾಂದಪುರಾಣದಲ್ಲಿ ಭಗವಾನ್ ಶಿವನು ಪುತ್ರನಾದ ಸ್ಕಂದನಿಗೆ ಹೇಳಿದನೆಂದೂ ಈ ವ್ರತದ ಉದ್ಯಾಪನೆಯ ವಿಧಾನವನ್ನು ಶ್ರೀ ಕೃಷ್ಣ ಪರಮಾತ್ಮನು ಯುಧಿಷ್ಠಿರನಿಗೆ ಉಪದೇಶಿಸಿದನೆಂದೂ ಉಲ್ಲೇಖವಿದೆ.

ಶ್ರಾವಣ ಮಾಸದಲ್ಲಿ ತವರಿನಿಂದ ಅರಿಶಿನ - ಕುಂಕುಮ ಹೊತ್ತ ಸಂಬಂಧಿಗಳು ಬರುವುದೂ ಪುನಃ ವ್ರತವನ್ನು ಆಚರಿಸಿದ ನಂತರ ತವರಿಗೆ ತಾಯಿ ಬಾಗಿನವನ್ನು ಕೊಡಲು ಹೆಣ್ಣುಮಕ್ಕಳು ಹೋಗುವುದೂ ಆ ಮೂಲಕ ಸಂಬಂಧವನ್ನು ಹಾರ್ದಿಕವಾಗಿ ಇಡುವುದೂ ಸಂಪ್ರದಾಯವಾಗಿದೆ.

**ಗೌರಿ ಹಬ್ಬದ ಆಚರಣೆ:**

ಮಂಟಪ ಅಥವಾ ಧಾನ್ಯಗಳಿಂದ ತುಂಬಿದ ತಟ್ಟೆ, ದೇವಿಯರನ್ನು ಅಲಂಕರಿಸಿ ಪ್ರಾರ್ಥನೆ ಸಲ್ಲಿಸಲಾಗುತ್ತದೆ. ಪ್ರಾರ್ಥನೆಗಳು ಆತ್ಮಕ್ಕೆ ಶುದ್ಧೀಕರಣವನ್ನು ತರುತ್ತವೆ ಮತ್ತು ಸಮರ್ಪಣೆ ಮತ್ತು ಏಕಾಗ್ರತೆಯನ್ನು ಪ್ರೇರೇಪಿಸುತ್ತವೆ ಎಂದು ನಂಬಲಾಗಿದೆ. ಭಾದ್ರಪದ ಮಾಸದ ತದಿಗೆಯ 13 ನೇ ದಿನ ಗೌರಿಯನ್ನು ತನ್ನ ತಂದೆ, ತಾಯಿಯ ಮನೆಗೆ ಸ್ವಾಗತಿಸಲಾಗುತ್ತದೆ. ಗೌರಿ ಹಬ್ಬವನ್ನು ಗಣೇಶ ಚತುರ್ಥಿಗೆ ಮುಂಚಿನ ದಿನ ಆಚರಿಸಲಾಗುತ್ತದೆ.

**ಗೌರಿಕುಂಡ :**

ಉತ್ತರಾಂಚಲದಲ್ಲಿರುವ ಗೌರಿಕುಂಟ ವಿಶೇಷ ಸ್ಥಾನಮಾನಗಳಿಸಿದೆ. ಗೌರಿಕುಂಡದಲ್ಲಿರುವ ಬಿಸಿನೀರಿನ ಬಗ್ಗೆ ವಿಶೇಷ ಮಹತ್ವ ಪಡೆದಿದೆ. ಈ ಬಿಸಿ ನೀರಿನ ಬುಗ್ಗೆಯಲ್ಲಿ ಗೌರಿ ಸ್ನಾನ ಮಾಡುವಾಗ ಗಣೇಶನನ್ನು ಸ್ನಾನದ ಕೋಣೆಯ ಹೊರಗೆ ನಿಲ್ಲಿಸಿದ್ದಳು. ಶಿವನು ಬಂದಾಗ ಗಣೇಶ ಶಿವನನ್ನು ಒಳಕ್ಕೆ ಬಿಡದೇ ತಡೆಯುತ್ತಾನೆ ಎಂಬ ಪೌರಾಣಿಕ ಕತೆಯಿದೆ. ಗೌರಿ ಕುಂಡದಲ್ಲಿ ಗೌರಿ ಹಬ್ಬದಂದು ಪವಾಡ ನಡೆಯುತ್ತದೆಂದು ನಂಬಿಕೆಯಿದೆ. ಭಕ್ತರ ಭಕ್ತಿಗೆ ಒಲಿದ ಗೌರಿ ತನ್ನ ಕಣ್ಣನ್ನು ತೆರೆದು ಭಕ್ತರಿಗೆ ದರ್ಶನ ನೀಡುತ್ತಾಳೆನ್ನುವುದು ಜನಜನಿತವಾಗಿದೆ.





# ಸಂಪ್ರದಾಯ ಹಾಡುಗಳಲ್ಲಿ ಲಕ್ಷ್ಮೀದೇವಿ

ಡಾ॥ ಎ. ಕುಮುದ
97319 03752

'ಸಂಪ್ರದಾಯ' ಎಂದರೆ ಗೃಹ ಧರ್ಮಕ್ಕೆ ಅನುಗುಣ ವಾಗಿ ಆಚಾರ, ವಿಚಾರ ಹಾಗೂ ನಡವಳಿಕೆಗಳನ್ನು ಅಳವಡಿಸಿ ಕೊಂಡು ಅದರಂತೆ ನಡೆಯುವುದು. ಭಾರತೀಯ ಸಮಾಜ ದಲ್ಲಿ ಪ್ರತಿಯೊಬ್ಬರೂ ಅವರವರ ಧರ್ಮವನ್ನು ಪಾಲಿಸುವುದು ಒಂದು ಕರ್ತವ್ಯ.ಅವರವರ ನಡವಳಿಕೆ, ಆಧ್ಯಾತ್ಮದಲ್ಲಿನ ಆಸಕ್ತಿ, ಆಚರಣೆ ಪರಧರ್ಮ ಸಹಿಷ್ಣತೆ, ಪ್ರಾಣಿದಯೆ, ದೇವರ ಆರಾಧನೆಯಲ್ಲಿ ಇದ್ದ ನಿಷ್ಠೆ ಇವೆಲ್ಲವೂ ತಲೆಮಾರಿನಿಂದ ತಲೆ ಮಾರಿಗೆ ವರ್ಗಾವಣೆಯಾಗಿ ಸಂಪ್ರದಾಯಗಳಾಗಿ ಉಳಿದು ಬಂದಿವೆ.

'ಪಂಚೇಂದ್ರಿಯಸ್ಯ, ದೇಹಸ್ಯ, ಬುದ್ದೇಶ್ಚ, ಮನಸ್ತಥಾ! ದ್ರವ್ಯ ದೇಶಕ್ರಿಯಾಣಾಂ ಚ ಶುದ್ಧೀರಾಚಾರ ಇಷ್ಯತೇ'॥ ಅಂದರೆ ಇಂದ್ರಿಯಗಳು, ದೇಹ, ಬುದ್ಧಿ, ಮನಸ್ಸು, ದ್ರವ್ಯ, ದೇಶ, ಕರ್ಮ ಗಳು ಶುದ್ಧವಾಗಿರುವುದಕ್ಕೆ ಆಚಾರವೆಂದು ಹೆಸರು.

ಈ ಸಂಪ್ರದಾಯಗಳು ಅವರವರ ಆಚರಣೆಗೆ ಅನು ಸಾರವಾಗಿ ಪೂಜೆ ವ್ರತ,ನೇಮ ನಿಷ್ಟೆಗಳನ್ನು ತಿಳಿಸುವ ಮಾಧ್ಯ ಮವಾಗಿದೆ. ಹಿಂದಿನವರ ಸಂಪ್ರದಾಯವನ್ನು ಸ್ತ್ರೀಯರು ತಮ್ಮದೇ ಆದ ರಾಗಗಳಲ್ಲಿ ಹಾಡಿನ ರೂಪಕ್ಕೆ ತಂದರು. ಓದು ಬರಹ ಬಾರದ ಮಹಿಳೆಯರು ಆ ಹಾಡುಗಳನ್ನು ಬಾಯಿ ಪಾಠ ಮಾಡಿ ಹಾಡುತ್ತಿದ್ದರು. ಅದು ಬಾಯಿಂದ ಬಾಯಿಗೆ ಬಂದು ಹರಿಯ ತೊಡಗಿತು.ಇದನ್ನು ಸಂಪ್ರದಾಯದ ಹಾಡುಗಳು ಎನ್ನಲಾಯಿತು.

ಸಂಪ್ರದಾಯದ ಹಾಡುಗಳು ಜನಪದ ಸಾಹಿತ್ಯದ ಒಂದು ಅಂಗವೆಂದು ಹೇಳಬಹುದು. ಈ ಹಾಡುಗಳು ಹಬ್ಬ,ಹರಿದಿನ, ವ್ರತಾಚರಣೆ,ನೇಮ, ಇವುಗಳದೇ ಒಂದು ಗುಂಪಾಯಿತು. ಮದುವೆ, ಮುಂಜಿ, ನಾಮಕರಣ, ಚೌಲ, ಬಸುರಿ-ಬಾಣಂತಿಯರ ಶಾಸ್ತ್ರದ ಹಾಡುಗಳು ಮತ್ತೊಂದು ಗುಂಪಾಯಿತು. ಮದುವೆಯ ಶಾಸ್ತ್ರದ ಹಾಡುಗಳಲ್ಲಿ ಎಣ್ಣೆಶಾಸ್ತ್ರ, ಮಲ್ಲೀರು, ಹೂವೀಳ್ಯ, ಗೋದಿಕಲ್‌ಶಾಸ್ತ್ರ,ಅರಿಸಿನ ಕುಟ್ಟುವ ಶಾಸ್ತ್ರ, ವರ ಪೂಜೆ, ಬಿಸಿಲೂಟ, ಬೀಗರ ನಿಂದನೆಯ ಹಾಡು ಗಳು, ಕನ್ಯಾ ದಾನ, ಹೆಣ್ಣನ್ನು ಒಪ್ಪಿಸಿ ಕೊಡುವುದು.ಮುಂತಾದ ವಸ್ತು ವಿಷಯ ಗಳನ್ನು ಒಳಗೊಂಡಿರುತ್ತದೆ. ಅಲ್ಲದೆ ಸಂಪ್ರದಾಯದ ಹಾಡು ಗಳಲ್ಲಿ ಪೌರಾಣಿಕ ವಿಷಯಗಳ ಖಂಡಕಾವ್ಯಗಳಾಗಿ ಕಥನ ರೂಪದಲ್ಲಿರುತ್ತದೆ.

ಲಕ್ಷ್ಮೀದೇವಿಯನ್ನು ಕುರಿತಂತೆ ದೀರ್ಘಕೃತಿ ರಚನೆ ಕಾರರಲ್ಲಿ ಶ್ರೀ ವಾದಿರಾಜರೇ ಮೊದಲಿಗರೆನ್ನಬಹುದು. ನಮ್ಮ ಹಿಂದೂ ಸಂಪ್ರದಾಯದಲ್ಲಿ ಸ್ತ್ರೀಯರಿಗೆ ವೇದ ಉಪನಿಷತ್ತನ್ನು ಅಭ್ಯಾಸ ಮಾಡುವ ಅಧಿಕಾರ ಇರುವುದಿಲ್ಲ. ಆದ್ದರಿಂದ ವೇದ, ಉಪನಿಷತ್ತುಗಳಲ್ಲಿ ಇರುವ ವಿಷಯಗಳನ್ನೆಲ್ಲಾ ಆಧರಿಸಿ ಸ್ತ್ರೀಯರ ಪಾರಾಯಣದ ಸಲುವಾಗಿಯೇ 'ಲಕ್ಷ್ಮೀ ಶೋಭನ ಪದ' ಎಂಬ 112 ಪದ್ಯಗಳನ್ನೊಳಗೊಂಡ ದೀರ್ಘ ಕೃತಿಯನ್ನು ರಚಿಸಿದ್ದಾರೆ.ಇದು ಸ್ತ್ರಿಯರ ಸಾಧನೆಗೆ ಅನುವು ಮಾಡಿ ಕೊಟ್ಟ ಹೆಗ್ಗಳಿಕೆ ವಾದಿ ರಾಜರದು.ಈ ಲಕ್ಷ್ಮೀ ಶೋಭನ ಪದವು ಇಂದಿಗೂ ಅನೇಕಾನೇಕ ಮಹಿಳೆಯರ ನಿತ್ಯ ಪಾರಾಯಣದ ಹಾಡಾಗಿ ಉಳಿದು ಕೊಂಡಿದೆ. ಯಾವುದೇ ಒಂದು ಮಂಗಳ ಕಾರ್ಯದಲ್ಲೂ ಲಕ್ಷ್ಮೀ ಶೋಭನ ಪದವನ್ನು ಸುಮಂಗಲಿಯರಿಂದ ಹಾಡಿಸುವುದು ಸಂಪ್ರದಾಯ.



ಶೋಭಾನವೆನ್ನಿರೆ ಸುರರೊಳು ಸುಭಗನಿಗೆ
ಶೋಭಾನವೆನ್ನಿ ಸುಗುಣನಿಗೆ ಶೋಭಾನವೆನ್ನೀಗೆ
ತ್ರಿವಿಕ್ರಮರಾಯಗೆ ಶೋಭಾನವೆನ್ನಿ ಸುರಪ್ರಿಯಗೆ ॥1॥

ಇದೊಂದು ಮಂಗಳ ಸ್ತುತಿ. ಶ್ರೀಹರಿ ಗಾತ್ರದಲ್ಲಿ ಮಾತ್ರವಲ್ಲದೆ ಗುಣದಲ್ಲಿಯೂ ತ್ರಿವಿಕ್ರಮ. ಏಕೆಂದರೆ ಮೂರಡಿ ಭೂಮಿಯನ್ನು ಬೇಡಿ ಮೂರು ಲೋಕಗಳನ್ನೂ ಅಳೆದು ಸುರರಿಗೆಲ್ಲಾ ಅತಿ ಪ್ರಿಯನೆನಿಸಿದ ಹಾಗೂ ಲಕ್ಷ್ಮೀದೇವಿಯ ಪಾಲಿಗೆ ಚಿರ ನೂತನ ಎನಿಸಿದವನಿಗೆ ಇದು ಮಂಗಳಕರ ಸ್ತುತಿಯಾಗಿದೆ. ಶ್ರೀ ವಾದಿರಾಜರ ಉಪಾಸ್ಯ ದೇವತೆ ಹಯಗ್ರೀವ ದೇವರು ಆದ್ದರಿಂದ ಅವರ ಅಂಕಿತ 'ಹಯವದನ'. ಅರಸಪ್ಪ ಎಂಬುವರ ಮನೆಯ ಮದುವೆಯಲ್ಲಿ ವರನ ಪೇಟದಲ್ಲಿ ಮಿಡಿನಾಗರ ಇದ್ದು ಕಚ್ಚಿ ವರನು ಮೃತನಾದ. ಆ ಹಾವಿನ ವಿಷವನ್ನು ಪರಿಹರಿಸುವ ಸಲುವಾಗಿ ವಾದಿರಾಜರು ಲಕ್ಷ್ಮೀಶೋಭನ ಪದವನ್ನು ರಚಿಸಿ ಹಾಡಿದರು ಎಂಬ ಪ್ರತೀತಿಯಿದೆ.

ವಧುವರರಲ್ಲಿ ಲಕ್ಷ್ಮೀನಾರಾಯಣರ ಅನುಸಂಧಾನ ಮಾಡಿ ಕನ್ಯಾದಾನ ಮಾಡಬೇಕೆಂಬ ನಂಬಿಕೆಯಿದೆ.ಆದ್ದರಿಂದ

ಲಕ್ಷ್ಮೀನಾರಾಯಣರ ಚರಣಕ್ಕೆ ಶರಣೆಂಬೆ
ಪಕ್ಷಿವಾಹನ್ನ ಕೆರಗುವೆ
ಪಕ್ಷಿವಾಹನ್ನಕೆರಗುವೆ ಅನುದಿನ
ರಕ್ಷಿಸಲಿ ನಮ್ಮ ವಧುವರರ ॥

ಲಕ್ಷ್ಮೀನಾರಾಯಣರು ಹಾಗೂ ಪಕ್ಷಿವಾಹನನಿಗೆ ವಂದಿಸಿದರೆ ವಧುವರರನ್ನು ಸದಾಕಾಲ ಸಲಹುವರು ಎಂಬ ನಂಬಿಕೆಯಿದೆ. ಪಕ್ಷಿವಾಹನ್ನಕೆರಗುವ ಎಂಬುದು ವಿಷಹರ ಗರುಡವಾಹನನ ಸ್ಮರಣೆಯಾಗಿದೆ. ಈ ಕೃತಿಯಲ್ಲಿ ಲಕ್ಷ್ಮೀಯ ಪ್ರಾದುರ್ಭಾವ. ಶ್ರೀಹರಿಯ ಯೋಗನಿದ್ರೆ ಲಕ್ಷ್ಮೀನಾರಾಯಣರ ದಾಂಪತ್ಯ ಹರಿಯ ಅವತಾರ ಲಕ್ಷ್ಮಿವಸ್ತ್ರಾಭರಣಗಳ ವಿವರ, ಕಲ್ಯಾಣ, ಉತ್ಸವ,ಉಡುಗೊರೆ, ಆರತಿ, ಮುಂತಾದ ವಿಷಯಗಳನ್ನೊಳಗೊಂಡಿದೆ. ಅಲ್ಲದೆ ಶಾಸ್ತ್ರ, ಸಂಪ್ರದಾಯಗಳನ್ನೂ ಸೂಚಿಸುತ್ತದೆ.

ಮುತ್ತಿನ ಓಲೆಯನಿಟ್ಟಳೆ ಮಹಾಲಕ್ಷ್ಮೀ
ಕಸ್ತೂರಿ ತಿಲಕ ಧರಿಸಿದಳೆ
ಕಸ್ತೂರಿ ತಿಲಕ ಧರಿಸಿದಳಾದೇವಿ ಸ
ರ್ವತ್ರ ವಧುವರರ ಸಲಹಲಿ॥

ಮುತ್ತೈದೆಗೆ ಅವಶ್ಯವಾಗಿ ಬೇಕಾದ ಓಲೆ ಮೂಗುತಿ, ಅರಿಶಿನ,ಕುಂಕುಮ,ಮಂಗಲಸೂತ್ರ, ಕಾಲುಂಗುರ ಇವುಗಳೆಲ್ಲದರಲ್ಲಿಯೂ ಲಕ್ಷ್ಮೀದೇವಿಯ ಸನ್ನಿಧಾನ ಇರುವುದು ಎಂಬುದನ್ನು ವಾದಿರಾಜರು ಸೂಚಿಸಿದ್ದಾರೆ.ಲಕ್ಷ್ಮೀನಾರಾಯಣರ ವಿವಾಹ ಮಹೋತ್ಸವದ ಸಂಕೇತವಾಗಿ ಆಕಾಶದಲ್ಲಿ ದೇವ ದುಂದುಭಿಗಳು ಮೊಳಗಿದವು. ತುಂಬುರರು ಹಾಗೂ ನಾರದರು ಪೀತಾಂಬರ ಧಾರಿಯಾದ ಶ್ರೀಹರಿಯ ಗುಣ ಹಾಗೂ ಮಹಿಮೆಯನ್ನು ಹಾಡುತ್ತ ಸ್ಮರಿಸಿದರೆಂಬುದನ್ನು ಈ ಕೆಳಗಿನ ಪದ್ಯದಿಂದ ತಿಳಿಯಬಹುದು.

ಸಂಭ್ರಮದಿಂಭರದಿ ದುಂದುಭಿ ಮೊಳಗಲು
ತುಂಬುರು ನಾರದರು ತುತಿಸುತ್ತ
ತುಂಬುರು ನಾರದರು ತುತಿಸುತ್ತ ಪಾಡಿದರು ಪೀ
ತಾಂಬರ ಧರನ ಮಹಿಮೆಯ ॥

ಇದೇ ರೀತಿ ಇಂದಿನ ವಿವಾಹಗಳಲ್ಲೂ ವಾಲಗದವರು ಹರಿಕೀರ್ತನೆ ನುಡಿಸುವರು. ಮಾಂಗಲ್ಯಧಾರಣೆ ಸಮಯದಲ್ಲಿ ಗಟ್ಟಿಮೇಳ ನುಡಿಸುವುದನ್ನೂ ಕಾಣುತ್ತೇವೆ. ಇದು ಸಂತೋಷ ಹಾಗೂ ಸಂಭ್ರಮದ ಸಂಕೇತ. ಮದುವೆ ಮನೆಯಲ್ಲಿ ಲಕ್ಷ್ಮೀ ಶೋಭಾನ ಪದವನ್ನು ಹಾಡುವುದರಿಂದ ವಧುವಿಗೆ ಓಲೆಭಾಗ್ಯ ಅಂದರೆ ಮುತ್ತೈದೆ ತನ ಹೆಚ್ಚುವುದು, ಮಧು ಮಕ್ಕಳಿಗೆ ಸಂತೋಷವಾಗುವುದು ಎಂಬುದನ್ನು ಈ ಪದ್ಯದಲ್ಲಿ ಕಾಣುತ್ತೇವೆ.

ಮದುವೆಯ ಮನೆಯಲ್ಲಿ ಈ ಪದವ ಪಾಡಿದರೆ
ಮಧುಮಕ್ಕಳಿಗೆ ಮುದವಹುದು
ವಧುಗಳಿಗೆ ಓಲೆಭಾಗ್ಯ ದಿನದಿನಕೆ ಹೆಚ್ಚುವುದು
ಮದನನಯ್ಯನ ಕೃಪೆಯಿಂದ॥

ಶ್ರೀ ಹರಿಯ ಕೃಪೆಯೊಂದಿದ್ದರೆ ದಾಂಪತ್ಯಜೀವನ ಸುಖ ಸಂತೋಷದಿಂದ ಇರುವುದು ಎಂಬುದನ್ನು ತಿಳಿಯಬಹುದು.

ಇದೇರೀತಿ ಭೀಮವ್ವ, ಹೆಳವನಕಟ್ಟೆ ಗಿರಿಯಮ್ಮ, ಅಂಬಾಬಾಯಿ, ಕೋಲಾರ ಪದ್ಮಾ ಬಾಯಿ ಮುಂತಾದ ಸ್ತ್ರೀಯರು ಅನೇಕ ದೀರ್ಘ ಕೃತಿಗಳನ್ನು ರಚಿಸಿರು ವರು. ಅವುಗಳನ್ನು ಮುಂದಿನ ಸಂಚಿಕೆ ಯಲ್ಲಿ ತಿಳಿಯೋಣ.

(ಮುಂದುವರಿಯುವುದು.)



ಧಾರಾವಾಹಿ

ಶ್ರೀ ಪ್ರಸನ್ನವೆಂಕಟ ದಾಸಾರ್ಯ ವಿರಚಿತ

# ಶಂಬರಾರಿಯ ತಾತ ಸಲಹೋ ಶ್ರೀನಾಥ

## ಕೀರ್ತನೆಯ ಒಳನೋಟ


- ಡಾ॥ ಸುಭಾಸ. ಭೀ. ಕಾಖಂಡಕಿ

79754 42458


ಶಂಬರಾರಿಯ ತಾತಾ ಸಲಹೋ ಶ್ರೀನಾಥ
ಶಂಭುವಿರಂಚೀಶ ಶ್ರೀವೆಂಕಟೇಶ ॥ ಪ॥

ಪಲ್ಲವಿಯಲ್ಲಿ - ದಾಸರು ಶ್ರೀ ಹರಿಯನ್ನು 'ಶಂಬರಾರಿಯ ತಾತಾ' ಎಂಬ ವಿಶೇಷಣದಿಂದ ಸಂಭೋಧಿಸಿದ್ದಾರೆ. ಈ ಪದದಲ್ಲಿ ಒಂದು ಪೌರಾಣಿಕ ಪ್ರಸಂಗ ಅಡಗಿದೆ. ಆ ಶಂಬರಾರಿ ಅಂದರೆ ಶಂಬರನೆಂಬ ರಾಕ್ಷಸನು, ಇವನಿಗೆ ಶ್ರೀಕೃಷ್ಣನ ಮಗನಿಂದ ತನ್ನ ಮರಣ ಬರುವುದೆಂದು ತಿಳಿದು, ಹುಟ್ಟಿದ ತಕ್ಷಣ ಅವನನ್ನು ಸಮುದ್ರದಲ್ಲಿ ಬಿಸಾಕುತ್ತಾನೆ. ಮೀನವೊಂದು ಆ ಮಗುವನ್ನು ನುಂಗುತ್ತದೆ. ಆ ಮೀನು ಒಬ್ಬ ಮೀನುಗಾರನಿಗೆ ಸಿಕ್ಕಿ ಅದನ್ನು ರಾಜನಾದ ಶಂಬರನಿಗೆ ಕೊಡುತ್ತಾನೆ.ಶಂಬರನು ತನ್ನ ಸೇವಕಿಗೆ ಕೊಟ್ಟು ಅದನ್ನು ಅಡುಗೆಯಲ್ಲಿ ಉಪಯೋಗಿಸು ಎಂದು ಹೇಳುತ್ತಾನೆ. ಮೀನಿನ ಹೊಟ್ಟೆಯಲ್ಲಿ ಮಗು ಇರುವುದನ್ನು ನೋಡಿ ಆಕೆ ಮಗುವನ್ನು ಬೆಳೆಸುತ್ತಾಳೆ.ಅವನಿಗೆ ಎಲ್ಲ ವಿದ್ಯೆ ಕಲಿಸಿ ಅವನಿಂದ ಶಂಬರನನ್ನು ಕೊಲ್ಲಿಸುತ್ತಾಳೆ. ಹೀಗಾಗಿ ಕೃಷ್ಣನ ಮಗ ಪ್ರದ್ಯುಮ್ನ, ಅವನು ಶಂಬರನೆಂಬ ರಾಕ್ಷಸನನ್ನು ಸಂಹರಿಸಿ (ಅರಿ) ದರಿಂದ ಅವನಿಗೆ 'ಶಂಬರಾರಿ' ಎಂದು ಹೆಸರು ಅವನ ತಂದೆ (ತಾತ) ಶ್ರೀ ಕೃಷ್ಣ ಆದ್ದರಿಂದ ದಾಸರು "ಶಂಬರಾರಿಯ ತಾತ ಸಲಹೋ'' ಎಂದು ಅನನ್ಯವಾಗಿ ಪ್ರಾರ್ಥಿಸಿದ್ದಾರೆ. ಇನ್ನು ಪಲ್ಲವಿಯ ಎರಡನೇ ಪಾದದಲ್ಲಿ ಶ್ರೀ ವೆಂಕಟೇಶನಿಗೆ 'ಶಂಭು ವಿರಂಚೇಶ' ಎಂಬ ವಿಶ್ಲೇ ಷಣೆ ಉಪಯೋಗಿಸಿದ್ದಾರೆ. ಇಲ್ಲಿ, ಶಂಭು = ಶಿವ= ವಿರಂಚಿ = ಬ್ರಹ್ಮ= ವಿರಂಚೀಶ= ಬ್ರಹ್ಮನಿಗೆ ಈಶನಾದಂಥ ಶ್ರೀವೆಂಕಟೇಶ ಸಲಹೋ - ಎಂದು ಪ್ರಾರ್ಥಿಸಿದ್ದಾರೆ.

### ನುಡಿ - 1 ರಲ್ಲಿ

'ದಶರಥ ಸಂಜಾಥ ದಶಶಿರಹರ್ತ
ವಸುಧೆತಸ್ಕರ ಛೇತ ವಸುಮತಿ ಪ್ರೀತಿ
ಬಿಸಜಾಕ್ಷಿಯಾಪತ್ರ ಬಂಧು ಸಮರ್ಥ
ಪಶುಪಾರಿವೃತ ಶಕ್ತಿ ಪರಿಹಾರ ಕರ್ತ ॥1॥

'ದಶರಥ ಸಂಜಾಥ ದಶಶಿರಹರ್ತ'ಎಂಬುವಲ್ಲಿ ದಶರಥನ ಮಗನಾದ ನೀನು, ಹತ್ತು ತಲೆಯ ರಾವಣನನ್ನು ಹತ್ಯೆ ಮಾಡಿದಂಥ ಶ್ರೀರಾಮನೇ ! ಎಂದು ಸಂಬೋಧಿಸಿ ಮುಂದಿನ ಪಾದದಲ್ಲಿ ವಸುಧೆತಸ್ಕರ ಛೇತ ವಸುಮತಿ ಪ್ರೀತಿ-ಎಂಬುವಲ್ಲಿ ಭೂದೇವಿಯಾದಿಯಾಗಿ ಸಕಲ ದೇವತೆಗಳ ಪ್ರಾರ್ಥನೆಯನ್ನು ಮನ್ನಿಸಿ ಭೂಮಿಯಲ್ಲಿ ಅವತರಿಸಿ, ರಾಕ್ಷಸರನ್ನು, ದುಷ್ಟರನ್ನು ಸಂಹಾರ (ಛೇದ) ಮಾಡಿ (ಪರಿಹರಿಸಿದಾ) ಭೂದೇವಿಗೆ (ವಸುಮತಿ) ಗೆ ಪ್ರೀತಿ ಪಾತ್ರನಾಗಿ ಕಮಲದಂತೆ ಕಣ್ಣುಳ್ಳ (ಬಿಸಜಾಕ್ಷಿ) ಭೂದೇವಿಗೆ ಬಂದ ಆಪತನ್ನು ಪರಿಹರಿಸಿದ ಸಮರ್ಥನಾದ ಬಂಧುವೇ! ಎಂದು ಸ್ತುತಿಸಿ ಮುಂದಿನ ಪಾದದಲ್ಲಿ "ಪಶುಪಾರಿ ವೃತ ಶಕ್ತಿ ಪರಿಹಾರ ಕರ್ತ'' ಎನ್ನುವಲ್ಲಿ - ಪಶುಪಾರಿಯಾದ ಪಶುಪತಿಯ ಅವನ ಶತ್ರುವಾದ ವೃತಾಸುರನ ಶಕ್ತಿಯನ್ನು ಪರಿಹರಿಸಿದ ಕರ್ತನಾದ "ಶ್ರೀ ವೆಂಕಟೇಶನೇ ಸಲಹೊ'' ಎಂದು ನಾನಾ ವಿಶೇಷಣಗಳಿಂದ ಸ್ತುತಿಸಿದ್ದಾರೆ.

### ನುಡಿ - 2 ರಲ್ಲಿ

ಪಾರಿಜಾತಕ ವಜ್ರಿ ಪರಾಭವಕಾರಿ
ಕ್ರೂರ ಖಳವೈರಿಕುಲದ ಸಂಹಾರಿ
ಚಾರುಮಹಿಮ ಶೌರಿ ಚಿರಾನಂದೋದಾರಿ
ಸಾರ ಭೃತ್ಯುಪಕಾರಿ ಸುಕಳ ಜಗಧಾರಿ ॥2॥

ದಾಸರು "ಪಾರಿಜಾತಕೆ ವಜ್ರಿ ಪರಾಭವಕಾರಿ''- ಎನ್ನುವಲ್ಲಿ ಸತ್ಯಭಾಮೆಗೆ ವಚನ ಕೊಟ್ಟಂತೆ ಸ್ವರ್ಗದಿಂದ ಪಾರಿಜಾತ ಗಿಡವನ್ನು ಭೂಮಿಗೆ ತರುವಾಗ ಅಡ್ಡ ಬಂದ ವಜ್ರಧಾರಿಯಾದ ಇಂದ್ರನನ್ನು ಸೋಲಿಸಿದಂಥವನೇ! ಇನ್ನು ಮುಂದಿನ ಪಾದಗಳಲ್ಲಿ ಕ್ರೂರ ಖಳರ ವೈರಿಕುಲದ

ಸಂಹಾರಿ'' ಎನ್ನುವಲ್ಲಿ ಕ್ರೂರವಾದ ರಾಕ್ಷಸರ ಕುಲವನ್ನು ಸಂಹಾರ ಮಾಡಿದಂಥವನೇ! ಚಾರು ಮಹಿಮ ಶೌರಿ ಚಿರಾನಂದೋ ದಾರಿ ಎನ್ನುವಲ್ಲಿ ಮನೋಹರವಾದ, ಅಪಾರ ಮಹಿಮನಾದ ಶೌರಿ (ಶ್ರೀಕೃಷ್ಣ) ಚಿದಾನಂದ=ಚಿರವಾದ, ಶಾಶ್ವತವಾದ ಆನಂದವುಳ್ಳ ಉದಾರಿ ಯಾದ ಶ್ರೀಹರಿಯೇ! ಸಾರಭೃತ್ಯು ಪಕಾರಿ ಸುಕಳ ಜಗಧಾರಿ ಎನ್ನುವಲ್ಲಿ ಹೇ! ಸ್ವಾಮಿ ನಿನ್ನ ಸಕಲ ದಾಸರಿಗೆ, ಶರಣಾಗತಿಯಾಗಿ ಬಂದವರಿಗೆ ಅವರನ್ನು ಸಂರಕ್ಷಿಸುವಂಥವನಾದ ನೀನು ಸಕಲ ಜಗತ್ತಿಗೆ ಆಧಾರಿ'' ಎಂದು ಸ್ತುತಿಸಿದ್ದಾರೆ.

**ಇನ್ನು ಕೊನೆಯ ನುಡಿಯಲ್ಲಿ ---**

ಸ್ವಾಮಿ ಪುಷ್ಕರವಾಸ ಶ್ರೀ ಶ್ರೀನಿವಾಸ
ಸೋಮಾರ್ಕಸಂಕಾಶ ಸುರಜನಕೋಶ
ಭೂಮಿ ಭಾರವಿನಾಶ ಬುಧಪರಿತೋಷ
ಪ್ರೇಮ ಪೂರಿತಹಾಸ ಪ್ರಸನ್ವೆಂಕಟೇಶ ॥ 3॥

ಸ್ವಾಮಿ ಪುಷ್ಕರಣಿ ತಟದಲ್ಲಿ ವಾಸವಾಗಿರುವ ಶ್ರೀನಿವಾಸನೇ ! ನೀನು ಸೂರ್ಯ ಚಂದ್ರರಂತೆ ಪ್ರಕಾಶಮಾನ (ಸೋಮಾರ್ಕ ಸಂಕಾ) ನಾದವನೇ ಸುರಜನ(ಸಜ್ಜನ)ರಿಗೆ ಆಶ್ರಯದಾತನೇ(ಕೋಶ) ''ಭೂಮಿ ಭಾರವಿನಾಶ'' ಎನ್ನುವಲ್ಲಿ ಕೌರವರ ಪಾಂಡವರ ಯುದ್ಧದಲ್ಲಿ ಭೂ ಭಾರವನ್ನು ನಾಶಮಾಡಿ ಸಜ್ಜನರಿಗೆ ಸಂತೋಷವನ್ನು ಉಂಟು ಮಾಡಿ



ದಂಥ, ಪ್ರೇಮಪೂರಿತವಾದ ಮುಗುಳುನಗೆಯ ಪ್ರಸನ್ನವೆಂಕಟೇಶನೇ ಸಲಹೋ ಎಂದು ಅನನ್ಯವಾಗಿ ಪ್ರಾರ್ಥಿಸಿದ್ದಾರೆ.



# ಶೇಷವಾಹನೋತ್ಸವ

**ಶೇಷವಾಹನ ಶೇಷದೇವರು ಪರಮಾತ್ಮನ ಹಾಸಿಗೆ ಸದಾಕಾಲ ಅವನ ಸೇವೆಗೆ ನಿರಂತರವಾಗಿ ನಿಂತಿರುವವರು. ಅವರ ಪ್ರಾಣಿ ಜಾತಿಯ ಹಾವಿನ ಜಾತಿಗೆ ಸೇರಿದವರು ವಿಷವನ್ನು ಕಾರುವುದು ಅವರ ಸ್ವಾಭಾವ ಆದರೆ ಅವರ ಪ್ರಾಕೃತಿಕ ಸ್ವಭಾವವನ್ನು ಬಿಟ್ಟು ಭಗವಂತನ ಸೇವೆಗೆ ನಿಂತ ಮೇಲೆ ಪ್ರಪಂಚವನ್ನೇ ಹೊತ್ತಿರುವ ಭಗವಂತನ ಸೇವೆ ಮಾಡುತ್ತಾ ಇರುವುದು ನಾವು ನಮ್ಮಲ್ಲಿ ಎಂತದ್ದೇ ಗುಣ ಸ್ವಭಾವ ಹೊಂದಿದ್ದರೂ ಪರಮಾತ್ಮನ ಕೃಪೆಗೆ ಪಾತ್ರರಾದಾಗ ನಮ್ಮ ಕೆಟ್ಟಗುಣಗಳೂ ಕೂಡ ಒಳ್ಳೆಯದಾಗಿ ಪರಿವರ್ತಿತವಾಗುತ್ತದೆ ಎಂಬುದನ್ನು ತೋರಿಸುತ್ತದೆ.**

# ದಿನಚರ್ಯೆ - ಆಯುರ್ವೇದದ ಆರೋಗ್ಯ ಸೂತ್ರ



ಡಾ॥ ಎಸ್.ಬಿ.ಎ.ಸಂಧ್ಯಾ
94495 05577

## ಗಂಡೂಷ

ಟ್ರಿನ್ ಟ್ರಿನ್....

ಡಾಕ್ಟರ್ ಫೋನ್ ತೆಗೆದುಕೊಂಡು ನಮಸ್ಕಾರ, ಯಾರು ಮಾತಾಡುತ್ತಿರುವುದು?

**ವಿವೇಕ:** ನಮಸ್ಕಾರ ಡಾಕ್ಟರ್, ನಾನು ವಿವೇಕ, ನನಗೊಂದು ಒಳ್ಳೆಯ ಮೌತ್ ವಾಶ್ ಹೇಳಿ, ಬಾಯಿ ಫ್ರೆಶ್ ಆಗಿ, ಕೂಲ್ ಆಗಿ ಇರಲು.

**ವೈದ್ಯ:** ಮೌತ್ ವಾಶ್ ಅಂದರೆ ಏನು, ಅದರ ಕೆಲಸ ಏನು ಅಂತ ಗೊತ್ತಾ?

**ವಿವೇಕ:** ಅಷ್ಟೆಲ್ಲಾ ನಾನೇಕೆ ತಲೆ ಕೆಡಿಸಿಕೊಳ್ಳಬೇಕು, ಅದನ್ನೆಲ್ಲಾ ತಿಳಿಸಲು ನೀವಿರುವಾಗ.

**ವೈದ್ಯ :** ಕಾಟಾಚಾರಕ್ಕಾಗಿ ಅಥವಾ ಯಾರೋ ಮಾಡಿದರು ಅಂತ ಮಾಡುವುದಾಗಲಿ, ಶೋಕಿಗಾಗಿ ಯಾವ ಕೆಲಸವೂ ಮಾಡಬಾರದು. ಅಂಥ ಅನುಕರಣೆ ಸರಿಯಲ್ಲ. ಆಯುರ್ವೇದ ಶಾಸ್ತ್ರದಲ್ಲಿ ಮೌತ್ ವಾಶ್‌ಗಳ ಬಗ್ಗೆ ಏನು ಹೇಳಿದ್ದಾರೆಂದು ಹೇಳುತ್ತೇನೆ. ಹಲ್ಲನ್ನು ಉಜ್ಜಿದ ಮೇಲೆ ಗಂಡೂಷವನ್ನು ಮಾಡಬೇಕು. ಗಂಡೂಷವೆಂದರೆ ಬೆಚ್ಚಗಿನ ನೀರು, ಹಾಲು, ಎಣ್ಣೆ ಮುಂತಾದ ದ್ರವ ಪದಾರ್ಥಗಳನ್ನು ಬಾಯಿಯಲ್ಲಿ ತುಂಬಿಸಿಕೊಂಡು ಬಾಯಿಯನ್ನು ಮುಕ್ಕಳಿಸುವುದು ಎಂದು ಅರ್ಥ. ಮೌತ್ ವಾಶ್ ಬಾಯಿಯನ್ನು ಕೂಲ್ ಆಗಿಡುತ್ತದೆ ಅಷ್ಟೇ ಆದರೆ ಗಂಡೂಷದ ಉಪಯೋಗಗಳು ಹಲವು.

**ವಿವೇಕ :** ದುಬಾರಿಯಾದ ಹಾಲಿನಿಂದ ದಿನಾಲೂ ಬಾಯಿಯನ್ನು ಮುಕ್ಕಳಿಸಿದರೆ ನಮ್ಮಮ್ಮ ಸುಮ್ಮನಿರುತ್ತಾಳಾ ಡಾಕ್ಟರೆ.... ಬೈಯುತ್ತಾರೆ ಅಷ್ಟೆ

**ವೈದ್ಯ:** ನಿತ್ಯ ಹಾಲಿನಲ್ಲಿ ಬಾಯಿಯನ್ನು ಮುಕ್ಕಳಿಸು ಅಂತ ನಿನಗೆ ಯಾರು ಹೇಳಿದರು, ಪ್ರತಿ ನಿತ್ಯ ನಾವು ಬೆಚ್ಚಗಿನ ನೀರಿನಲ್ಲಿ ಬಾಯಿ ಮುಕ್ಕಳಿಸಿದರೆ ಸಾಕು. ಹೀಗೆ ಮಾಡಲು, ಬಾಯಿಯಲ್ಲಿ ಹೆಚ್ಚಾಗಿ ಇರುವ ಕಫ, ಬಾಯಿ ಕಹಿ, ಅರುಚಿ(ಊಟದಲ್ಲಿ ರುಚಿ ಇಲ್ಲದಿರುವುದು) ಹಲ್ಲಿನ ತೊಂದರೆಗಳನ್ನು ಹೋಗಲಾಡಿಸಿ ಮುಖಕ್ಕೆ ಹಗುರವಾದ ಭಾವವನ್ನು ತರುತ್ತದೆ. ನಿತ್ಯದಲ್ಲಿ ನೀರೇ ಸಾಕು, ಏನಾದರೂ ತೊಂದರೆ ಇದ್ದಾಗ ಅದನ್ನು ಸರಿ ಪಡಿಸಲು ಬೇರೆ ಬೇರೆ ದ್ರವ ಪದಾರ್ಥಗಳ ಬಳಕೆ ಮಾಡಬೇಕು.

**ವಿವೇಕ:** ಹಾಗಾದರೆ ಹಾಲಿನಲ್ಲಿ ಯಾರು ಬಾಯಿಯನ್ನು ಮುಕ್ಕಳಿಸಬೇಕು .

**ವೈದ್ಯ:** ಯಾರು ಧ್ವನಿ ಪೆಟ್ಟಿಗೆಯನ್ನು ಹೆಚ್ಚಾಗಿ ಬಳಸುತ್ತಾರೋ ಟೀಚರ್, ಗಾಯಕರು...ಇವರು ಬೆಚ್ಚಗಿನ ಹಾಲಿನಲ್ಲಿ ಬಾಯಿಯನ್ನು ಮುಕ್ಕಳಿಸಿ ಧ್ವನಿಯನ್ನು ರಕ್ಷಿಸಿಕೊಳ್ಳಬಹುದು.

**ವಿವೇಕ:** ಹಾಗಾದರೆ ಎಣ್ಣೆಯಿಂದ ಯಾರು ಬಾಯಿ ಮುಕ್ಕಳಿಸಬೇಕು, ಮತ್ತೆ ಡಾಕ್ಟರ್, ಯಾವ ಎಣ್ಣೆಯನ್ನು ಉಪಯೋಗಿಸಬೇಕು.

**ವೈದ್ಯ :** ಸ್ವಸ್ಥನೂ ಕೂಡ ಎಳ್ಳೆಣ್ಣೆಯಿಂದ ನಿತ್ಯವೂ ಗಂಡೂಷವನ್ನು ಮಾಡಬಹುದು ಎಂದು ಆಚಾರ್ಯರು ತಿಳಿಸಿದ್ದಾರೆ, ಬಾಯಿಯ ಬೇರೆ ಬೇರೆ ರೋಗಗಳಿಗೆ ಔಷಧೀಯ ಎಣ್ಣೆಗಳಿಂದ ಅಥವಾ ಔಷಧೀಯ ದ್ರವ್ಯಗಳ ಕಷಾಯದಿಂದ ಬಾಯಿಯನ್ನು ಮುಕ್ಕಳಿಸಿದರೆ ಸಾಕು.

**ವಿವೇಕ :** ಸ್ವಲ್ಪ ವರ್ಷಗಳ ಹಿಂದೆ ಆಯಿಲ್ ಪುಲ್ಲಿಂಗ್ ಅಂತ ತುಂಬಾನೆ ಪ್ರಚಾರದಲ್ಲಿ ಇತ್ತಲ್ಲಾ ಅದೂ ಕೂಡ ಇದೇ ಆಧಾರದ ಮೇಲೆ ಬೆಳವಣಿಗೆ ಆಗಿದ್ದಾ?

**ವೈದ್ಯ:** ಹೌದು, ನಿತ್ಯ ಎಳ್ಳೆಣ್ಣೆಯ ಗಂಡೂಷದಿಂದ ಹಲ್ಲು, ಒಸಡು, ದವಡೆ ಗಟ್ಟಿಯಾಗುತ್ತದೆ. ಬಾಯಿ ರುಚಿ ಹೆಚ್ಚುತ್ತದೆ, ತುಟಿ ಒಡೆಯುವುದಿಲ್ಲ. ಹಲ್ಲು ಹುಳುಕು, ಹಲ್ಲು ಜುಮ್ಮು ಇರುವುದಿಲ್ಲ. ಎಂತಹಾ ಗಟ್ಟಿ ಪದಾರ್ಥವನ್ನೂ ತಿನ್ನಬಹುದು, ಹಲ್ಲಿಗೆ ಅಷ್ಟು ಶಕ್ತಿ ಬರುತ್ತದೆ.

**ವಿವೇಕ:** ಅಷ್ಟೇನಾ ಇನ್ನೂ ಏನಾದರು ಉಪಯೋಗವಿದೆಯಾ ?

**ವೈದ್ಯ:** ಇನ್ನೊಂದು ವಿಶೇಷವಾದ ಉಪಯೋಗವೆಂದರೆ, ಮುಖ ಸುಕ್ಕಾಗುವುದಿಲ್ಲ, ಇದರಿಂದ ಮುಖದ ಮಾಂಸಪೇಶಿಗಳಿಗೆ ವ್ಯಾಯಾಮವಾಗಿ



ಮುಖದ ಚರ್ಮವು ಸುಕ್ಕುಗಟ್ಟುವುದು ಕಡಿಮೆಯಾಗಿ ಸೌಂದರ್ಯವು ಇಮ್ಮಡಿಸುವುದು. ಮುಖದಲ್ಲಿ ಭಂಗು (ಚರ್ಮದಲ್ಲಿ ಕಪ್ಪು ಮುಚ್ಚೆಯಂತಾಗುವುದು) ಬರುವುದಿಲ್ಲ. ಆದರೆ ಇವೆಲ್ಲವೂ ಗಂಢೂಷವನ್ನು ನಿತ್ಯವೂ ಆಚರಿಸಿದಾಗ ಮಾತ್ರ ಲಭ್ಯ.ಎಣ್ಣೆಯಿಂದ ಬಾಯಿ ಮುಕ್ಕಳಿಸಿದ ನಂತರ ಬೆಚ್ಚಗಿನ ನೀರಿನಿಂದ ಬಾಯಿ ಮುಕ್ಕಳಿಸಬೇಕು.

**ವಿವೇಕ :** ಮತ್ತೆ ಅದೇ ಪ್ರಶ್ನೆ ಕೇಳುತ್ತೀನಿ ಡಾಕ್ಟರ್ ಇದನ್ನು ನಿತ್ಯವೂ ಮಾಡಲು ಸಾಧ್ಯವಾಗದೇ ಇರುವಾಗ...

**ವೈದ್ಯ:** ಅಂತಹವರು ವಾರದಲ್ಲಿ ಎರಡು ದಿನವಾದರೂ ಮಾಡಬೇಕು.

**ವಿವೇಕ:** ಹಲ್ಲನ್ನು ಉಜ್ಜಿದ ನಂತರ ಗಂಢೂಷ, ಅಲ್ಲವಾ !!

**ವೈದ್ಯ:** ಹಲ್ಲನ್ನು ಉಜ್ಜಿದ ಮೇಲೆ, ಮಲ ಮೂತ್ರ ವಿಸರ್ಜನೆಯ ನಂತರ ಮತ್ತು ಆಹಾರ ಸೇವಿಸಿದ ನಂತರ, ಇವು ಗಂಢೂಷವನ್ನು ಮಾಡುವ ಕಾಲ, ಆದರೆ ಈ ಕ್ರಮವು ನಮಗೆ ಅರಿವಿಲ್ಲದೇನೇ ನಮ್ಮ ನಿತ್ಯ ಜೀವನದಲ್ಲಿ ಹಾಸು ಹೊಕ್ಕಾಗಿ ಹೋಗಿದೆ.

**ವಿವೇಕ :** ಗಂಢೂಷದ ನಂತರ ಮುಖ ತೊಳೆಯುವುದು ಅಲ್ಲವಾ ಡಾಕ್ಟರೆ....

**ವೈದ್ಯ :** ಅರೆ ಅರೆ... ವಿವೇಕ ಸರಿಯಾಗಿ ಹೇಳಿದೆ, ನೀರಿನಲ್ಲಿ ಮುಖ ತೊಳೆಯಲು, ಮುಖದಲ್ಲಿನ ಮೊಡವೆ, ಭಂಗು, ಮುಖದ ಊತ ಕಮ್ಮಿಯಾಗುತ್ತದೆ, ಹಾಗೆಯೇ ಬೆಚ್ಚಗಿನ ನೀರಿನಲ್ಲಿ ಮುಖವನ್ನು ತೊಳೆಯಲು ಮುಖವು ಶುಭ್ರವಾಗುತ್ತದೆ. ಮುಖದ ಜಿಡ್ಡು ಕಮ್ಮಿಯಾಗುತ್ತದೆ (ಎಣ್ಣೆಯ ಚರ್ಮವಿರುವವರಿಗೆ ಇದು ಉಪಯುಕ್ತ.) ಶೀತದಿಂದಾಗಿ ಮುಖ ಊದಿದ್ದರೆ ಅದೂ ತಗ್ಗುತ್ತದೆ.

**ವಿವೇಕ:** ಮುಖದ ತೊಂದರೆ ಇರುವವರು ಔಷಧೀಯ ಕಷಾಯದಿಂದ ಮುಖವನ್ನು ತೊಳೆಯಬೇಕು ಅಲ್ಲವಾ!!

**ವೈದ್ಯ:** ಹೌದು, ಮುಖ ಪ್ರಕ್ಷಾಲನದ ನಂತರ ನಸ್ಯಕರ್ಮ ಮಾಡಬೇಕು.

**ವಿವೇಕ:** ಏನೂ, ಮೂಗಿಗೆ ಹೋಗೆ ಸೋಪ್ಪು ಏರಿಸುತ್ತಾರಲ್ಲಾ ಆ ನಸ್ಯನಾ?

**ವೈದ್ಯ:** ನಸ್ಯ ಒಂದು ಚಟ ಆದರೆ ನಸ್ಯ ಆರೋಗ್ಯಕರ ಕ್ರಮ.

**ವಿವೇಕ:** ನಸ್ಯನೂ ದಿನಾಲು ಮಾಡಬೇಕಾ?



**ವೈದ್ಯ:** ನಸ್ಯ ದಿನಚರ್ಯೆಯ ಒಂದು ಅವಿಭಾಜ್ಯ ಅಂಗ. ರೋಗ ಬಂದ ಮೇಲೆ ಅದನ್ನು ಸರಿಪಡಿಸಲು ಎಷ್ಟೋಂದು ಶ್ರಮ ಮತ್ತು ಕಾಲವನ್ನು ವ್ಯಯಿಸುವ ನಮಗೆ ಆರೋಗ್ಯವನ್ನು ಕಾಪಾಡಿಕೊಳ್ಳಲು ಎರಡು ನಿಮಿಷ ಸಮಯವಿಲ್ಲವೆಂದರೆ ಆಶ್ಚರ್ಯ, ಬೇಜಾರು ಎರಡೂ ಆಗುತ್ತದೆ.

**ವಿವೇಕ:** ಹಾಗಲ್ಲಾ ಡಾಕ್ಟರೆ ಬೆಳಗ್ಗೆ ಅಷ್ಟೊಂದು ಟೈಮ್...

**ವೈದ್ಯ:** ಟ್ರಾಫಿಕ್ ಜಾಮ್‌ನಲ್ಲಿ ಅರ್ಧಗಂಟೆ ಇನ್‌ಸ್ಟಾದಲ್ಲಿ ಅರ್ಧಗಂಟೆ ವ್ಯಯ ಮಾಡುವ ವ್ಯಕ್ತಿಗೆ ತನಗಾಗಿ 20 ನಿಮಿಷ ಇಲ್ಲವಾ?

**ವಿವೇಕ:** ಹಾಗಲ್ಲಾ ಡಾಕ್ಟರ್...

**ವೈದ್ಯ :** ಹಾಗೂ ಅಲ್ಲಾ ಹೀಗೂ ಅಲ್ಲಾ ದಿನಚರ್ಯೆಯಲ್ಲಿ ಹೇಳಿರುವ ಬಹುಪಾಲು ಕ್ರಿಯೆಗಳು ಈಗಾಗಲೇ ನಮ್ಮ ದಿನದ ಅವಿಭಾಜ್ಯ ಅಂಗವಾಗಿದೆ. ಇನ್ನೊಂದೆರಡು ಕ್ರಿಯೆಗಳನ್ನು ಸೇರಿಸುವುದು ಅಷ್ಟು ಕಷ್ಟವೇನೂ ಆಗುವುದಿಲ್ಲ ಅಲ್ಲವಾ.

**ವಿವೇಕ:** ಹೌದು ಡಾಕ್ಟರೆ ಒಪ್ಪುತ್ತೇನೆ.

**ವೈದ್ಯ:** ಓಹೋ, ನಾವು ಫೋನಿನಲ್ಲಿ ಅಲ್ಲವಾ ಮಾತನ್ನಾಡುತ್ತಿರುವುದು, ಆಯುರ್ವೇದದ ಬಗ್ಗೆ ಹೇಳುತ್ತಿದ್ದರೆ, ನನಗೆ ಬೇರೆಲ್ಲಾ ಮರತೇ ಹೋಗುತ್ತದೆ, ಇನ್ನೊಮ್ಮೆ ಎದುರಿಗೆ ಸಿಕ್ಕಾಗ ನಸ್ಯದ ಬಗ್ಗೆ ತಿಳಿಸುತ್ತೇನೆ.

**(ಸಶೇಷ)**

# ವರಾಹ ವೈಭವ



- ಡಾ|| ಗುರುರಾಜ ಪೋಶೆಟ್ಟಿಹಳ್ಳಿ
97393 69621

**ಭಗವಾನ್ ಮಹಾವಿಷ್ಣುವಿನ ದಶಾವತಾರಗಳಲ್ಲಿ ವರಹಾವತಾರ ಮೂರನೇ ಅವತಾರ.ಹಿರಣಾಕ್ಷನೆಂಬ ರಾಕ್ಷಸನಿಂದ ರಸಾತಳಕ್ಕೆ ತಳ್ಳಲ್ಪಟ್ಟ ಪೃಥ್ವಿಯನ್ನು ಉದ್ದರಿಸಲು ಶ್ರೀ ಹರಿಯು ಶ್ವೇತವರಾಹದ ರೂಪ ತಾಳಿ ಬಂದ ದಿನವು "ವರಾಹ ಜಯಂತಿ" ಎಂದು ಪ್ರಸಿದ್ಧವಾಗಿದೆ. ಕಾಲಗಣನೆಯಲ್ಲಿ ಪಂಚಾಂಗಗಳಲ್ಲಿ ಪ್ರಸ್ತುತ ನಡೆಯುತ್ತಿರುವ ಕಲ್ಪಕ್ಕೆಶ್ವೇತವರಾಹ ಕಲ್ಪೆಂಬ ವರ್ಣನೆಯಿದೆ. ಸಸ್ಯ ಶ್ಯಾಮಲೆಯಾದ ಭೂದೇವಿಯು ವಿಷ್ಣುವಿನ ಪತ್ನಿಯಾಗಿದ್ದು ಜಗತ್ತಿನ ಸರ್ವ ಚರಾಚರ ಜೀವಿಗಳಿಗೂ ಮಾತೃ ಸ್ಥಾನಿ. ಅಂತಹ ಜಗಜ್ಜನನಿಯನ್ನು ಪೀಡಿಸತೊಡಗಿದ ರಾಕ್ಷಸನ ದುಷ್ಕೃತ್ಯದಿಂದ ಧರೆಯ ಸಮಸ್ತ ರಿಗೂ ಸಂಕಷ್ಟ ಉಂಟಾಯಿತು. ಗೋವುಗಳು, ಮುನಿಪತ್ನಿಯರ, ಗರ್ಭಿಣಿಯರ ಜತೆ ಸೇರಿಕೊಂಡ ಭೂದೇವಿ ಸ್ವರಕ್ಷಣೆ ಮಾಡಿಕೊಳ್ಳುವಲ್ಲಿ ಅಸಾಧ್ಯ ನೋವನ್ನು ಅನುಭವಿಸಿದಳು. ಪ್ರಪಂಚವೇ ಈ ನೋವಿನಿಂದ ಕಂಗೆಟ್ಟಿತ್ತು. ಆಗ ರಾಕ್ಷಸನಿಂದ ಪಾರಾಗಲು ಎಲ್ಲಿಯೂ ಆಶ್ರಯ ಸಿಗದ ಭೂಮಾತೆ ರಸಾತಳಕ್ಕೆ ಧಮುಕಿ ಶ್ರೀಹರಿಯನ್ನು ಪ್ರಾರ್ಥಿಸಿದಳು. ಚರಿತ್ರಾರ್ಹ ಮಹಾ ವ್ಯಕ್ತಿಗಳೆಲ್ಲರೂ ಅದೇ ಕಾಲದಲ್ಲಿ ಪ್ರಾರ್ಥಿಸಿದರು.**

ವರಾಹ ಎಂದರೆ ಹಂದಿ. ಹಿರಣ್ಯಾಕ್ಷನೆಂಬ ರಾಕ್ಷಸನಿಂದ ಭೂದೇವಿಯನ್ನು ರಕ್ಷಿಸುವುದಕ್ಕಾಗಿ ತಾಳಿದ ಅವತಾರ. ತಾತ್ವಿಕವಾಗಿ ಹಿರಣ್ಯಾಕ್ಷನೆಂದರೆ, ಬಂಗಾರದ ಮೇಲೆ ದೃಷ್ಟಿಯಿರುವವರು ಎಂದರ್ಥ. ಕೆಲವರಿಗೆ ದೇವರೇ ಬಂಗಾರ. ಇನ್ನು ಕೆಲವರಿಗೆ ಬಂಗಾರವೇ ದೇವರು! ದೇವರೇ ಬಂಗಾರವೆನ್ನುವವರು ಊರ್ಧ್ವ ಮುಖಿಗಳಾಗಿ ಶ್ರೇಷ್ಠತೆಯನ್ನು ಪಡೆಯುವರು. ಆದರೆ ಬಂಗಾರವೇ ದೇವರೆಂದು ಈ ಸಂಸಾರ ಸಾಗರ ದಡಿಯಲ್ಲಿ ಸಿಕ್ಕಿಹಾಕಿ ಕೊಂಡವರನ್ನು ಮೇಲಕ್ಕೆ ತರುವವನೇ ವಿಷ್ಣುವರಾಹಿ! ವರಾಹ ಎಂದರೆ ಮೋಡ ಎಂದೂ ಅರ್ಥವಿದೆ. ಸಮುದ್ರದಿಂದ ಆವಿಯಾದ ಜಲವು ಆಕಾಶಕ್ಕೆ ಹೋಗಿ ಗಾಳಿಯಿಂದ ತಣ್ಣಗಾಗಿ ಘನೀಕೃತವಾದ ಮೋಡವಾಗುವಂತೆ , ಲೌಕಿಕ ಮೋಹದಿಂದ ಈ ಶರೀರವೆಂಬ ಭೂಮಿಯು ಅಜ್ಞಾನದಿಂದ ಘನೀಕೃತ ವಾದಾಗ ಮೋಡವನ್ನು ಕರಗಿಸುವಂತೆ, ಜ್ಞಾನಾಗ್ನಿ ಸ್ವರೂಪನಾದ ಭಗವಂತನು, ಜಡತ್ವವನ್ನು ಕರಗಿಸಿ ನೀರಿನ ಸ್ವರೂಪವನ್ನಿತ್ತು. ನದಿಯಂತೆ ಪ್ರವಹಿಸಿ, ನಾಲ್ಕು ಜನರಿಗೆ ಉಪಕಾರಿಯಾಗಿ ಮತ್ತೆ ತನ್ನನ್ನು ಸೇರುವಂತೆ ಮಾಡುವವನು ನಾರಾಯಣ. ನಮ್ಮನ್ನು ಸಂಸಾರ ಸಾಗರದಿಂದ ಮೇಲೆತ್ತುವವನು ವಿಷ್ಣುವರಾಹಿ.ಕಕ್ಷೆಯ ತಪ್ಪಿದ ಮಾನವರನ್ನು ಮೇಲಕ್ಕೆತ್ತಿ ಮತ್ತೆ ಸುಸ್ಥಿತಿಯಲ್ಲಿರಿಸುವವನು ವಿಷ್ಣು ವರಾಹಿ,ವರಾಹ ಎಂಬ ಶಬ್ದದ ಅಕ್ಷರಾರ್ಥ ಅತ್ಯುತ್ತಮವಾದದ್ದು ಎಂಬುದು ಭೂಮಿಯ ಮೇಲೆ ವಾಸಿಸಲು ಆರಂಭಿಸಿದ ಆರಂಭಿಕ ಸಸ್ತನಿ ಗಳಲ್ಲಿ ಹಂದಿಯು ಬಲಿಷ್ಠವಾದದ್ದರಿಂದ ಇದು ಸೃಷ್ಟಿಯ ಮೂರನೇ ಹಂತವನ್ನು ಪ್ರತಿನಿಧಿಸುತ್ತದೆ.

**ವರಾಹಸ್ವಾಮಿಯ ಜನನ:**

ರಾಮನವಮೀ, ಕೃಷ್ಣಾಷ್ಟಮೀ, ನರಸಿಂಹಜಯಂತಿಗಳು ಪ್ರಸಿದ್ಧವಾಗಿವೆ. ಇದರಂತೆ ವರಾಹವತಾರ ಯಾವ ತಿಥಿಯಲ್ಲಿ? ಎಂಬುದು ಪ್ರಶ್ನೆ.

ಶ್ರೀಮದ್ಭಾಗವತ(ತೃತೀಯ ಸ್ಕಂದ ಹದಿಮೂರನೇ ಅಧ್ಯಾಯ)ದಲ್ಲಿ ಈ ಅವತಾರದ ವೃತ್ತಾಂತವು ಹೀಗಿದೆ - ಇದು ಮೊದಲನೆಯ ಸ್ವಾಯಂಭುವ ಮನ್ವಂತರದಲ್ಲಿ ನಡೆದ ಅವತಾರ. ಬ್ರಹ್ಮನು ಪ್ರಪಂಚದ



**ಭಗವದವತಾರಗಳಿಗೆ ದುಷ್ಟರ ಶಿಕ್ಷಣ - ಸಜ್ಜನ ಸಂರಕ್ಷಣೆಯೇ ಮುಖ್ಯ ಗುರಿಯು, ವರಾಹವೆಂದರೆ ಹಂದಿ. ಕೆಸರಿನಲ್ಲಿ ಹೊರಳಾಡುವುದು ಮತ್ತು ಮಲಕ್ಷಣೆ ಇದರ ಸಹಜವಾದ ಕಾರ್ಯ. ಮಾನವ ಈ ಪ್ರಾಣಿ ಹತ್ತಿರ ಬಂದರೆ ದೂರ ಸರಿಯುತ್ತಾನೆ. ಇಂತಹ ನಿಕೃಷ್ಟವಾದ ವರಾಹದ ರೂಪವನ್ನು ಭಗವಂತ ಹೊಂದಲು ಕಾರಣವೇನು? ಎಂಬುದಾಗಿ ಪ್ರಶ್ನೆಯು ಸಹಜವಾಗಿಯೇ ಬರುತ್ತದೆ. ಪರಮಪುರುಷನು ಯಾವ ರೂಪ ಧರಿಸಿ ದರೂ ಅದು ಅಪ್ರಾಕೃತವಾಗಿ ಮಂಗಳಕರ ವಾಗಿಯೇ ಇರುತ್ತದೆ.**



ಸೃಷ್ಟಿಗೆ ಪ್ರಾರಂಭಿಸಿ ಮನು ಶತರೋಪೆಯೆಂಬ ದಂಪತಿಗಳನ್ನು ಸೃಷ್ಟಿಸಿದನು. ಇವನೇ ಸ್ವಾಂಭುವ ಮನು, ತಂದೆಯಾದ ಬ್ರಹ್ಮನು ಭೂಮಂಡಲದಲ್ಲಿ ಭಗವದಾರಾಧನಾ ರೂಪವಾದ ಕರ್ಮಗಳನ್ನು ಮಾಡುತ್ತಾ ಸ್ವಾಯಂಭುವ ಮನುವು ಭೂಮಿಯನ್ನು ಅರ ಸುತ್ತ ಭೂಮಿಯನ್ನು ಕಾಣದೆ, ತಂದೆಯೇ! ಭೂಮಿಯು ನೀರಿನಲ್ಲಿ ಮುಳು ಗಿಹೋಗಿದೆ. ನಾನು ಏನು ಮಾಡಲಿ? ಆಶ್ರಯವಿಲ್ಲದೆ ಏನು ಮಾಡಲು ಸಾಧ್ಯ? ಎಂದನು. ಬ್ರಹ್ಮನಿಗೂ ಆಶ್ಚರ್ಯ ವಾಯಿತು ಇದೇನಿದು? ಈಗ ತಾನೆ ಸೃಷ್ಟಿಸಿದ ಭೂಮಿ ಏನಾಯಿತು? ಪರಮ ಪುರುಷನ ನಾಭಿಕಮಲದಲ್ಲಿ ನಾನು ಜನ್ಮ ಪಡೆದು ಅವನ ಅನು ಗ್ರಹದಿಂದಲೇ ಭೂಮಿಯನ್ನು ಸೃಷ್ಟಿಸಿದೆ. ಈಗ ಅವನೇ ನನಗೆ ದಾರಿ ತೋರಬೇಕು ಎಂದು ಚಿಂತಿಸುತ್ತಿರಲು ಚತು ಮುರ್ಖಿನ ನಾಸರಂಧ್ರದಿಂದ ಒಂದು ಹಂದಿಯ ಮರಿಯು ಹೊರಕ್ಕೆ ಬಂದಿತು.

ಆದರೆ ಈ ವರಾಹವು ವಿಚಿತ್ರವಾಗಿತ್ತು. ನೀಲಮೇಘದಂತೆ ಬಣ್ಣ, ನಾಲ್ಕು ವೇದಗಳೇ ನಾಲ್ಕು ಪಾದಗಳು, ಅಗ್ನಿಯೇ ಅದರ ನಾಲಿಗೆ ರೋಮವು ದರ್ಭಮಯ. ಅದರ ಉಸಿರು ತುಪ್ಪದಂತೆ ಗಂಧವನ್ನು ಬೀರುತಿತ್ತು. ಸಾಮ ಘೋಷದಂತೆ ಅದರ ಸ್ವರ. ಈ ರೀತಿ ಅದು ಇದ್ದ ಕಾರಣ ಇದು ಯಜ್ಞ ವರಾಹವೇ ಸರಿ ಎಂದು ಹರಿವಂಶ ಭವಿಷ್ಯ ಪರ್ವದಲ್ಲಿ ಹೇಳಿದೆ.

ಗಜೇಂದ್ರಲೋಲನಾದ ವರಾಹಮೂರ್ತಿಯು ಕ್ರೀಡಿಸುತ್ತಾ ಜಲ ರಾಶಿಯಲ್ಲಿ ಪ್ರವೇಶಿಸಿದನು. ಶ್ವೇತದ್ವೀಪದಲ್ಲಿ ಪರಮಪುರುಷರನು ವಿಹರಿ ಸುತ್ತಿರಲು ಅವನ ಭವನದ ಪಶ್ಚಿಮ ದ್ವಾರಗಳಲ್ಲಿ ಜಯ-ವಿಜಯರು ನಿಯ ಮಿತರಾಗಿದ್ದರು. ಒಮ್ಮೆ ಸನಕಾದಿಗಳು ಭಗವದ್ದರ್ಶನಕ್ಕಾಗಿ ಬರಲು ಜಯ-ವಿಜಯರು ಅವರನ್ನು ಒಳಕ್ಕೆ ಬಿಡಲಿಲ್ಲ. ಇದರಿಂದ ಕುಪಿತರಾದ ಮುನಿಗಳು ಭೂಮಿಯಲ್ಲಿ ನರಜನ್ಮವೆತ್ತುವಂತೆ ಶಪಿಸಿದರು. ಪರಮ ಪುರುಷನಿಗೆ ಈ ವಿಷಯ ತಿಳಿದು ಮೂರು ಬಾರಿ ರಾಕ್ಷಸ ಜನ್ಮವನ್ನು ಪಡೆದು ನನ್ನಿಂದಲೇ ಹತರಾಗಿ ಪುನಃ ನಿಮ್ಮ ಸ್ಥಾನವನ್ನಲಂಕರಿಸಿ ಎಂದು ಆಜ್ಞಾಪಿ ಸಿದನು. ಇವರ ಮೊದಲನೇ ಜನ್ಮ ಹಿರಣ್ಯಾಕ್ಷ - ಹಿರಣ್ಯಕಶಿಷು. ಈ ಹಿರಣ್ಯಾ ಕ್ಷನೇ ಭೂಮಿ ಯನ್ನಪಹರಿಸಿ ಸಮುದ್ರದಲ್ಲಿ ಬಚ್ಚಿಟ್ಟಿದ್ದನು. ಭಯಂಕರವಾದ ಕೋರೆದಾಡೆ ಗಳಿಂದ ಅವನು ಕಠೋರನಾಗಿದ್ದನು. ಅವನು ಸಮುದ್ರದಲ್ಲಿ ಮುಳುಗಿದಾ ಗಲೇ ಸಮುದ್ರವು ರಭಸದಿಂದ ಸಿಡಿದು ಹೋಗಿ ಭಯಂಕರವಾದ ಶಬ್ದವನ್ನುಂಟು ಮಾಡಿತು.

ಆ ದಿವ್ಯ ಯಜ್ಞವರಾಹನು ತನ್ನ ಕೋರೆದಾಡೆಗಳಿಂದ ಭೂಮಿ ಯನ್ನು ಚುಚ್ಚಿ ತನ್ನ ಕೋರೆಹಲ್ಲಿನ ಮೇಲೆ ಇಟ್ಟುಕೊಂಡು ಮೇಲೆ ಬಂದನು. ಹೀಗೆ ಎದ್ದು ಬರುವಾಗ ತನ್ನನ್ನು ಆಶ್ರಯಿಸಿದ ಹಿರಣ್ಯಾಕ್ಷನನ್ನು ಯಜ್ಞ ವರಾಹನು ಲೀಲೆಯಿಂದ ಜಲದಲ್ಲಿ ಸಂಹರಿಬಿಟ್ಟನು. ನೀರಿನಲ್ಲಿ ಸಮಾ ಶ್ರಿತಳಾಗಿದ್ದ ವಸುಂಧರೆಯನ್ನು ಮೇಲಕ್ಕೆತ್ತಿ ದುಷ್ಟ ಹಿರಣ್ಯಾಕ್ಷನನ್ನು ನಿಗ್ರ ಹಿಸಿದ ಸೂಕರ ರೂಪಿ ಭಗವಂತನ ಕುರಿತಾಗಿ ದೇವತೆಗಳು, ಋಷಿಗಳು ಕೊಂಡಾಡತೊಡಗಿದರು.

ಯಜ್ಞವರಾಹ, ಭೂವರಾಹನೆಂದು ಸೂಚಿಸಲ್ಪಟ್ಟ ಭಗವಂತನ ರೋಮದಲ್ಲಿ ಸರ್ವಯಜ್ಞಗಳೂ ಇವೆ. ತೊಗಲಿನಲ್ಲಿ ಗಾಯತ್ರಿ, ರೋಮ ಗಳಲ್ಲಿ ದರ್ಭೆ ನೇತ್ರಗಳಲ್ಲಿ ಘೃತ(ತುಪ್ಪ), ನಾಲ್ಕು ಕಾಲುಗಳಲ್ಲಿ ಅಧ್ವರ್ಯ, ಉದ್ಗಾತೃ, ಹೋತೃ ಬ್ರಹ್ಮಾ, ಎಂಬ ಚತುರ್ವೇದ ಪರಿಣಿತ ಋತ್ವಿಜರು ಇರುತ್ತಾರೆ. ಬಿಳಿಯ ಹಂದಿಯ ಮುಖಾಗಾತ್ರದಲ್ಲಿ 'ಸ್ರುಕ್', ಮೂಗಿನ ಹೊಳ್ಳೆಗಳಲ್ಲಿ 'ಸ್ರುವಾ' ಹೊಟ್ಟೆಯಲ್ಲಿ 'ಇಡಾ' ಎಂಬ ಯಜ್ಞಾಕ್ಷು ದಾಪಾತ್ರೆ ಕಿವಿಗಳಲ್ಲಿ 'ಚಮಸ', ಮುಖದಲ್ಲಿ 'ಪಾಶಿತ್ರ'ಕಂಠದಲ್ಲಿ 'ಗ್ರಹ' (ಸೋಮರಸ ಪಾತ್ರೆ) ವರಾಹದ ಅಗಿಯುವಿಕೆ ಅಗ್ನಿಹೋತ್ರ. ಅವತಾರ ತಾಳುವಿಕೆಯೇ 'ದೀಕ್ಷಣೀಯ' ಎಂಬ ಇಷ್ಟಿ ಕೋರೆದಾಡೆಗಳೇ 'ಪ್ರಾಯ ಣೀಯ' (ದೀಕ್ಷಾ ನಂತರದ ಇಷ್ಟಿ) ಮತ್ತು 'ಉದಯನೀಯ' (ಯಜ್ಞ ಸಮಾಪ್ತಿ)

ಸಪ್ತದಾತುಗಳೇ ಅಗ್ನಿಷ್ಟೋಮ, ಅತ್ಯಗ್ನಿಸ್ಟೋಮ, ಉಕ್ಥ, ಷೋಡಶೀ ವಾಜಪೇಯಿ ಅತಿರಾತ್ರ, ಅಪ್ತೋರ್ಯಾಮ ಎಂಬ ಏಳು ಸಂಸ್ಥೆಗಳು. ವರಾಹ ರೂಪದ ಶರೀರದ ಸಂಧಿ ಭಾಗಗಳೇ ದ್ವಾದಶಾಹ ಸತ್ರಗಳು. ಮಂತ್ರ, ದ್ರವ್ಯ, ಕರ್ಮ,ಜ್ಞಾನ, ಕ್ರಿಯಾಶಕ್ತಿ ಸ್ವರೂಪನಾದ ವರಾಹಸ್ವಾಮಿಯ ಲೀಲೆ ಅನಂತ.



ನರಸಿಂಹ ಪುರಾಣದ 39 ನೇ ಅಧ್ಯಾಯದಲ್ಲಿ ವರ್ಣಿಸಲ್ಪಟ್ಟಂತೆ ವರಾಹನ ನಯನದ್ವಯಗಳೇ ಸೂರ್ಯಚಂದ್ರರು. ಯಜ್ಞದರ್ಮಗಳೇ ಆತನ ಕರ್ಣಗಳು, ಹಂದಿಯ ಕೂಗು ಸಾಮಗಾನ, ಮೂಗು ಹವಿಸ್ಸು, ನಕ್ಷತ್ರ ತಾರೆಗಳೇ ಹಾರ.

ಭೂಮಿಯನ್ನು ಉದ್ಧರಿಸಿದ ವರಾಹರೂಪಿ ಮಹಾವಿಷ್ಣುವು ಕಾಕವೆಂಬ ತೀರ್ಥದಲ್ಲಿ ಅದೃಶ್ಯನಾಗಿ ಮೂಲದಲ್ಲಿ ಸೇರಿ ಸರ್ವರನ್ನು ಪೊರೆಯುತ್ತಾನೆಂದು ಪುರಾಣೋಕ್ತಿ. ಭಾದ್ರಪದ ಶುಕ್ಲ ತದಿಗೆಯ ವರಾಹ ಜಯಂತಿಯ ನಿಮಿತ್ತದಲ್ಲಿ, ಪೃಥ್ವಿಯು ಸದಾ ಸಸ್ಯ ಶ್ಯಾಮಲೆಯಾಗಲೆಂದು ವರಾಹ ಸ್ವಾಮಿಯ ಭಕ್ತರ ಕೋರಿಕೆ.

## ವರಾಹ ವೈಭವ

ಆದಿವರಾಹಮೂರ್ತಿ ಪ್ರಕೃತಿ ಪರಿಸರದ ಸಂರಕ್ಷಕನಾಗಿ ನಮ್ಮೆಲ್ಲರ ಆರಾಧ್ಯಮೂರ್ತಿ ಆಗಿ ಕಂಗೋಳಿಸುತ್ತಿದ್ದಾನೆ. ಆದ್ದರಿಂದಲೇ ಇಂದಿಗೂ ಸಂಕಲ್ಪದ ಸಮಯದಲ್ಲಿ 'ಶ್ವೇತವರಾಹಕಲ್ಪೇ, ವೈವಸ್ವತ ಮನ್ವಂತರೇ' ಎಂದೇ ಇಡೀ ಮನುಕುಲ ನೆನೆಪಿಸಿಕೊಂಡು ನಮಿಸುತ್ತದೆ.

ಭಗವಾನ್ ವೇದವ್ಯಾಸರಿಂದ ರಚಿತವಾದ ವರಾಹಪುರಾಣವು ಒಂದು ವಿಶಿಷ್ಟವಾದ, ಶ್ರೇಷ್ಠವಾದ ಸಾತ್ವಿಕ ಪುರಾಣಗಳಲ್ಲಿ ಒಂದಾಗಿದೆ. ಇದು 218 ಅಧ್ಯಾಯಗಳನ್ನು ಒಳಗೊಂಡು ಆದಿಯಲ್ಲಿ ಸೃಷ್ಟಿವಿಚಾರ , ಮಹಾಪುರುಷ, ದೇವದಾನವರ, ದಾನಿಗಳ ವಿಚಾರಗಳನ್ನು ನಿರೂಪಿಸಿದೆ.

ಏಳನೆಯ ಅಧ್ಯಾಯದಲ್ಲಿ ಗಯಾದಲ್ಲಿ ಪಿಂಡ ಪ್ರಧಾನದಿಂದ ಪಿತೃಗಳ ಉದ್ಧಾರ ವಿಚಾರ, ಗಯಾದಲ್ಲಿ ಇರುವ ಗದಾಧರನ ಮಹಿಮೆ ತಿಳಿಸುವಾಗ ಶ್ರಾದ್ಧವನ್ನು ಆಚರಿಸುವವನು ಶ್ರಾದ್ಧಕಾಲದಲ್ಲಿ ಸಿಟ್ಟು, ಅವಸರ ಮತ್ತು ಊಟಕ್ಕೆ ಕುಳಿತ ಬ್ರಾಹ್ಮಣನನ್ನು ದಾಟಿಹೋಗುವುದು, ಇವುಗಳನ್ನು ಮಾಡಕೂಡದು ಎಂದು ಹೇಳಲಾಗಿದೆ. ಶ್ರೀವರಾಹ ಪುರಾಣಾಂತರ್ಗತ ಶ್ರೀವೆಂಕಟಾಚಲ ಮಹಾತ್ಮೆ ಬಹಳ ಪ್ರಸಿದ್ಧವಾದುದು.

## ವರಾಹ ಕ್ಷೇತ್ರಗಳು

ರಾಮ, ಕೃಷ್ಣ ಮತ್ತು ನೃಸಿಂಹ ಕ್ಷೇತ್ರಗಳಿಗೆ ಹೋಲಿಸಿದರೆ ವರಾಹಕ್ಷೇತ್ರಗಳು ತುಂಬಾ ವಿರಳ.ತಿರುಪತಿಯು ಮೂಲವಾಗಿ ವರಾಹಕ್ಷೇತ್ರವಾಗಿದೆ.ಜಪ-ತಪ ಹೋಮಗಳಲ್ಲಿ "ಆದಿವರಾಹಕ್ಷೇತ್ರೇ ಆನಂದನಿಲಯ ವಿಮಾನಚ್ಛಾಯಾಯಾಂ ಅಲಮೇಲುಮಂಗಾ ಸಮೇತ ಶ್ರೀ ಶ್ರೀನಿವಾಸ ಸ್ವಾಮಿ" ಎಂದು ಸಂಕಲ್ಪ ಹೇಳುವುದು ರೂಢಿಯಲ್ಲಿದೆ.

ಸ್ವಾಮಿ ಪುಷ್ಕರಣಿಗೆ ಸೇರಿದಂತಿರುವ ವರಾಹ ಸನ್ನಿಧಿಯ ಮುಂದೆ ಅವಭೃತಸ್ನಾನ ಇತ್ಯಾದಿ ಉತ್ಸವಗಳು ಜರುಗುವುವು. ತಿರುಮಲೆಯಲ್ಲಿ ಮೊದಲು ವರಾಹದೇವ ರನ್ನು ದರ್ಶನ ಮಾಡಿ ಅನಂತರವೇ ಶ್ರೀನಿವಾಸ ದರ್ಶನ ಮಾಡುವ ಆತುರ ಆಕಾಂಕ್ಷೆಗಳಿಂದ ಬಹಳಷ್ಟು ಭಕ್ತರು ಈ ನಿಯಮವನ್ನು ಅಷ್ಟಾಗಿ ಲಕ್ಷಿಸುವುದಿಲ್ಲ.

ಅಷ್ಟಸ್ವಯಂಕ್ಷೇತ್ರಗಳಲ್ಲಿ ಒಂದಾದ ಶ್ರೀಮುಷ್ಣಂನಲ್ಲಿ ಶ್ವೇತವರಾಹ ಸ್ವಾಮಿಯು ನೆಲೆಸಿರುವಲ್ಲಿ ಒಂದು ವಿಶೇಷವಿದೆ. ಮಾಘಮಾಸದಲ್ಲಿ ಉತ್ಸವ ಮೂರ್ತಿಯನ್ನು ಸಮುದ್ರ ಸ್ನಾನೋತ್ಸವಕ್ಕಾಗಿ ತೆಗೆದುಕೊಂಡು ಹೋಗುತ್ತಾರೆ.

ಉತ್ತರ ಭಾರತದಲ್ಲಿ ಪ್ರಧಾನ ವರಹಾಕ್ಷೇತ್ರಗಳು ಕಾಣಸಿಗವು. ಮಧ್ಯಪ್ರದೇಶದ ಝಾನ್ಸಿಯಲ್ಲಿ ವರಾಹಮಂದಿರ, ಸಿಕಿಂದ್ರಾಬಾದ್‌ನಲ್ಲಿ ವರಾಹಾಲಯ, ಉಜ್ಜಯಿನಿಯಲ್ಲಿ ಕಿರಿದಾದ ಸನ್ನಿಧಿ, ಬಾದಾಮಿ ಅಜಂತ ಮುಂತಾದ ಗುಹಾಂತರ ದೇವಾಲಯಗಳಲ್ಲಿ ಸುಂದರ ವರಾಹ ಶಿಲ್ಪ ಕೃತಿಗಳನ್ನು ನೋಡಬಹುದು.

ಕರ್ನಾಟಕದಲ್ಲಿ ಮೈಸೂರು, ಬೆಂಗಳೂರು, ಮೇಲುಕೋಟೆಯಲ್ಲಿ ಪುಷ್ಕರಣಿ ಬಳಿ ವರಾಹಸನ್ನಿಧಿ ಇದೆ. ಕೃಷ್ಣರಾಜಪೇಟೆ ಬಳಿ ವರಾಹ ಕಲ್ಲಳ್ಳಿ ಇದೆ . ಇವನನ್ನು ಲಕ್ಷ್ಮೀವರಾಹ, ಭೂವರಾಹ , ಯಜ್ಞವರಾಹ, ಆದಿವರಾಹ, ಎಲ್ಲ ವೇದಗಳ ಆಗರ, ಸರ್ವ ವಿದ್ಯೆಗಳನ್ನು ದಯಪಾಲಿಸುವ, ಆಶ್ರಿತ ಸಂರಕ್ಷಕ ಎಂದೆಲ್ಲ ದಾಸರು ಕೊಂಡಾಡಿದ್ದಾರೆ.

# ಶ್ರುತಾವತೀ

- ಡಾ।। ವಾಣಿಶ್ರೀ ಬಿ.ಎಂ.
94803 22475

ಪವಿತ್ರತಮ ಭಾರತ ದೇಶದಲ್ಲಿ ಧರ್ಮ ಸಂಸ್ಥಾಪನಾರ್ಥವಾಗಿ ಭಗವಂತನು ಅವತಾರಗಳನ್ನೆತ್ತಿದ್ದಾನೆ. ದೇವತೆಗಳು ಅವನೊಡನೆ ಅವತರಿಸಿ ಧರ್ಮರಕ್ಷಣಾಕಾರ್ಯದಲ್ಲಿ ತೊಡಗಿದ್ದಾರೆ. ದೇವತೆಗಳೂ ಈ ನೆಲದಲ್ಲಿ ಅವತರಿಸಲು ತವಕಿಸುವ ಪುಣ್ಯ ಭೂಮಿಯಿದು. ಈ ನೆಲದ ವೈಶಿಷ್ಟ್ಯವೆನಿಸಿದ ರಾಮಾಯಣ,ಮಹಾಭಾರತ ಮಹಾಕಾವ್ಯಗಳು ಸಾವಿರಾರು ವರ್ಷಗಳ ಹಿಂದಿನವುಗಳಾದರೂ ಆಧುನಿಕ ಕಾಲಕ್ಕೆ ಹೆಚ್ಚು ಪ್ರಸ್ತುತವಾಗಿದೆ. ಮಹಾಭಾರತವು ಹಲವು ಅಚ್ಚರಿಗಳ ಕಾವ್ಯವಾಗಿದ್ದು ಇಂದಿಗೂ ಓದುಗರನ್ನು ಸೆಳೆಯುವ ಸಾಮರ್ಥ್ಯವುಳ್ಳದ್ದಾಗಿದೆ. ಪಂಚಮವೇದವಾದ ಮಹಾಭಾರತವು ಹಲವಾರು ಪಾತ್ರಗಳನ್ನು ತನ್ನಲ್ಲಿ ಗರ್ಭೀಕರಿಸಿಕೊಂಡಿದೆ. ಇದರಲ್ಲಿನ ಮಹಿಳೆಯರ ಪಾತ್ರ ದಿಟ್ಟವೂ, ದೃಢ ಸಂಕಲ್ಪದಿಂದ ಅಂದುಕೊಂಡಿದ್ದನ್ನು ಸಾಧಿಸುವ ಮನೋಸ್ಥೈರ್ಯವುಳ್ಳಂತವುಗಳಾಗಿವೆ.ಕುಂತಿ, ಗಾಂಧಾರಿ, ಮಾದ್ರಿ, ದ್ರೌಪದಿಯರನ್ನು ಹೆಚ್ಚು ಉಲ್ಲೇಖಿಸಲಾಗುತ್ತದೆ ಆದರೆ ಇನ್ನೂ ಹಲವಾರು ಪಾತ್ರಗಳು ನೇಪಥ್ಯದಲ್ಲೇ ಉಳಿದಿವೆ. ಅಂತಹ ಒಂದು ಪಾತ್ರ ಶ್ರುತಾವತಿ.

ಗದಾ ಪರ್ವದ 48 ನೆಯ ಅಧ್ಯಾಯದಲ್ಲಿ ಶ್ರುತಾವತಿಯ ಉಲ್ಲೇಖ ಕಂಡು ಬರುತ್ತದೆ. ದುರ್ಯೋಧನ ದ್ವೈಪಾಯನ ಸರೋವರದಲ್ಲಿ ಅಡಗಿದ್ದಾನೆ. ಪಾಂಡವರು ಅಲ್ಲಿಗೆ ಬಂದು ಅವನನ್ನು ಹೊರತರಲು ಯತ್ನಿಸುತ್ತಿದ್ದಾರೆ. ತನ್ನ ಇಬ್ಬರೂ ಶಿಷ್ಯರ ಗದಾಯುದ್ಧ ನೋಡಲು ಬಂದ ಬಲರಾಮ ತಾನು ತೀರ್ಥಯಾತ್ರೆಯ ಸಂದರ್ಭದಲ್ಲಿ ದರ್ಶಿಸಿದ ಬದರ ಪಾಚನ ತೀರ್ಥವನ್ನು ಕುರಿತು ಹೇಳುವಾಗ ಶ್ರುತಾವತಿಯ ಕಥೆಯನ್ನು ಹೇಳುತ್ತಾನೆ.

ತಪೋಧನರು ಹಾಗೂ ಧರ್ಮಾತ್ಮರಾದ ಭರದ್ವಾಜ ಮುನಿಗಳು ಒಮ್ಮೆ ಘೃತಾಚಿ ಎಂಬ ಅಪ್ಸರೆಯನ್ನು ಕಂಡು ವಿಚಲಿತರಾಗಿ ಅವರ ರೇತಸ್ಸು ಜಾರುತ್ತದೆ. ಅದನ್ನು ಒಡನೆಯೇ ಕೈಗೆತ್ತಿಕೊಂಡರೂ ನಿಲ್ಲದೆ ಎಲೆಯ ದೊನ್ನೆಯಲ್ಲಿ ಬಿದ್ದು ಹೆಣ್ಣು ಮಗುವಿನ ಜನನವಾಗುತ್ತದೆ. ವಿಪ್ರರ್ಷಿ ಭರದ್ವಾಜರು ತನ್ನ ಮಗಳಿಗೆ ಜಾತಕರ್ಮಾದಿ ಸಂಸ್ಕಾರಗಳನ್ನು ಮಾಡಿ ದೇವರ್ಷಿಗಳ ಸಭೆಯಲ್ಲಿ ಅವಳಿಗೆ ಶ್ರುತಾವತಿ ಎಂದು ನಾಮಕರಣ ಮಾಡಿ ತನ್ನ ಆಶ್ರಮದಲ್ಲೇ ಬೆಳೆಯಲು ಬಿಟ್ಟು ಹಿಮಾಚಲದ ಅರಣ್ಯಕ್ಕೆ ಹೊರಟು ಹೋಗುತ್ತಾರೆ. ಬ್ರಹ್ಮಚಾರಿಣಿಯಾದ ಆ ಕನ್ಯೆಯು ದೇವೇಂದ್ರನನ್ನು ಪತಿಯಾಗಿ ಪಡೆಯುವ ಹಂಬಲದಿಂದ ಬದರಪಾಚನವೆಂಬ ಪುಣ್ಯ ತೀರ್ಥದ ಸಮೀಪದಲ್ಲಿ ಸ್ತ್ರೀಯರಿಗೆ ದುಷ್ಕರವಾದ ನಿಯಮಾನುಷ್ಠಾನಗಳಿಂದ ಅತ್ಯುಗ್ರ ತಪಸ್ಸನ್ನು ಮಾಡುತ್ತಿರುತ್ತಾಳೆ. ಅವಳ ಕಠೋರ ತಪಸ್ಸಿಗೆ, ಶ್ರೇಷ್ಠ ಭಕ್ತಿಗೆ ಮೆಚ್ಚಿದ ಇಂದ್ರನು ಮಹಾತ್ಮವಸಿಷ್ಠರ ರೂಪ ಧರಿಸಿ ಅವಳ ಆಶ್ರಮಕ್ಕೆ ಬಂದನು. ಶ್ರುತಾವತಿಯು ಅವರನ್ನು ಯಥೋಚಿತವಾಗಿ ಸತ್ಕರಿಸಿ ಪಾಣೀಗ್ರಹಣವನ್ನು ಹೊರತುಪಡಿಸಿ ಬೇರೇನನ್ನಾದರೂ ಅಪೇಕ್ಷಿಸಿದರೆ ಕೊಡಲು ಸಿದ್ಧ ಎನ್ನುತ್ತಾಳೆ. ತನ್ನ ವ್ರತಾನುಷ್ಠಾನ, ನಿಯಮ, ತಪಸ್ಸುಗಳಿಂದ ಮೂರುಲೋಕದ ಒಡೆಯನಾದ ಇಂದ್ರನನ್ನು ವರಿಸಬೇಕೆಂದಿರುವ ತನ್ನ ಮನದಾಸೆಯನ್ನು ಅರುಹುತ್ತಾಳೆ. ಆಗ ಇಂದ್ರನು ತಪಸ್ಸಿನಿಂದ ಎಲ್ಲವೂ ಸಾಧ್ಯ ಉಗ್ರತಪಸ್ಸಿನಿಂದ ಮಾನವರೂ ದೇವತ್ವ ಪಡೆದುಕೊಳ್ಳುತ್ತಾರೆ. ಹಾಗಾಗಿ ನಿನ್ನ ಮನೋರಥವು ಪೂರೈಸುತ್ತದೆ ಎಂದು ಹೇಳಿ.

ಪಞ್ಚ ಚೈತಾನಿ ಸುಭಗೇ ಬದರಾಣಿ ಶುಭವ್ರತೇ ಪಚ।

ಸೌಭಾಗ್ಯಶಾಲಿಯಾದ ಶ್ರುತಾವತಿಗೆ ಅವುಗಳನ್ನು ಬೇಯಿಸಲು ಹೇಳಿ ಅಲ್ಲಿಯೇ ಸಮೀಪದಲ್ಲಿದ್ದ ಶ್ರೇಷ್ಠವಾದ ತೀರ್ಥದಲ್ಲಿ ಮಿಂದು ಜಪ ಮಾಡಲು ಯೋಗ್ಯವಾದ ಮಹಾಮಂತ್ರಗಳನ್ನು ಜಪಿಸಿದನು. ಪಾಕಶಾಸನನು ಶ್ರುತಾವತಿಯನ್ನು ಇನ್ನೂ ಪರೀಕ್ಷಿಸುವ ಸಲುವಾಗಿ ಎಲಚೀ ಹಣ್ಣುಗಳನ್ನು ಬೇಯದಂತೆ ಮಾಡಿದನು. ಶೌಚಾಚಾರ ಸಂಪನ್ನೆಯಾದ, ತಪಸ್ವಿಯಾದ ಆಕೆ ಮೌನವನ್ನು ಧರಿಸಿ ಆ ಐದು ಹಣ್ಣುಗಳನ್ನು ಒಲೆಯ ಮೇಲಿಟ್ಟು ಬೇಯಿಸತೊಡಗಿದಳು. ಆ ಹಣ್ಣುಗಳು ಬೇಯಲಿಲ್ಲ. ಆ ದಿವಸ ಕಳೆದರೂ ಅವು ಬೇಯಲಿಲ್ಲ. ಕಟ್ಟಿಗೆಯ ರಾಶಿಯೂ ಮುಗಿದಿತ್ತು. ಬೆಂಕಿ ಕಟ್ಟಿಗೆಯಿಲ್ಲದೆ ಆರಿ ಹೋಗುವುದನ್ನು ಗಮನಿಸಿದ ಆಕೆ ತನ್ನೆರಡು ಪಾದಗಳನ್ನು ಬೆಂಕಿಯಲ್ಲಿಟ್ಟು ಬೇಯಿಸತೊಡಗಿದಳು ಅವು ಉರಿದು ಹೋದ ಹಾಗೆಲ್ಲ ತನ್ನ ದೇಹವನ್ನು ಅಗ್ನಿಗೆ ಒಡ್ಡುತ್ತಲೇ ಇದ್ದಳು ವಸಿಷ್ಠರ ಮಾತನ್ನು ನಡೆಸಬೇಕೆಂಬ ಏಕ ಮಾತ್ರ ಉದ್ದೇಶ ಅವಳಲ್ಲಿತ್ತು.

ತಸ್ಯಾಸ್ತು ಚರಣೌ ವಹ್ನಿರ್ದದಾಹ ಭಗವಾನ್ಸ್ವಯಮ್।
ನ ಚ ತಸ್ಯಾ ಮನೋ ದುಃಖ ಸ್ವಲ್ಪ ಮಧ್ಯ ಭವತ್ತಪಾ।

ತನ್ನ ಚರಣಗಳು ಉರಿಯುತ್ತಿದ್ದರೂ ಅವಳ ಮುಖಭಾವದಲ್ಲಿ ಸ್ವಲ್ಪವೂ ವ್ಯತ್ಯಾಸವಿರಲಿಲ್ಲ ಅಗ್ನಿಯು ಸುಡುತ್ತಿದ್ದರೂ ನೀರಿನ ಮಧ್ಯೆ ಇರುವಂತೆ ಪ್ರಸನ್ನ ವದನ ಹಾಗೂ ಮನಸ್ಸುಗಳಿಂದ ಕೂಡಿದವಳಾಗಿದ್ದಳು "ಸರ್ವಥಾ ಬದರಾಣ್ಯೇವ ಪಕ್ತವಾನಿ" ಎಂಬುದು ಅವಳ ಗಮನವಾಗಿತ್ತು. ಇಡೀ ಶರೀರದ ಅವಯವಗಳನ್ನು ಒಟ್ಟಿ ಬೇಯಿಸುತ್ತಲೇ ಇದ್ದಳು. ಹಣ್ಣುಗಳನ್ನು ಬೇಯಿಸುವುದರತ್ತ ಅವಳ ಗಮನ ಕೇಂದ್ರೀಕೃತವಾಗಿತ್ತು. ಇದನ್ನು ಕಂಡ ಶಕ್ರನು ಸುಪ್ರೀತನಾಗಿ ತನ್ನ ನಿಜರೂಪವನ್ನು ದೃಢವ್ರತಳಾದ ಶ್ರುತಾವತಿಗೆ ಪ್ರಕಟಪಡಿಸಿದನು. ಅವಳ ಪರಾಭಕ್ತಿಯನ್ನು ಮೆಚ್ಚಿ ಇಂದ್ರನು ತಾನು ಪ್ರಸನ್ನನಾಗಿರುವೆನೆಂದು ಹೇಳಿ, ಮಾನವ ದೇಹ ತ್ಯಜಿಸಿ ಶ್ರುತಾವತಿ ಸ್ವರ್ಗದಲ್ಲಿ ತನ್ನೊಡನೆ ವಾಸ ಮಾಡುವಳೆಂದು ಅವಳಿಗೆ ಪ್ರೇಮ ವಚನಗಳನ್ನು ಹೇಳಿದನು. ಅವಳಿದ್ದ ಸ್ಥಳದಲ್ಲಿದ್ದ ತೀರ್ಥವು "ಬದರ ಪಾಚನ ತೀರ್ಥ" ಎಂದು ಪ್ರಸಿದ್ಧಿಯಾಗುವುದಾಗಿ ಹೇಳಿ ಅನುಗ್ರಹಿಸಿದನು. ನಂತರ ಇಂದ್ರನು ಯಾವನು ಏಕಾಗ್ರಚಿತ್ತನಾಗಿ ಈ ಕ್ಷೇತ್ರದಲ್ಲಿ ಕಳೆಯುತ್ತಾನೋ, ಈ ತೀರ್ಥಸ್ನಾನ ಮಾಡುತ್ತಾನೆಯೋ ಅವನು ಅವಸಾನಾನಂತರ ಸುದುರ್ಲಭವಾದ ಉತ್ತಮ ಲೋಕಗಳನ್ನು ಪಡೆಯುತ್ತಾನೆ ಎಂದು ವರ ದಯಪಾಲಿಸುತ್ತಾನೆ. ಶ್ರುತಾವತಿಯು ಮನುಷ್ಯ ಶರೀರ ತ್ಯಾಗ ಮಾಡಿ ಇಂದ್ರನ ಮಡದಿಯಾಗುತ್ತಾಳೆ.

ಶ್ರುತಾವತಿಯ ಧರ್ಮನಿಷ್ಠೆ, ಕೆಲಸದಲ್ಲಿ ಏಕಾಗ್ರತೆ, ದೃಢಸಂಕಲ್ಪ ಇವು ಮಾನವ ಅನುಸರಿಸಬೇಕಾದ ಗುಣಗಳು,ಯಥೋಚಿತವಾದ ಧರ್ಮವನ್ನು ಆಚರಿಸುತ್ತಾ ಏಕಾಗ್ರತೆಯಿಂದ ಮಾಡುವ ಕಾರ್ಯ ನಿಶ್ಚಯವಾಗಿಯೂ ಸಫಲವಾಗುತ್ತದೆ. ಅಗ್ನಿಯಂತೆ ಕಷ್ಟ ಕೋಟಲೆಗಳು ದಹಿಸುತ್ತಿದ್ದರೂ ವಿಚಲಿತರಾಗದೆ ಪರಮಾತ್ಮನಲ್ಲಿ ಏಕಾಗ್ರ ಚಿತ್ತ ಸಾಧಿಸಿದರೆ ಮೋಕ್ಷ ಸಾಧನೆ, ಗುರಿ ಸಾಧನೆ ಖಂಡಿತ ಸಾಧ್ಯ ಎಂಬ ಸಂದೇಶವನ್ನು ಶ್ರುತಾವತಿ ನೀಡುತ್ತಾಳೆ.



**ಕರ್ನಾಟಕದ ವೈಷ್ಣವ ಕ್ಷೇತ್ರಗಳು**

# ಚನ್ನಪಟ್ಟಣದ ಶ್ರೀ ವರಪ್ರದ ವರದರಾಜಸ್ವಾಮಿ ದೇವಾಲಯ

**34**



-ಕೆಂಗೇರಿ ಚಕ್ರಪಾಣಿ
94483 86886

**ಶ್ರೀ ಸೌಮ್ಯನಾಯಕಿ ಸಮೇತ ಶ್ರೀ ವರಪ್ರದ ವರದರಾಜಸ್ವಾಮಿ ಬ್ರಹ್ಮರಥೋತ್ಸವವು ಜ್ಯೇಷ್ಠ ಮಾಸದ ಶುಕ್ಲಪಕ್ಷದ ಪಂಚಮಿಯಂದು ಆರಂಭವಾಗಿ, ಜ್ಯೇಷ್ಠ ಶುಕ್ಲ ಏಕಾದಶಿಯಂದು ಹಸ್ತಾ ನಕ್ಷತ್ರಯುಕ್ತವಾದ ಶುಭದಿನದಲ್ಲಿ ಬೆಳಗ್ಗೆ 9.30 ರಿಂದ 10.15 ಗಂಟೆಯೊಳಗೆ ಪಾಂಚರಾತ್ರಾಗಮ ರೀತ್ಯಾ ಸಹಸ್ರಾರು ಭಕ್ತರ ಸಮ್ಮುಖದಲ್ಲಿ ಬಹಳ ವೈಭವವಾಗಿ ನೆರವೇರುತ್ತದೆ.**

ರಾಮನಗರ ಜಿಲ್ಲೆಯ ಒಂದು ತಾಲ್ಲೂಕು ಕೇಂದ್ರವಾದ ಚನ್ನಪಟ್ಟಣದಲ್ಲಿ ಅನೇಕ ಪ್ರಾಚೀನ ದೇವಾಲಯಗಳಿವೆ. ಚನ್ನಪಟ್ಟಣದ ಕೋಟೆಯ ಪ್ರದೇಶದಲ್ಲಿರುವ ತಾಲ್ಲೂಕಿನ ಪ್ರಮುಖ ದೇವಾಲಯ ಶ್ರೀವರದರಾಜ ಸ್ವಾಮಿ ದೇವಾಲಯ. ದೇವಾಲಯವು ಬೃಹದಾಕಾರದಲ್ಲಿ ಭವ್ಯವಾಗಿದ್ದು, ಗರ್ಭಗುಡಿ, ಅಂತರಾಳ, ನವರಂಗ, ವಿಶಾಲವಾದ ಮತ್ತು ಎತ್ತರವಾದ ಸ್ತಂಭಗಳನ್ನು ಹೊಂದಿರುವ ಮುಖಮಂಟಪ, ಪ್ರವೇಶ ಮಂಟಪ ಹಾಗೂ ರಾಜಗೋಪುರಗಳನ್ನೊಳಗೊಂಡಿರುವ ರಚನೆಯಾಗಿದೆ. ದೇವಾಲಯವು ವಿಜಯನಗರ ಶೈಲಿಯಲ್ಲಿದ್ದರೂ ಗರ್ಭಗುಡಿಯಲ್ಲಿರುವ ವರದ ರಾಜಸ್ವಾಮಿಯು ಬಹಳ ಆಕರ್ಷಕವಾಗಿದ್ದು, ಮೂರ್ತಿ ಶಿಲ್ಪದ ಲಕ್ಷಣದಿಂದ ವಿಜಯನಗರ ಅರಸರ ಕಾಲದ ಪೂರ್ವಕ್ಕೆ ಸೇರುತ್ತದೆ. ಇಲ್ಲಿಯ ಸ್ಥಳಪುರಾಣದ ಪ್ರಕಾರ ವರದರಾಜಸ್ವಾಮಿಯನ್ನು ಕಣ್ವ ಮಹರ್ಷಿಗಳು ಆರಾಧಿಸಿದರೆಂದು, ಶ್ರೀರಾಮಾನುಜಾಚಾರ್ಯರು ಪ್ರತಿಷ್ಠಾಪಿಸಿರುವ ಮೂರ್ತಿಯೆಂದು ಅಭಿಪ್ರಾಯವಿದೆ. ಗರ್ಭಗುಡಿಯಲ್ಲಿರುವ ಶ್ರೀ ವರದ ರಾಜಸ್ವಾಮಿ ಬಹಳ ಸೊಗಸಾಗಿದ್ದು ಚತುರ್ಭುಜ ಧಾರಿಯಾಗಿರುವನು. ಗರುಡಪೀಠದ ಮೇಲೆ ಸಮಭಂಗಿಯಲ್ಲಿರುವ ದೇವನ ಮೇಲಿನ ಬಲಗೈಯಲ್ಲಿ ಚಕ್ರ, ಮೇಲಿನ ಎಡಗೈಯಲ್ಲಿ ಶಂಖ, ಕೆಳಗಿನ ಎಡಗೈಯಲ್ಲಿ ಗದೆಯನ್ನು ಧರಿಸಿದ್ದು ಮತ್ತು ಕೆಳಗಿನ ಬಲಗೈಯಲ್ಲಿ ಪದ್ಮವನ್ನು ಹಿಡಿದಿರುವ ಅಭಯ ಹಸ್ತವಾಗಿದೆ. ಕಿರೀಟಮಕುಟವನ್ನು ಸ್ವಾಮಿಯು ಧರಿಸಿದ್ದು, ಮುಖಾರವಿಂದವು ಆಕರ್ಷಕವಾಗಿದೆ. ನವರಂಗದಲ್ಲಿ ಒಂದು ಕಡೆ ಉತ್ಸವ ಮೂರ್ತಿಗಳು ಹಾಗೂ ಆಳ್ವಾರರ ಪಂಚಲೋಹದ ಪ್ರತಿಮೆಗಳನ್ನಿರಿಸಲಾಗಿದೆ. ಇಲ್ಲಿರುವ ಉತ್ಸವಮೂರ್ತಿಯು ಬಹಳ ಆಕರ್ಷಕವಾಗಿದ್ದು ಪ್ರಾಚೀನ ಲೋಹ ಶಿಲ್ಪದ ಲಕ್ಷಣದಲ್ಲಿದೆ. ಅಂತರಾಳದ ಇಕ್ಕೆಲಗಳಲ್ಲಿ ವಿಷ್ಣುವಿನ ದ್ವಾರಪಾಲಕರಾದ ವಿಜಯನಗರ ಶೈಲಿಯ ಜಯ - ವಿಜಯರಿರುವರು. ನವರಂಗದಲ್ಲಿ ಪ್ರಣಾಮಮುದ್ರೆಯಲ್ಲಿರುವ ಗರುಡ ದೇವನ ಶಿಲಾ ಪ್ರತಿಮೆಯಿದೆ. ಈ ದೇವಾಲಯದ ಮುಖಮಂಟಪದ ಎರಡೂ ಕಡೆಗಳಲ್ಲಿ ವೇದಿಕೆಯ ರಚನೆಯಿದ್ದು, ಸ್ವಾಮಿಯ ಕಲ್ಯಾಣೋತ್ಸವ ಮುಂತಾದ ಸಂದರ್ಭದಲ್ಲಿ ಬಳಸಲಾಗುತ್ತದೆ. ಮುಖಮಂಟಪದ ಬಲಗಡೆಯ ವೇದಿಕೆಯಲ್ಲಿರುವ ಮೂರು ಸಣ್ಣ ಗುಡಿಗಳಲ್ಲಿ ಕ್ರಮವಾಗಿ ತಿರುಮಂಗೈ ಆಳ್ವಾರ್, ರಾಮಾನುಜಾಚಾರ್ಯರು, ಮಣವಾಳ ಮಾಮುನಿಗಳ ಮೂರ್ತಿಗಳಿದ್ದರೆ. ಎಡ ಭಾಗದ ವೇದಿಕೆಯಿರುವ ಗರ್ಭಗುಡಿಗಳಲ್ಲಿ ಮಡಪಳ್ಳಿ ನಾಚ್ಚಿಯಾರ್ (ಅಡುಗೆ ಅಮ್ಮನವರು ) ನಮ್ಮಾಳ್ವಾರ್, ವೇದಾಂತ ದೇಶಿಕರ್‌ರವರ ಮೂರ್ತಿಗಳಿವೆ.

ವರದರಾಜಸ್ವಾಮಿಯ ದೇವಾಲಯದ ಹಿಂಬದಿಯಲ್ಲಿ ನೈಋತ್ಯ ದಿಕ್ಕಿನಲ್ಲಿ ವಿಷ್ಣುಪತ್ನಿ ಸೌಮ್ಯನಾಯಕಿ ಅಮ್ಮನವರ ಗುಡಿಯಿದೆ. ಗರ್ಭಗುಡಿಯಲ್ಲಿ ಮೇಲಿನ ಕೈಗಳಲ್ಲಿ ಕಮಲ ಪುಷ್ಪವನ್ನು ಹಿಡಿದಿರುವ, ಅಭಯ, ವರದಹಸ್ತವನ್ನು ಹೊಂದಿರುವ ದೇವಿಯ ಮೂರ್ತಿಯು ಬಹಳ ಕಲಾತ್ಮಕವಾಗಿದೆ. ಪ್ರಧಾನ ದೇವಾಲಯದ ಹಿಂಬದಿಯಲ್ಲಿ ವಾಯುವ್ಯ ದಿಕ್ಕಿನಲ್ಲಿ ಗೋದಾದೇವಿಯ ಗುಡಿಯಿದೆ.

ವರಪ್ರದ ವರದರಾಜಸ್ವಾಮಿಗೆ ಇತ್ತೀಚಿನ ಸ್ವರ್ಣಲೇಪಿತ ಶಿಖರವಿದೆ. ಈ ದೇವಾಲಯದ ಪ್ರವೇಶ ಗೋಪುರವು ಬಹಳ ಉನ್ನತವಾಗಿದ್ದು ಮೇಲಕ್ಕೆ ಕಿರಿದಾಗುತ್ತ ಸಾಗುವ ಸಣ್ಣ ಗರ್ಭಗೃಹದ ಮಾದರಿಯ ಗೂಡುಗಳಿವೆ. ಗೋಪುರದ ತುದಿಯಲ್ಲಿ ಹಿತ್ತಾಳೆಯ ಪಂಚ ಕಳಸಗಳಿವೆ. ದೇವಾಲಯವು ಬಹುತೇಕ ದೊಡ್ಡಮಳೂರಿನ ಅಪ್ರಮೇಯ ಸ್ವಾಮಿಯ ದೇವಾಲಯದಂತೆ ಇರುವುದು ಗಮನಾರ್ಹ.

ಶ್ರೀ ಸೌಮ್ಯನಾಯಕಿ ಸಮೇತ ಶ್ರೀ ವರಪ್ರದ ವರದರಾಜಸ್ವಾಮಿ ಬ್ರಹ್ಮರಥೋತ್ಸವವು ಜ್ಯೇಷ್ಠ ಮಾಸದ ಶುಕ್ಲಪಕ್ಷದ ಪಂಚಮಿಯಂದು






ಆರಂಭವಾಗಿ, ಜ್ಯೇಷ್ಠ ಶುಕ್ಲ ಏಕಾದಶಿಯಂದು ಹಸ್ತಾ ನಕ್ಷತ್ರಯುಕ್ತವಾದ ಶುಭದಿನದಲ್ಲಿ ಬೆಳಗ್ಗೆ 9.30 ರಿಂದ 10.15 ಗಂಟೆಯೊಳಗೆ ಪಾಂಚರಾತ್ರಾಗಮ ರೀತ್ಯಾ ಸಹಸ್ರಾರು ಭಕ್ತರ ಸಮ್ಮುಖದಲ್ಲಿ ಬಹಳ ವೈಭವವಾಗಿ ನೆರವೇರುತ್ತದೆ. ಉತ್ಸವದ ಅಂಗವಾಗಿ ಪಂಚಮಿಯ ದಿನ ಸ್ವಾಮಿಗೆ ಮಹಾಭಿಷೇಕ, ಮೃತ್ತಿಕಾ ಸಂಗ್ರಹ, ಅಂಕುರಾರ್ಪಣ ರಕ್ಷಾಬಂಧನ, ಗರುಡ ಪ್ರತಿಷ್ಠೆ, ಮಹಾಮಂಗಳಾರತಿ, ಷಷ್ಠಿಯ ದಿನ ಧ್ವಜಾರೋಹಣ, ಭೇರಿತಾಡನ ಉತ್ಸವ, ಯಾಗಶಾಲ ಪ್ರವೇಶ, ಸಪ್ತಮಿಯಲ್ಲಿ ಶಾತ್ತುಮುರೈ ಉತ್ಸವ, ಹಂಸ ವಾಹನೋತ್ಸವ, ನಂತರ ದಿನಗಳಲ್ಲಿ ಕ್ರಮವಾಗಿ ಶೇಷವಾಹನೋತ್ಸವ, ಪುಷ್ಪ ಮಂಟಪೋತ್ಸವ, ಪ್ರಹ್ಲಾದ ಪರಿಪಾಲನೋತ್ಸವ, ಗರುಡೋತ್ಸವ, ಗಜೇಂದ್ರ ಮೋಕ್ಷ, ಗಜವಾಹನೋತ್ಸವಗಳು ನಡೆದು ಜ್ಯೇಷ್ಠ ಶುಕ್ಲ ಏಕಾದಶಿಯ ದಿನ ಬೆಳಗ್ಗೆ ಅದ್ದೂರಿಯ ರಥೋತ್ಸವವು ಬಹಳ ವೈಭವವಾಗಿ ಸಹಸ್ರಾರು ಭಕ್ತರ ಸಮ್ಮುಖದಲ್ಲಿ ಅದ್ದೂರಿಯಾಗಿ ನೆರವೇರುತ್ತದೆ. ಬ್ರಹ್ಮ ರಥೋತ್ಸವದ ಎರಡು ದಿನದ ತರುವಾಯ ಸ್ವಾಮಿಗೆ ತೆಪ್ಪೋತ್ಸವವನ್ನು ಸಮೀಪದ ದೊಡ್ಡಮಳ್ಳೂರಿನ ಸುಪ್ರಸಿದ್ಧ ಅಪ್ರಮೇಯ ದೇವಾಲಯದ ಕಲ್ಯಾಣಿಯಲ್ಲಿ ಬಹಳ ವಿಜೃಂಭಣೆಯಿಂದ ಆಚರಿಸಲಾಗುತ್ತದೆ. ಪುಷ್ಪಾಲಂಕೃತ ತೆಪ್ಪದಲ್ಲಿ ಉತ್ಸವಮೂರ್ತಿಯನ್ನಿರಿಸಿ ತೆಪ್ಪೋತ್ಸವವನ್ನು ಸಾವಿರಾರು ಜನರ ಸಮ್ಮುಖದಲ್ಲಿ ಆಚರಿಸಲಾಗುವುದು. ಅಂದಿನ ಶುಭದಿನದಂದು ಅಲ್ಲಿ ನೆರೆದಿರುವ ಎಲ್ಲ ಭಕ್ತರಿಗೂ ಪ್ರಸಾದದ ವ್ಯವಸ್ಥೆಯನ್ನು ವರದರಾಜ ಸ್ವಾಮಿ ಭಕ್ತಮಂಡಳಿಯವರು ಬಹು ಹಿಂದಿನಿಂದಲೂ ನಡೆಸಿಕೊಂಡು ಬಂದಿರುವರು. ನಂತರದ ಹಲವಾರು ಉತ್ಸವಗಳು ನಡೆದು ಧ್ವಜಾವರೋಹಣದೊಂದಿಗೆ ಅದ್ದೂರಿಯ ಉತ್ಸವಕ್ಕೆ ತೆರೆ ಬೀಳುತ್ತದೆ. ಶ್ರೀವರದರಾಜ ಸ್ವಾಮಿಯ. ದೇವಾಲಯದ ಬಹಳಷ್ಟು ಭಾಗಗಳು ಶಿಥಿಲ ಹಂತವನ್ನು ತಲುಪಿತ್ತು. ಸೌಮ್ಯನಾಯಕಿ ಅಮ್ಮನವರ ಗುಡಿಬಿದ್ದು ಹೋಗಿ ದೇವಿಯ ವಿಗ್ರಹವನ್ನು ವರದರಾಜಸ್ವಾಮಿಯ ಗುಡಿಯಲ್ಲಿ ಸಂರಕ್ಷಿಸಲಾಗಿತ್ತು. ದೇವಾಲಯವನ್ನು ಜೀರ್ಣೋದ್ಧಾರಮಾಡಿ ಉಳಿಸಿದ ಕೀರ್ತಿ ದಾಸರೆಂದೇ ಪ್ರಖ್ಯಾತರಾದ ಶ್ರೀಕೃಷ್ಣಮೂರ್ತಿಯವರಿಗೆ ಸಲ್ಲುತ್ತದೆ. ಶಿಕ್ಷಣ ಇಲಾಖೆಯಲ್ಲಿ ಉನ್ನತ ಹುದ್ದೆಯಲ್ಲಿ ಕೆಲಸಮಾಡಿ ನಿವೃತ್ತರಾಗಿದ್ದ ಶ್ರೀಯುತರು ತಮ್ಮ ಜೀವನವನ್ನು ಸ್ವಾಮಿಯ ಸೇವೆಗಾಗಿ ಮುಡುಪಾಗಿಟ್ಟಿದ್ದರು.

ಶ್ರೀ ಕೃಷ್ಣಮೂರ್ತಿಯವರು ಮತ್ತು ಶ್ರೀ ಕೆ.ಆರ್. ಪಾರ್ಥ ಸಾರಥಿಯವರ ಪುತ್ರರಾದ ಶ್ರೀ ರಮೇಶ್ ಕುಮಾರ್ ಶ್ರೀ ಕೃಷ್ಣ ಚಾರಿಟಬಲ್ ಟ್ರಸ್ಟ್‌ನ ಸಂಸ್ಥಾಪಕ ಅಧ್ಯಕ್ಷರಾದ ಡಾ.ಆರ್.ಎನ್. ವರದರಾಜ ಸ್ವಾಮಿಯವರು ಮುಂತಾದ ಭಕ್ತಾದಿಗಳ ಸಹಕಾರದಿಂದ ದಿ. 16.11.2015 ರಂದು ಶ್ರೀ ಶ್ರೀ ಶ್ರೀ ಯದುಗಿರಿ ಯತಿರಾಜ ನಾರಾಯಣ ರಾಮಾನುಜ ಜೀಯರ್ ಸ್ವಾಮಿಗಳ ಮಂಗಳಶಾಸನದೊಂದಿಗೆ ಅಮ್ಮನವರ ಗುಡಿಯನ್ನು ಮೂಲಸ್ವರೂಪದಂತೆ ನವೀಕರಿಸಲಾಗಿದೆ. ಕೃಷ್ಣಮೂರ್ತಿಯವರು ತಮ್ಮ ನಿವೃತ್ತಿ ಪಿಂಚಣಿ ಹಣದ ಬಹುಭಾಗವನ್ನು ದೇವರ ಪೂಜೆ ಪುನಸ್ಕಾರಗಳು ನಿರಂತರವಾಗಿ ನಡೆಯಲು ಹಾಗೂ ದೇವರ ದೇವಾಲಯದ ದೈನಂದಿನ ಖರ್ಚು ವೆಚ್ಚಗಳಿಗೆ ನೀಡುತ್ತಾ ಬರುತ್ತಿದ್ದರು. ದೇವಾಲಯಕ್ಕೆ ಬರುವ ಭಕ್ತರನ್ನು ಅಕ್ಕರೆಯಿಂದ ಮಾತನಾಡಿಸುತ್ತಿದ್ದ ಶ್ರೀಯುತರು ಬಹಳ ಜನಾನುರಾಗಿಗಳಾಗಿದ್ದರು. ಶ್ರೀ ಕೃಷ್ಣಮೂರ್ತಿಗಳು ತಮ್ಮ ತೊಂಬತ್ತನೆಯ ವಯಸ್ಸಿನಲ್ಲಿ ಇತ್ತೀಚಿಗೆ ಪರಮಪದವನ್ನು ಸೇರಿದರು. ಕೃಷ್ಣಮೂರ್ತಿಯವರ ಮಕ್ಕಳು ತಮ್ಮ ತಂದೆಯವರು ಹಾಕಿದ ಹಾದಿಯಲ್ಲಿಯೇ ಸಾಗುತ್ತಿದ್ದು ದೇವರ ಸೇವಾಕೈಂಕರ್ಯಗಳನ್ನು ಮುಂದುವರೆಸಿಕೊಂಡು ಹೋಗುತ್ತಿರುವುದು ಅಭಿನಂದನೀಯ.

**ಹೀಗೆ ಬನ್ನಿ:** ರಾಮನಗರ ಜಿಲ್ಲೆ ಚನ್ನಪಟ್ಟಣವು, ಜಿಲ್ಲೆಯ ಒಂದು ತಾಲ್ಲೂಕು ಕೇಂದ್ರವಾಗಿದ್ದು, ಬೆಂಗಳೂರು ಮೈಸೂರು ರಸ್ತೆಯಲ್ಲಿ ಬೆಂಗಳೂರಿನಿಂದ 60 ಕಿ.ಮೀ. ದೂರದಲ್ಲಿದೆ.



# ಬಲರಾಮ ಜಯಂತಿ ಸಂದರ್ಭವಾಗಿ
## (05-09-2023)

# ಬಲರಾಮ-ಬಲದೇವ-ಬಲಭದ್ರ

ಡಾ॥ಎನ್.ಕೆ. ರಾಮಶೇಷನ್

"ವಸುದೇವ ಸುತಂ ದೇವಂಕಂಸಚಾಣೂರಮರ್ದನಂ।"
ದೇವಕೀ ಪರಮಾನಂದಂ ಶ್ರೀಕೃಷ್ಣಂವಂದೇ ಜಗದ್ಗುರುಂ॥"

ಎಂಬುವ ಶ್ಲೋಕದಂತೆಯೇ "ಪ್ರಸಿದ್ಧ ಭಕ್ತ ಕವಿ ವಿಜಯ ದೇವ-ಜಯದೇವ ಗೋಸ್ವಾಮಿ ತನ್ನ "ಅಷ್ಟಪದಿ"ಗಳಲ್ಲಿ ಸ್ಮರಿಸಿರುವ ಈ ಸಾಲುಗಳೂ ಕೂಡ ಭಕ್ತರ ಮನ ಸೆಳೆಯುತ್ತವೆ, ಬದುಕಿಗೆ ಒಳ್ಳೆಯದನ್ನು ಮಾಡುತ್ತವೆ. ಈ ಇಹದ ಜೀವನವನ್ನು ಸ್ವೀಕರಣೀಯ ಅನಿಸುತ್ತದೆ.ದಶಾವತಾರ(ಶ್ರೀ ಮಹಾ ವಿಷ್ಣುವಿನ) ಕುರಿತು ಅಷ್ಟಪದಿ ಹಾಡುವ ಕವಿ ಜಯದೇವನು ಶ್ರೀಕೃಷ್ಣನ ಹಿರಿಯ ಸೋದರ ಬಲರಾಮದೇವನನ್ನು ಹೀಗೆ ಸ್ಮರಿಸುತ್ತಾನೆ. ಪ್ರಳಯಪಯೋಧಿಜಯೇ...ಮತ್ಸ್ಯಾವತಾರದಿಂದ ಆರಂಭವಾಗುವ ಈ ಸ್ತುತಿ,ಕಲ್ಕಿ ಅವತಾರ ಸ್ತುತಿಯೊಂದಿಗೆ ಮುಗಿಯುತ್ತದೆ.ಎಲ್ಲ ಪದ್ಯವು ವಿಷ್ಣುವಿನ ಒಂದೊಂದು ಅವತಾರದ ಶ್ರೇಷ್ಠತೆಯನ್ನು ಪ್ರಶಂಸಿಸುತ್ತದೆ. ಗಮನಿಸೋಣ.

ಜಯ ಜಗದೀಶ ಹರೇ ॥ಪ॥ ಪ್ರಳಯ ಪಯೋಧಿಜಯೇ
ವಹಿಸಿ ವಪುಷಿ ವಿಷದೇ ವಸಪುಂ ಜಲದಾಭಂ
ಹಲ - ಹತಿ - ಭೀತಿ - ಮಿಳಿತ - ಯಮುನಾಭಮ್
ಕೇಶವ ಧೃತ - ಹಲಧರ - ರೂಪ
ಜಯ ಜಗದೀಶ ಹರೇ ॥7॥

(ಏಳನೆಯ ಅವತಾರ ಬಲರಾಮ)

ಈ ಇಡೀ ಅಷ್ಟಪದಗಳನ್ನು ಶ್ರೀ ಘಂಟಸಾಲ ಅವರು ತುಂಬಾ ಸುಶ್ರಾವ್ಯವಾಗಿ ಹಾಡಿರುವುದು ಎಲ್ಲ ಬಲ್ಲರಲ್ಲವೇ?

ಇಲ್ಲಿ ಹಲಧರ - ಹಲಧೃತ ರೂಪ ಶ್ರೀ ಬಲರಾಮರಾದ ಹಲ - ನೇಗಿಲು ಹಿಡಿದಿರುವ ಹಲಾಯುಧ ಆತನ ಆಯುಧ ಹಾಗೂ ಮಹಾಬಲಿಷ್ಠರು ಬಲರಾಮ ದೇವರು ಬಲರಾಮರ ಜೀವನ, ಪಾತ್ರ ಚಾಚಿತ್ಯವನ್ನು ಸ್ಮರಿಸುವುದೇ ಲೇಖನದ ಧ್ಯೇಯ.

ಭಾರತೀಯ ಸಂಸ್ಕೃತಿ - ಇತಿಹಾಸ ಪುರಾಣಗಳು (ಅಷ್ಟಾದಶ)ಎಂದರೆ ಹದಿನೆಂಟು ಎಲ್ಲವನ್ನೂ ಮಹರ್ಷಿವೇದ ವ್ಯಾಸರೇ ರಚಿಸಿರುವುದು ಹಾಗೂ ಭಕ್ತಿ ಗ್ರಂಥ ಶ್ರೀಮದ್ಭಾಗವತವನ್ನು ಶ್ರೀವ್ಯಾಸರ ಶುಕಮಹರ್ಷಿ ರಚಿಸಿರುವಂಥದು. ಶ್ರೀಕೃಷ್ಣ ಬಲರಾಮರ ಇಡೀ ಯಾದವ ವಂಶದ ಕಥಾನಕ ಹಾಗೂ ಭಕ್ತಿ ಸುಲಭವಾದ ಶ್ರೀಮನ್ನಾರಾಯಣ ಶ್ರೀಹರಿ, ಶ್ರೀಕೃಷ್ಣ ತನ್ನ ಹತ್ತು ವಿವಿಧ ಅವತಾರಗಳಲ್ಲಿ ಹೇಗೆ ಇಡೀ ಸಮಾಜವನ್ನೂ ಕಾಪಾಡಿದ್ದಾನೆಯೋ ಅದೇ ರೀತಿಯಲ್ಲಿ ಶ್ರೀ ಕೃಷ್ಣನ ಹಿರಿಯಣ್ಣ ಬಲರಾಮರು ನ್ಯಾಯ,ಧರ್ಮನಿಷ್ಠೆ ಕೃಷಿ ಹೀಗೆ ಈ ದಿಸೆಯಲ್ಲಿ ಶ್ರಮಿಸಿದವರು.

ಈಗ ನಾವು ಪ್ರಸ್ತಾಪಿಸಲಿರುವ ಬಲರಾಮ (ಬಲರಾಮದೇವ) ಸಾಮಾನ್ಯವಾಗಿ, ಶ್ರೀಕೃಷ್ಣನ ಹಿರಿಯಣ್ಣನೆಂದೇ ಎಲ್ಲರೂ ಬಲ್ಲರು. ಈತನನ್ನು ಕುರಿತಂತೆ ಬಹಳ ಕಥೆಗಳು ಉಪಾಖ್ಯಾನ ಎಲ್ಲವೂ ಮೂಡಿಬಂದಿದೆ. ಬಲರಾಮ, ಸಹಸ್ರ ಫಣಿಗಳ ಆದಿ ಶೇಷನ ಅವತಾರ ಸ್ವರೂಪವೆಂದೇ ಪ್ರಸಿದ್ಧ ಹಾಗೂ ಬಲದೇವ, ಬಲಭದ್ರ, ಹೃಧಕ, (ಹಲಾಯುಧಧರ) ಹಾಗೂ ಶ್ರೀ ಭಾಗವತ ಪ್ರಕಾರ ಸಂಕರ್ಷಣ ವ್ಯೂಹ ಎಂದೇ ಪ್ರಸಿದ್ಧ.ಮಹಾವಿಷ್ಣುವಿನ ದಶಾವತಾರಗಳಲ್ಲಿ ಬಲರಾಮಾವತಾರವೂ ಒಂದೆಂದೇ ಪರಿ ಗಣಿತ ಸುಪ್ರಸಿದ್ಧ ಹಿಂದೂ ದೈವನೀತ ಈ ಮೊದಲು ತಿಳಿಸಿರುವಂತೆ ರಾಮಾಯಣ, ಮಹಾಭಾರತ ಭಾಗವತ ಹರಿವಂಶ ಈ ಎಲ್ಲದರಲ್ಲಿಯೂ ಬಲರಾಮನ ಕಥಾನಕವಿದ್ದೇ ಇದೆ.

ಶ್ರೀರಾಮ,ಇನ್ನೊಂದು ಅಂಶಭಾರ್ಗವ ರಾಮ (ಪರಶುರಾಮ, ಜಮದಗ್ನಿಯಲ್ಲಿ ಋಷಿ ಸುಪುತ್ರ) ಶ್ರೀಕೃಷ್ಣ - ಇವರ ಜಯಂತ್ಯು ತ್ಸವವನ್ನೂ ಯಾವ ರೀತಿ ಶ್ರೀರಾಮ ನವಮಿ, ಶ್ರೀಕೃಷ್ಣ ಜಯಂತಿ (ಗೋಕುಲಾಷ್ಟಮಿ ಎಂದೇ ವೈಷ್ಣವ ಶ್ರೀವೈಷ್ಣವರೆಲ್ಲ ಬಹುವಾಗಿ ಪರಿಗಣಿಸಿರುವರೋ ಹಾಗೂ ಹೀಗೆ ಏಳನೆಯ ಗರ್ಭಧರಿಸಿ ದೇವಕಿ. ಭಗವಾನ್ ಶ್ರೀಲೀಲಾ ವಿನೋಧ, ಎಷ್ಟರ ಮಟ್ಟಿಗೆ ದೈವಿಶಕ್ತಿ ವೈಜ್ಞಾನಿಕ ವಾಗಿ ಆ ಗರ್ಭವನ್ನೂ ಧರಿಸಿ (ಸಂಪೂರ್ಣಗೊಳಿಸಿ) ಪರಮ ವಸುದೇವರ ಇನ್ನೊಬ್ಬ ಮಡದಿ ರೋಹಿಣಿ ದೇವಿಯ ಗರ್ಭಕ್ಕೆ ಸೇರಿಸಿದ ದೈವವರ್ಮ ಮಾಡಿದರೆ ಯಾವುದು ತಾನೆ ಅಸಾಧ್ಯ ಅಲ್ಲವೇ? ಹೀಗೆ ಗರ್ಭ ಪ್ರಭಾವದಿಂದ ಜನಿಸಿದ ಬಲರಾಮ ನಿಗೆ ಸಂಕರ್ಷಣ ಎಂದೇ ಹೆಸರು ಆಯ್ತು. ದಾಸರಲ್ಲಿ ಕವಿ ಗಳೆಂದೇ ಪ್ರಸಿದ್ಧರಾಗಿರುವ ಕನಕದಾಸರು ಹಾಡಿರುವ ಕೋರವಾದಿ 24 ನಾಮಗಳಲ್ಲಿ ಬಲರಾಮರನ್ನು ಕುರಿತು ಸೊಗಸಾಗಿ ಕೀರ್ತಿಸಿದ್ದಾರೆ.

"ಪಂಕಜಾಕ್ಷ ನೀನು ಎನ್ನ ಮಂಕುಬುದ್ಧಿಯನ್ನು ಬಡಿಸಿ
ಕಿಂಕರನ್ನು ಮಾಡಿಕೊಳ್ಳೋ ಸಂಕರ್ಷಣ ॥
(ಸಂಕರುಕ್ಷಣ ಪಾರಾಂತರ )

ಇಲ್ಲಿ ಬಲರಾಮ ಎಷ್ಟರ ಮಟ್ಟಿಗೆ ಪ್ರಖರ ಬುದ್ಧಿಯುಳ್ಳವ, ಹಾಗೂ ನನಗೆ ಕವಿದ ಮಂಕು ಬುದ್ಧಿಯನ್ನು ಸಂಕರ್ಷಣ ದೇವನಾಗಿ ಬಿಡಿಸಿಸಲಹಲೆಂದು-

ಏಳನೆಯ ಗರ್ಭ ಸಂಕರ್ಷಣ ಧರಿಸಿದ ಮರುವರ್ಷ ದೇವಕಿ ಪ್ರಸವಿಸಿದ್ದು ಹೆಣ್ಣು ಕೂಸು, ಸುದ್ಧಿ ತಿಳಿದ ಕಂಸಾ ಸುರ ಪ್ರಸೂತಿಕಾಮನೆಗೆ ಧಾವಿಸಿದ ತಾಗಿ ಕಣ್ಣೀರುಗರೆದು ಕೇಳಿಕೊಂಡಳು. ಅಣ್ಣ ಇದು ಹೆಣ್ಣು ಮಗು ಅಲ್ಲವೇ? ರಕ್ಕಸ ನಿಗೆ ಇದಾವುದರ ಯುಕ್ತಾಯುಕ್ತತೆ ಇಲ್ಲ. ಸಳೆದೊಯ್ದು ಕೂಸನ್ನು ವಧಿಸಲು ಕಂಸನ ಕೈಯಿಂದ ಜಾರಿ ಆಕಾಶಕ್ಕೆ ಚಂಗನೆ ಹಾರಿದ ಮಗು, ಕಾಳಿಶಕ್ತಿ ಪ್ರಕಟಳಾಗಿ ಗರ್ಜಿಸಿ ದಳು. ಏಯ್! ದುಷ್ಟ ನನ್ನನ್ನೇ ಕೊಲ್ಲುವ ಅಹಂ ಭಾವವೇ ನಿನಗೆ? ಕಂಸನೂ ಮರುನುಡಿಯದಾದ ಅಘಟಿತ ಘಟನಾ ಸಾಮರ್ಥ್ಯವುಳ್ಳ ಭಗವಾನ್ ಮಹಾವಿಷ್ಣುವಿಗೆ ಈ ಕಂಸ ಲೆಕ್ಕವೇ?

ಭಾಗವತ ದಶಮಸ್ಕಂಧದ ಎಂಟನೆಯ ಮಗನಾಗಿ ಅವತ ರಿಸಿದ ಶ್ರೀಕೃಷ್ಣನ ಪರಮಶ್ರೇಷ್ಠ ಅವತಾರ ಆ ಘಳಿಗೆಯಲ್ಲಿದ್ದ ದೇವತಾ ನಿವಹ ದೇವಕಿ ವಸುದೇವರಿಗೆ ತೋರಿದ ಶ್ರೀಕೃಷ್ಣನ ಅಪ್ರಮೇಯ ಮೂರ್ತಿ ಹಾಗೂ ಆ ಮಹದಾನಂದದ ಕ್ಷಣ ಶ್ರೀಕೃಷ್ಣನೇ ಮುದ್ದು ಮಗುವಾಗಿ ದೇವಕಿಗೆ ಜನಿಸಿ ವಸುದೇವ ನನ್ನು ಕುರಿತು,ಕೂಡಲೆ ತನ್ನನ್ನು ದೂರದ ಯಮುನಾತೀರದ ನಂದಗೋಪನಲ್ಲಿ ಇರಿಸೆಂದು ಈ ಲೇಖನದಲ್ಲಿ ಇವೆಲ್ಲ ವಿವರಿ ಸುವುದು. ಬಲರಾಮನನ್ನು ಕುರಿತು ನಮ್ಮ ಅಧ್ಯಯನ ಅದ



ರಲ್ಲಿ ಒಂದು ವಿಶೇಷ. ಅನೇಕ ವರ್ಷಗಳಿಂದ ಹಿರಿಯರ ಎಲ್ಲರೂ ಹಾಡಿ ಶ್ರೀಕೃಷ್ಣನನ್ನು ಧ್ಯಾನಿಸಲು ಪ್ರೇರಿಸುತ್ತದೆ.

ಆದೌದೇವಕಿದೇವಿ ಗರ್ಭಜನನಂ ಗೋಪೀ ಗೃಹೇ ವರ್ಧನಂ
ಮಾಯಾಪೂತನಿ ಜೀವಿತಾ ಪಹರಣಂ ಗೋವರ್ಧನೋದ್ಧಾರಣಂ।
ಕಂಸಚ್ಛೇದನ ಕೌರವಾದಿಮರ್ಥನಂಕುಂತೀ ಸುತಾಪಾಲನಂ
ಏತದ್‌ಭಾಗವತಾಂ ಪುರಾಣಮಧಿಕಂ ಶ್ರೀಕೃಷ್ಣಲೀಲಾಮೃತಮ್॥

ಇದರ ಜತೆ ಅವ್ಯಕ್ತನಾಗಿತುಂಬಿದ್ದಾತ ಬಲರಾಮ. ಶ್ರೀಕೃಷ್ಣ ಅವತಾರಕ್ಕೆ ಮುನ್ನವೇ ರೋಹಿಣಿಯಲ್ಲಿ ಅವತರಿಸಿದ ಮಹಾ ಚೇತನದೇವಶಾಚ್ವರೂಪ ವಿಷ್ಣುವಿನ ಏಳನೆಯ ಅವತಾರನೇ ಶ್ರೀಬಲರಾಮ ಈ ಮಹಾಬಲಿಷ್ಠ ಅವತರಿಸಿದ ಕೃಷ್ಣನನ್ನು ದೃಷ್ಟಿ ಮಹಾವೀರ(3-2 ಕೃಷ್ಣ ಹವನ ಅವತಾರ ಎನ್ನುತ್ತಾರೆ. ಆಧು ನಿಕ ಇತಿಹಾಸತಜ್ಞರು ಆದರೆ ಸಾಂಪ್ರದಾಯಿಕ ದ್ವಾಪರಯುಗ ದಲ್ಲಿ ಬಲದೇವ ಅವತರಿಸಿದ್ದು ಎನ್ನುತ್ತದೆ ಭಾಗವತ ಹರಿವಿಂದ ಮಹಾಭಾರತದ ಕೃಷ್ಣವತಾರ ಪುಟಗಳಲ್ಲಿ) ಬಲರಾಮನನ್ನು ಸಂಕರ್ಷಣ, ಎಂದೇ ಕೀರ್ತಿಸಿದ್ದಾರೆ. ಜಗನ್ನಾಥ ಸಂಪ್ರದಾಯ ದಂತೆ ಬಲರಾಮನ ತ್ರಿಮೂರ್ತಿಗಳಲ್ಲಿ ಒಬ್ಬರು ಹತಧರ ಹಲಾ ಯುಧದರ. (ನೇಗಿಲು ಹಿಡಿದ ಬಲದೇವನೆಂದೇ ಪ್ರಸಿದ್ಧ) ಮೂರ ನೆಯ ಈತ ಬಲಿಷ್ಠನಾಗಿಯೆ ಮೆರೆದ.

ಇನ್ನೊಂದು ವಿಶೇಷ, ಬಲರಾಮನನ್ನು ಕೃಷ್ಣ (ಬೇಸಾಯ) ಪಾಲಕದೈವ,ಹಾಗೂ ವ್ಯವಸಾಯ ಶಕ್ತಿ ದೈವವೆಂದೇ ಜನ ಸಮುದಾಯ ಆರಾಧಿಸುವುದರಿಂದ ಆದಿಶೇಷ,ವೈಷ್ಣವ ಅವತಾರ ವೈಕುಂಠಲೋಕ ಪಾತಾಳಲೋಕ,ಬೃಂದಾವನ,ದ್ವಾರಕಾ-ಎಲ್ಲೆ ಲ್ಲಿಯೂ ಬಲರಾಮ ಇದ್ದದ್ದೇ. ಆತನು ಹಿಡಿಯುವ ಶಸ್ತ್ರ- ನೇಗಿಲು, ಮಚ್ಚು - ಕೃಷಿ ದೇವತಿಯೆಂದೇ ಪ್ರಸಿದ್ಧ.

ಬಲರಾಮರು ಅವತರಿಸಿದ ದಿನವನ್ನು ಬಲರಾಮ ಜಯಂತಿ ಎಂದೇ ಕೊಂಡಾಡುವುದು-ಹಾಗೂ ಪೂರಿಜಗನ್ನಾಥ ರಥ ಯಾತ್ರಾ ವೈಭವದಲ್ಲಿ ಶ್ರೀಕೃಷ್ಣ ಬಲರಾಮ, ಸುಭದ್ರಾ (ಸೋದರಿ)



ಇವರ ರಥಯಾತ್ರೆಯೇ ಇಡೀ ಪೂರಿ ಜಗನ್ನಾಥ ಕ್ಷೇತ್ರ ಮಾತ್ರವಲ್ಲ ಜಗತ್ತಿನೆಲ್ಲಡೆ ಸಂಭ್ರಮದ ಆಚರಣೆಯಿದೆ. ಇಸ್ಕಾನ್ ಶ್ರೀಕೃಷ್ಣ ಅಂತರಾಷ್ಟ್ರೀಯ ಶ್ರೀಕೃಷ್ಣ ಪ್ರಜ್ಞಾಸಂಘದ ರಥ ಯಾತ್ರೆಯಲ್ಲಿ ಬಲರಾಮರ ವೈಭವವೋ ವೈಭವ "ಹರೇ ರಾಮ ಹರೇ ರಾಮ, ರಾಮ ರಾಮ ಹರೇ ಹರೇ, ಹರೇ ಕೃಷ್ಣ ಹರೇ ಕೃಷ್ಣ, ಕೃಷ್ಣ ಕೃಷ್ಣ ಹರೇ ಹರೇ" ಎನ್ನುವ ಈ ಮಹಾಮಂತ್ರದಲ್ಲಿ ರಾಮ, ರಾಮ-ಶ್ರೀಬಲರಾಮನೆಂದೇ ಪರಿಭಾವಿಸುತ್ತೇವೆ.

ಮಹಾಭಾರತದಲ್ಲಿ ಬಲರಾಮ ಕೆಲವು ಸಂದರ್ಭಗಳಲ್ಲಿ ಶ್ರೀಕೃಷ್ಣನ ಜೊತೆ ಜೊತೆ ಕಾಣಿಸಿಕೊಳ್ಳುತ್ತಾರೆ ಹಾಗೂ ಪಾಂಡವರ ಭೀಮಸೇನ ಕೌರವರ ದುರ್ಯೋಧನರ ನಡುವೆ ಭಯಂಕರ ಸದಾ ಯುದ್ಧ ನಡೆಯುವ ಸಂದರ್ಭದಲ್ಲಿ ಹಾಜರಿರುತ್ತಾರೆ. ಇಬ್ಬರಿಗೆ ಬಲರಾಮರೇ ಗದಾಯುದ್ಧ ವಿದ್ಯಾ ಗುರು. ಮುಂದೆ,ಯುದ್ಧದಲ್ಲಿ ಭೀಮ,ದುರ್ಯೋಧನನ ತೊಡೆಗೆ ಬಡಿದು ಆತ ನೆಲ ಕಚ್ಚಿದಾಗ, ಗದಾಯುದ್ಧದಲ್ಲಿ ಹೊಕ್ಕಳಿನಿಂದ (ನಾಭಿಯಿಂದ) ಕೆಳಭಾಗದಲ್ಲಿ ಹೊಡೆಯುವುದು ಧರ್ಮಬಾಹಿರ ಎಂದು ಕ್ರೋಧಗೊಂಡಾಗ ಶ್ರೀಕೃಷ್ಣನ ಅಣ್ಣನನ್ನು ಸಮಾಧಾನ ಪಡಿಸುತ್ತ ದುರ್ಯೋಧನನು ಮೊದಲಿಂದ ಪಾಂಡವರಿಗೆ-ಭೀಮನಿಗೆ ನೀಡಿದ ಅನೇಕ ನೋವನ್ನು ತಿಳಿಸುತ್ತ ಅಧರ್ಮಕ್ಕೆ ಅಧರ್ಮದಿಂದಲೇ ನಾಶ ಮೈತ್ರೇಯ ಋಷಿ-ದ್ರೌಪದಿಯ ಪತಿವ್ರತಾ ಶಾಪ ಇವೆಲ್ಲದರ ಫಲ ದುರ್ಯೋಧನ ನೆಲಕಚ್ಚಿದನೆಂದು ತಿಳಿಯ ಹೇಳುತ್ತಾ ಶ್ರೀಕೃಷ್ಣ ಆಗ್ಗೆ ಅಲ್ಲಿರದಿದ್ದರೆ! ಬಲರಾಮರ ಕ್ರೋಧ ಇನ್ನೇನು ಮಾಡುತ್ತಿತ್ತೋ.

ಬಲರಾಮನನ್ನು ಜಯದೇವಕವಿ ಬಣ್ಣಿಸಿರುವುದು ತಿಳಿಸಿದೆ. ಅಸುರ ಧೇನುಕನ್ನನ್ನು ಸಂಹರಿಸಿದ ಬಲರಾಮ, ಭಾಗವತದ ಯದುವಂಶದಲ್ಲಿ ಉಳಿದ ಅನೇಕರ ನಾಶ (ಸಾಂಬವೃತ್ತಾಂತ) ಯುದ್ಧ ಮಾಡಿದ.

ಒಟ್ಟಾರೆ ಬಲರಾಮರ ಅವತಾರ ಅವರ ಜಯಂತಿಯ ಉತ್ಸವ ಸದಾ ಸ್ಮರಣೀಯ ಶ್ರೀಕೃಷ್ಣನು ಪ್ರಭಾಸತೀರ್ಥ ಪರಿಸರದಲ್ಲಿ ತನ್ನ ಶರೀರ ಬಲರಾಮನು ತನ್ನಯೋಗ ಧ್ಯಾನಸ್ಥಿತಿಯಲ್ಲಿ ಸುದೃಢವಾಗಿ ಕುಳಿತು ಇಹ ಲೋಕತ್ಯಜಿಸಿದ್ದು ಬಲರಾಮರ ಮದನದಿಂದ ಅಪರೂಪದ ಬಿಳಿಯ ಸರ್ಪವೊಂದು ಹೊರಬಂದು, ಅದೃಶ್ಯವಾದದ್ದು ಇವೆಲ್ಲ ಪ್ರಚಲಿತವಾಗಿದೆ. ಬಲರಾಮರು ನಿರ್ಗಮಿಸಿದ ಸ್ಥಳ ವೀರಾವಲ್ ಗುಜರಾತ್ ಸೋಮನಾಥ ದೇವಾಲಯ ಸನಿಹ ಎಂದು ಹೇಳುತ್ತಾರೆ. ಅಲ್ಲಿಯೇ ದೇವಾಲಯ ಸಮೀಪ ಇರುವ ಗುಹೆಯನ್ನು ಕುರಿತು ಬಲರಾಮರ ವಿಸರ್ಜನ ಸ್ಥಳವೆಂದು ಹೇಳುತ್ತಾರೆ.

ಇನ್ನೊಂದು ಮಹಾನ್‌ಕಾರ್ಯ.... ಬಲರಾಮ ಮಾಡಿದ್ದು ಯಮುನಾ ನದಿಯನ್ನು ಬೃಂದಾವನಕ್ಕೆ ಹತ್ತಿರವಾಗಿ ತಂದು ಅಗೆದು ನಿರ್ಮಿಸಿದ ಮಾರ್ಗ ಈಗಲೂ ಸಾಂಪ್ರದಾಯಿಕವಾಗಿ ಕೊಂಡಾಡಿರುತ್ತಾರೆ. ಆಧುನಿಕ ಕನ್ನಡದ ಕುಮಾರವ್ಯಾಸ ಭಾರತ, ಚಾಟುವಿಠಲನ ಭಾಗವತ, ಪೋತ ನಾಮಾತ್ಯರ ಭಾಗವತ, ಅಸ್ಸಾಂ ಶಂಕರದೇವತ ಭಾಗವತ ಹರಿದಾಸ ಅನಂತರ ಶ್ರೀ ದಾಸಾವರಣ್ಯದ ವ್ಯಾಸರಾಯರು, ವಾದಿರಾಜ ಸ್ವಾಮಿಗಳು ಶ್ರೀರಾಘವೇಂದ್ರರು,(ಕೃಷ್ಣಚಾರಿತ್ರ್ಯಮಂಜರಿ)ಪುರಂದರ, ಕನಕ, ಜಗನ್ನಾಥ ಮುಂತಾದ ಹರಿದಾಸರು ಈಗಲೀಗ ಇಸ್ಕಾನ್ ರಥಯಾತ್ರೆ - ಎಲ್ಲೆಲ್ಲಿಯೂ ಶ್ರೀಬಲರಾಮರ ಸ್ಮರಣೆ ಇದೆ.

ಬಲರಾಮರ ಪ್ರತಿಮಾ ರೂಪ,ಮೂರ್ತಿಗಳೂ ದೊರೆತಿದೆ. ಕ್ಯಾಂಬೋಡಿಯದಲ್ಲಿ ನ್ಯಾಷಲ್ ಮ್ಯೂಸೀಯಂನಲ್ಲಿ ಬಲರಾಮರ ಪ್ರತಿಮೆ, ಮಥುರಾ ಗುಪ್ತರಕಾಲ ಮಧ್ಯಕಾಲೀನಯುಗ ಪರಿಸರದಲ್ಲಿ ದೊರೆತಿರುವ ಐತಿಹಾಸಿಕ ಬಲರಾಮ ಪ್ರತಿಮೆ, ಬರೋಡ-ಬಲರಾಮ ದೇವಾಲಯ ಹೀಗೆ ಬಲರಾಮರ ಪುರಾಣ,ಇತಿಹಾಸ,ಎಲ್ಲ ರೀತಿಯಲ್ಲಿ ಪ್ರಸಿದ್ಧ ಅವತಾರ ಸ್ವರೂಪ ಅವರ ಜಯಂತಿ (5.9.23) ವಿಶೇಷತಃ ಸ್ಮರಣೀಯವೆನಿಸುತ್ತದೆ.



ತಿರುಮಲೆ ತಿರುಪತಿ ದೇವಸ್ಥಾನಗಳು

## ಸ್ವಾಮಿಯವರಿಗೆ ಅತ್ಯಂತ ವೈಭವವಾಗಿ ಈ ವರ್ಷ ಎರಡು ಬ್ರಹ್ಮೋತ್ಸವಗಳು

### ಜಯ ಜಯ ಗೋವಿಂದ ! ತಿರುಮಲೆ ಗೋವಿಂದ ! ಗೋವಿಂದ! ಗೋವಿಂದ!! ಗೋವಿಂದ!!!

ವರ್ಷವಿಡೀ ಅನೇಕ ಉತ್ಸವಗಳು ನಡೆಯುತ್ತಿದ್ದರು, ಮೆರವಣಿಗೆಗಳನ್ನು ನಡೆಸಲಾಗಿದ್ದರೂ, ವರ್ಷದಲ್ಲಿ 10 ದಿನಗಳ ಕಾಲ ನಡೆಯುವ **"ಬ್ರಹ್ಮೋತ್ಸವಗಳು"** ತಿರುಮಲೆಯ ಇತಿಹಾಸದಲ್ಲಿ ಅತ್ಯಂತ ಪ್ರಮುಖವಾಗಿವೆ. ವೆಂಕಟಾಚಲ ಕ್ಷೇತ್ರದಲ್ಲಿ ನೆಲೆಸಿದ ಶ್ರೀನಿವಾಸನು ಬ್ರಹ್ಮನನ್ನು ಕರೆದು ಜಗತ್ಕಲ್ಯಾಣಕ್ಕಾಗಿ ಉತ್ಸವವನ್ನು ಏರ್ಪಡಿಸಿ ಅದನ್ನು ಅದ್ಧೂರಿಯಾಗಿ ಮಾಡುವಂತೆ ಆದೇಶಿಸಿದನು!

ಬ್ರಹ್ಮನು ಶ್ರೀನಿವಾಸನ ಆಜ್ಞೆಯಂತೆ ಉತ್ಸವಗಳನ್ನು ವೈಭವದಿಂದ ನಿರ್ವಹಿಸಿದನು. ಆದ್ದರಿಂದ ಇದನ್ನು **"ಬ್ರಹ್ಮೋತ್ಸವಗಳು"** ಎಂದು ಕರೆಯಲಾಗುತ್ತದೆ.

ಚಂದ್ರಮಾನ ಪ್ರಕಾರ ಪ್ರತೀ ಮೂರು ವರ್ಷಗಳಿಗೊಮ್ಮೆ ಹೆಚ್ಚಿನ ತಿಂಗಳು ಬರುತ್ತವೆ. ಅಂತಹ ಸಂದರ್ಭದಲ್ಲಿ ಕನ್ಯಾಮಾಸದಲ್ಲಿ (ಭಾದ್ರಪದ) ಒಂದು ಬ್ರಹ್ಮೋತ್ಸವವು ಮತ್ತು ದಸರಾ ನವರಾತ್ರಿಯಲ್ಲಿ (ಆಶ್ವಯುಜ) ಇನ್ನೊಂದು ಬ್ರಹ್ಮೋತ್ಸವವನ್ನು ಎರಡು ಬಾರಿ ನಡೆಸಲಾಗುತ್ತದೆ. ಭಾದ್ರಪದ ಮಾಸದಲ್ಲಿ ಅಂದರೆ ಕನ್ಯಾಮಾಸದಲ್ಲಿ ನಡೆಯುವ ಉತ್ಸವಗಳನ್ನು **"ವಾರ್ಷಿಕ ಬ್ರಹ್ಮೋತ್ಸವಗಳು"** ಮತ್ತು ನವರಾತ್ರಿ ಸಂದರ್ಭದಲ್ಲಿ ನಡೆಯುವ ಉತ್ಸವಗಳನ್ನು **"ನವರಾತ್ರಿ ಬ್ರಹ್ಮೋತ್ಸವಗಳು"** ಎಂದು ಕರೆಯಲಾಗುತ್ತದೆ.

ಅಧಿಕಮಾಸ ಇಲ್ಲದ ವರ್ಷದಲ್ಲಿ ಕನ್ಯಾಮಾಸ-ನವರಾತ್ರಿ ಒಟ್ಟಿಗೆ ಬರುತ್ತದೆ. ಹಾಗಾಗಿ ಒಂದೇ ಬ್ರಹ್ಮೋತ್ಸವ ನಡೆಯುತ್ತದೆ. ಅಧಿಕಮಾಸ ಬಂದಾಗ ಎರಡು ಬ್ರಹ್ಮೋತ್ಸವಗಳಿಗೂ ದೊಡ್ಡ ವ್ಯತ್ಯಾಸವೇನು ಇರುವುದಿಲ್ಲ. ಆದರೆ ಎರಡನೆ ಬ್ರಹ್ಮೋತ್ಸವದಲ್ಲಿ ಧ್ವಜಾರೋಹಣ ಮತ್ತು ಧ್ವಜಾವರೋಹಣ ಇರುವುದಿಲ್ಲ. ಇದರ ಪ್ರಕಾರ ರಥೋತ್ಸವಕ್ಕೆ ಮೊದಲ ಬ್ರಹ್ಮೋತ್ಸವದಲ್ಲಿ ಮರದ ರಥವನ್ನು, ಎರಡನೆ ಬ್ರಹ್ಮೋತ್ಸವದಲ್ಲಿ ಚಿನ್ನದ ರಥವನ್ನು ಬಳಸುತ್ತಾರೆ.

**ಈ ವರ್ಷ ಅಧಿಕಮಾಸದ ಕಾರಣ ವಾರ್ಷಿಕ ಬ್ರಹ್ಮೋತ್ಸವಗಳು ಸೆಪ್ಟೆಂಬರ್ 18 ರಿಂದ 26 ರ ವರೆಗೆ ಮತ್ತು ನವರಾತ್ರಿ ಬ್ರಹ್ಮೋತ್ಸವಗಳು ಅಕ್ಟೋಬರ್ 15 ರಿಂದ 23 ರ ವರೆಗೆ ನಡೆಯುತ್ತದೆ. ಭಕ್ತರು ಈ ಎರಡು ಬ್ರಹ್ಮೋತ್ಸವಗಳಲ್ಲಿ ಪಾಲ್ಗೊಂಡು ಸ್ವಾಮಿಯವರ ಕೃಪೆಗೆ ಪಾತ್ರರಾಗೋಣ.**

## ತಿರುಮಲೆ ತಿರುಪತಿ ದೇವಸ್ಥಾನಗಳು

**ತಿರುಮಲೆ**
**ಶ್ರೀವೇಂಕಟೇಶ್ವರ ಸ್ವಾಮಿಯವರ ವಾರ್ಷಿಕ ಬ್ರಹ್ಮೋತ್ಸವಗಳು**
**(2023 ಸೆಪ್ಟೆಂಬರ್ 18 ರಿಂದ 26 ರ ವರೆಗೆ)**





18-09-2023 ಸೋಮವಾರ
ಹಗಲು : ಧ್ವಜಾರೋಹಣ



18-09-2023 ಸೋಮವಾರ
ರಾತ್ರಿ : ದೊಡ್ಡಶೇಷವಾಹನ



19-09-2023 ಬುಧವಾರ
ಹಗಲು : ಚಿಕ್ಕಶೇಷವಾಹನ.... ರಾತ್ರಿ : ಹಂಸವಾಹನ



20-09-2023 ಬುಧವಾರ
ಹಗಲು : ಸಿಂಹವಾಹನ.... ರಾತ್ರಿ : ಮುತ್ತಿನಚಪ್ಪರವಾಹನ



21-09-2023 ಗುರುವಾರ
ಹಗಲು : ಕಲ್ಪವೃಕ್ಷವಾಹನ

## ತಿರುಮಲೆ ತಿರುಪತಿ ದೇವಸ್ಥಾನಗಳು

**ತಿರುಮಲೆ**
**ಶ್ರೀವೇಂಕಟೇಶ್ವರ ಸ್ವಾಮಿಯವರ ವಾರ್ಷಿಕ ಬ್ರಹ್ಮೋತ್ಸವಗಳು**
**(2023 ಸೆಪ್ಟೆಂಬರ್ 18 ರಿಂದ 26 ರ ವರೆಗೆ)**





18-09-2023 ಸೋಮವಾರ
ಹಗಲು : ಧ್ವಜಾರೋಹಣ



18-09-2023 ಸೋಮವಾರ
ರಾತ್ರಿ : ದೊಡ್ಡಶೇಷವಾಹನ





19-09-2023 ಬುಧವಾರ
ಹಗಲು : ಚಿಕ್ಕಶೇಷವಾಹನ.... ರಾತ್ರಿ : ಹಂಸವಾಹನ





20-09-2023 ಬುಧವಾರ
ಹಗಲು : ಸಿಂಹವಾಹನ.... ರಾತ್ರಿ : ಮುತ್ತಿನಚಪ್ಪರವಾಹನ



21-09-2023 ಗುರುವಾರ
ಹಗಲು : ಕಲ್ಪವೃಕ್ಷವಾಹನ



# ತಿರುಮಲೆ ತಿರುಪತಿ ದೇವಸ್ಥಾನಗಳು

## ತಿರುಮಲೆ
## ಶ್ರೀ ವೇಂಕಟೇಶ್ವರ ಸ್ವಾಮಿಯವರ ವಾರ್ಷಿಕ ಬ್ರಹ್ಮೋತ್ಸವಗಳು
## (2023 ಸೆಪ್ಟೆಂಬರ್ 18 ರಿಂದ 26 ರ ವರೆಗೆ)



21-09-2023 ಗುರುವಾರ
ರಾತ್ರಿ : ಸರ್ವಭೂಪಾಲವಾಹನ



22-09-2023
ಶುಕ್ರವಾರ
ರಾತ್ರಿ : ಗರುಡವಾಹನ



23-09-2023 ಶನಿವಾರ
ಹಗಲು : ಹನುಮದ್ವಾಹನ



23-09-2023 ಶನಿವಾರ
ರಾತ್ರಿ : ಗಜವಾಹನ





24-09-2023 ಭಾನುವಾರ
ಹಗಲು : ಸೂರ್ಯಪ್ರಭವಾಹನ
ರಾತ್ರಿ : ಚಂದ್ರಪ್ರಭವಾಹನ



17-07-2023 ತಿರುಮಲೆಯಲ್ಲಿ 'ಆಣಿವರ ಆಸ್ಥಾನ' ಸಂದರ್ಭವಾಗಿ ನಡೆದ ಸ್ವಾಮಿಯವರ "ಪುಷ್ಪಪಲ್ಲಕಿಸೇವೆ"



09-08-2023 'ಆಡಿಕೃತಿಕ' ಸಂದರ್ಭದಲ್ಲಿ ತಮಿಳುನಾಡಿನ ತಿರುತ್ತಣಿ, ಶ್ರೀ ಸುಬ್ರಮಣ್ಯಸ್ವಾಮಿ ಆಲಯಕ್ಕೆ ತಿ.ತಿ.ದೇ., ವತಿಯಿಂದ ರೇಷ್ಮೆ ವಸ್ತ್ರಗಳನ್ನು ಸಮರ್ಪಿಸುತ್ತಿರುವ ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ ಶ್ರೀ. ಎ.ವಿ. ಧರ್ಮಾರೆಡ್ಡಿ ಐ.ಡಿ.ಇ.ಎಸ್.,ರವರು



09-08-2023 'ಆಡಿಕೃತಿಕ' ಸಂದರ್ಭದಲ್ಲಿ ತಿರುಪತಿ, ಶ್ರೀ ಕಪಿಲೇಶ್ವರ ಸ್ವಾಮಿಯವರ ಆಲಯದಲ್ಲಿರುವ ಶ್ರೀ ವಲ್ಲಿದೇವಸೇನಾ ಸಮೇತ ಶ್ರೀ ಸುಬ್ರಮಣ್ಯ ಸ್ವಾಮಿಯವರಿಗೆ ನಡೆದ ಸ್ನಪನ ತಿರುಮಂಜನ ದೃಶ್ಯ



27-07-2023 ರಂದು ತಿರುಮಲೆಯಲ್ಲಿ "ಕಾವೇರಿ" ವಿಶ್ರಾಂತಿ ಗೃಹವನ್ನು ಪ್ರಾರಂಭಿಸುತ್ತಿರುವ ಮಾಜಿ ತಿ.ತಿ.ದೇ., ಅಧ್ಯಕ್ಷರು ಶ್ರೀ . ವೈ.ವಿ. ಸುಬ್ಬಾರೆಡ್ಡಿ ದಂಪತಿಗಳು ಮತ್ತು ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ ಶ್ರೀ. ಎ.ವಿ. ಧರ್ಮಾರೆಡ್ಡಿ ಐ.ಡಿ.ಇ.ಎಸ್., ಮತ್ತು ಹೈದರಾಬಾದಿನ ಶ್ರೀ ಭಾಸ್ಕರ್‌ರಾವ್ ಪಾಲ್ಗೊಂಡರು.



27-07-2023 ರಂದು ತಿರುಮಲೆಯಲ್ಲಿ ರದ್ದಿ ಇರುವ ಸಮಯದಲ್ಲಿ ಭಕ್ತರಿಗಾಗಿ ತಾತ್ಕಾಲಿಕವಾಗಿ ತಂಗುವ ಮೊಬೈಲ್ ಕಂಟೇನರ್‌ಗಳನ್ನು ಪ್ರಾರಂಭಿಸುತ್ತಿರುವ ಮಾಜಿ ತಿ.ತಿ.ದೇ., ಅಧ್ಯಕ್ಷರು ಶ್ರೀ . ವೈ.ವಿ. ಸುಬ್ಬಾರೆಡ್ಡಿಯವರು ಮತ್ತು ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ ಶ್ರೀ. ಎ.ವಿ. ಧರ್ಮಾರೆಡ್ಡಿ ಐ.ಡಿ.ಇ.ಎಸ್. , ರವರು .



01-08-2023 ಆಂಧ್ರಪ್ರದೇಶದ ಸರ್ಕಾರದ ವಿಶೇಷ ಕಾರ್ಯದರ್ಶಿ ದತ್ತಿ ಇಲಾಖೆಯ ಶ್ರೀ ಕರಿಕಾಲ ವಲವನ್ ಐ.ಎ.ಎಸ್., ರವರು ತಿ.ತಿ.ದೇ., ಆಡಳಿತ ಮಂಡಳಿಯ ಎಕ್ಸ್-ಅಫಿಷಿಯಾ ಸದಸ್ಯರಾಗಿ ಪ್ರಮಾಣ ಸ್ವೀಕಾರ ಮಾಡಿದರು. ನಂತರ ಸ್ವಾಮಿಯವರ ಚಿತ್ರಪಟವನ್ನು ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ ಶ್ರೀ ಎ.ವಿ. ಧರ್ಮಾರೆಡ್ಡಿ ಐ.ಡಿ.ಇ.ಎಸ್., ರವರು ನೀಡುತ್ತಿರುವ ದೃಶ್ಯ.



15-07-2023 ರಂದು ತಿರುಪತಿ ಎಸ್.ವಿ. ಗೋಸಂರಕ್ಷಣ ಶಾಲೆಯಲ್ಲಿ ಕೃತ್ರಿಮ ಪದ್ಧತಿಯಲ್ಲಿ ಜನಿಸಿದ ಕರುಗಳನ್ನು ನೋಡುತ್ತಿರುವ ಆಂಧ್ರಪ್ರದೇಶದ ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ|| ಕೆ.ಎಸ್. ಜವಹರ್‌ರೆಡ್ಡಿ ಐ.ಎ.ಎಸ್., ಮತ್ತು ತಿ.ತಿ.ದೇ., ಸಂಯುಕ್ತ ಕಾರ್ಯನಿರ್ವಹಣಾಧಿಕಾರಿ ಶ್ರೀಮತಿ. ಎಸ್. ಭಾರ್ಗವಿ ಐ.ಎ.ಎಸ್., ರವರು




# ಶ್ರೀ ಕೃಷ್ಣಜನ್ಮಾಷ್ಟಮಿ

- ಶ್ರೀಮತಿ. ಕೆ.ವಿ.ಲತಾ

**ಜಗತ್ತಿನ ಚಿರಂತನ ಚೈತನ್ಯ ಶ್ರೀ ಕೃಷ್ಣ ಪುರುಷೋತ್ತಮ**

ಶ್ರೀಕೃಷ್ಣನನ್ನು ಅವತಾರ ಪುರುಷನೆಂದು ನೋಡುವುದರಲ್ಲಿ ಬ್ರಹ್ಮಾಂಡವಿದೆ. ಸಾಹಿತ್ಯಾಭ್ಯಾಸಿಗಳಿಗೆ, ಧಾರ್ಮಿಕ ಮನೋಭಾವದವರಿಗೆ ಶ್ರೀ ಕೃಷ್ಣ ಕಥಾಮಂಜರಿ ಯಾವತ್ತೂ ರಸಾನಂದದ ತವನಿಧಿಯಾಗಿದೆ. ಶ್ರೀಕೃಷ್ಣನ ಮನಮೋಹಕ ವ್ಯಕ್ತಿತ್ವ ಅತ್ಯಂತ ರೋಚಕವಾದುದೂ ಹೌದು.

ಶ್ರೀ ಕೃಷ್ಣ ಪುರುಷೋತ್ತಮ ಅವನ ಜೀವನಕಥನ ದೇವಲೋಕದ ಸುರಗಂಗೆ ಪ್ರವಹಿಸುವ ಹಾಗೆ.. ನಿತ್ಯ ನಿರಂತರ! ಬಾಳಿನ ಅಭಿರುಚಿ ಶುದ್ಧಿಗೆ ಬದುಕನ್ನೇ ಮೀಸಲಿಟ್ಟವನು ಶ್ರೀಕೃಷ್ಣ. ಕಾಮ - ಕ್ರೋಧತಪ್ತ ಇಂದಿನ ಈ ಮಹಾಭಾರತಕ್ಕೆ ನಿತ್ಯ ಸತ್ಯ ಬೆಳಕಾದವನು ಶ್ರೀಕೃಷ್ಣ.ಇಂದಿನ ಮಲಿನಾತ್ಮಗಳಿಗೂ ಮಾರ್ಗದರ್ಶಿ ಆಗಬಲ್ಲ ಮಹಾನ್ ವ್ಯಕ್ತಿತ್ವ ಶ್ರೀಕೃಷ್ಣನದು. ಆ ಎತ್ತರಕ್ಕೆ ಅವನು ತನ್ನ ಚೈತನ್ಯದ ಶ್ರೇಷ್ಠತೆಯನ್ನು ಮಿನುಗಿಸಬೇಕಾದರೆ ಅವನಲ್ಲಿದ್ದುದು ಸಹಜ ಆತ್ಮಸ್ಥೈರ್ಯ. ಅವನ ಮೋಹನ ಮುರಳಿಯ ಮಧುರ ಇಂಚರವೇ ಮಹಾಭಾರತದುದ್ದಕ್ಕೂ ನಮ್ಮನ್ನು ಸಮ್ಮೋಹನಗೊಳಿಸ ಬಲ್ಲದು.ದ್ವಾರಕೆಯನ್ನು ಕಟ್ಟಿದವನು ಅವನು ಬೃಂದಾವನದ ಸಹಜ ಸಂಗೀತಾಭಿವ್ಯಕ್ತಿಗೆ ಅವನದು ಮಾಧುರ್ಯದ ಮಿಡಿತವಿತ್ತ ಅನುಪಮ ಸ್ವರ ಸೌಂದರ್ಯ, ಗೋಕುಲದ ಲೀಲಾಪುರುಷನೂ ಅವನೇ! ಸಕಲ ಚರಾಚರ ಹಸಿರಿನಲ್ಲಿ, ಕೆಸರಿನಲ್ಲಿ, ಅರೆಗಳಲ್ಲಿ, ತೊರೆಗಳಲ್ಲಿ ಚೈತನ್ಯ ಶಾಲೀ ಲೀಲಾಜಾಲ ಹರಡಿದವನೂ ಅವನೇ! ಹೂವು ಮಿಡಿಯಾಗಲು, ಚಿಗುರು ಕುಡಿ ಹಸಿರಾಗಲು, ಕಾನನದಲ್ಲಿ ನಿತ್ಯ ಹರಿದ್ವರ್ಣವು ಈ ಸೃಷ್ಟಿಯ ಸರ್ವಸ್ವ ಉಸಿರಾಗಲು ಶ್ರೀಕೃಷ್ಣನ ಅದ್ಭುತ ಶಕ್ತಿ ಕಾರಣ.

ಇಡೀ ಸೃಷ್ಟಿಯ ಅಂತಃ ಸತ್ವವನ್ನೇ ಚೈತನ್ಯವನ್ನಾಗಿಸಿದ ಅನುಪಮ ಕೊಳಲ ಗಾರುಡಿಗ ಶ್ರೀಕೃಷ್ಣ ಮಹಾಪುರುಷ ನಂದಗೋಕುಲದ ಯಾದವ ಕನ್ಯೆಯರು ಹೊತ್ತು ನಡೆಯುತ್ತಿದ್ದ ತುಂಬಿದ ಹರಿವಾಣಗಳ ಕೆನೆ ಮೊಸರ ಕಂಠ ಮಟ್ಟ ತಿಂದ ಹುಡುಗ ಅವನೇ! ನೀರೆಯರ ನಾಚಿಸಿದ ಘೋರ ಅವನೇ! ಯಮುನಾ ತೀರದಲ್ಲಿ ಗೋಪಿಕೆಯರ ಜೊತೆ ಮುಕ್ತವಾಗಿ ವಿಹರಿದ ಚತುರನೂ ಅವನೇ! "ಶ್ರೀಕೃಷ್ಣಸ್ತು ಭಗವಾನ್ ಸ್ವಯಂ'' ಹೀಗೆ ಜ್ಞಾನಿಗಳು ಹಿಂದೆಯೇ ಹೇಳಿದ್ದಾರೆ. ಕೃಷ್ಣಸರ್ವವ್ಯಾಪಿ.

ಮನುಕುಲದ ಮೂಲ ಸಂಸ್ಕೃತಿ ಉಗಮ ಭಾರತದಲ್ಲೇ ಆಗಿದೆ ಎಂಬುದಕ್ಕೆ ಅನೇಕ ವಿದ್ವಾಂಸರ ಆಧಾರ ಸಹಿತ ಅಭಿಪ್ರಾಯಗಳಿವೆ. ಮನುಷ್ಯನ ವಿಕಾಸ ಪಥದ ಚಿರಸ್ಥಾಯಿಯಾದ. ಚರಿತ್ರೆಯಲ್ಲಿ ಅತ್ಯಂತ ಪುರಾತನ ಧರ್ಮಕಾವ್ಯ ಋಗ್ವೇದ ಸಂಹಿತೆ ಎಂಬುದು ಈಗ ನಿರ್ವಿವಾದ ವಿಷಯ. ಮಾನವನ ಪ್ರಾಚೀನ ಸಂಸ್ಕೃತಿಯ ಪ್ರಾರಂಭದ ಹಂತಗಳು ನಮ್ಮನಾಡಿನಲ್ಲೇ ಅಂಕುರಿಸಿದ್ದು ಎಂಬುದಕ್ಕೂ ಕೂಡ ಭಾರತದಲ್ಲಿ ಸಾಕಷ್ಟು ಮಾಹಿತಿಗಳು ದೊರಕಿವೆ. ಛಾಂಧೋಗ್ಯದಲ್ಲಿ "ಕೃಷ್ಣಾಯ ದೇವಕೀ ಪುತ್ರಾಯ'' ಎಂಬ ಉಲ್ಲೇಖ ಇರುವುದನ್ನು ನೋಡಿದರೆ ಶ್ರೀಕೃಷ್ಣನು ನಿಜಕ್ಕೂ ಇತಿಹಾಸ ಕಾಲದಾಚೆಗಿದ್ದವನು ಎಂಬುದು ಒಪ್ಪಬಹುದಾದ ಸಂಗತಿ. ದಶೋಪ ನಿಷತ್ತಿನಲ್ಲಿ ಛಾಂದೋಗ್ಯ ಕಾಲ ಕೂಡ ಚರ್ಚಿತವಾಗಿದೆ ಮತ್ತು ಅದು ಅತ್ಯಂತ ಪ್ರಾಚೀನವೆಂಬುದೂ ಸಾಬೀತಾಗಿದೆ. ಈ ಎಲ್ಲಾ ಹಿನ್ನೆಲೆಯನ್ನು ಸರಿಯಾಗಿ ವಿವಕ್ಷೆ ಮಾಡಿ ನೋಡಿದರೆ "ಶ್ರೀಕೃಷ್ಣ'' ಭಾರತದ ಐತಿಹಾಸಿಕ ಕಾಲದಾಚೆಗಿನವನು ಎಂದು ಊಹಿಸಿಬಹುದಾಗಿದೆ. ಶ್ರೀಕೃಷ್ಣ ಐತಿಹಾಸಿಕ ಕಾಲದಲ್ಲಿ ಜನಿಸಿದವನಂತೂ ಅಲ್ಲ. ಜರ್ಮನ್ ಪ್ರಾಧ್ಯಾಪಕ ಮ್ಯಾಕ್ಸ್ ಮುಲ್ಲರ್ ಕೂಡ ಈ ಬಗ್ಗೆ ಸಾಕಷ್ಟು ಚರ್ಚಿಸಿದ್ದಾನೆ. ಶ್ರೀಕೃಷ್ಣ ವಿಶ್ವದ ಒಂದು ಅತ್ಯದ್ಭುತ ಶಕ್ತಿ, ಸಾರ್ವಕಾಲಿಕ ಪ್ರತೀಕ.

ಸಹಸ್ರ,ಸಹಸ್ರ ವರ್ಷಗಳಿಂದಲೂ ಶ್ರೀ ಕೃಷ್ಣನ ವ್ಯಕ್ತಿತ್ವ ಆಕರ್ಷಕವಾಗಿ ಪೂಜನೀಯವಾಗಿ






ಭಾರತೀಯ ಜನುಮದಲ್ಲಿ ಅಚ್ಚೊತ್ತಿ ನಿಂತಿದೆ, ಚಿರಂತನ ಚೈತನ್ಯವಾಗಿದೆ. ಹಿಂದಿನ ಈಗಿನ ಮುಂದಿನ ಸೃಜನಶೀಲ ಈ ಶ್ರೀಕೃಷ್ಣ ಚೈತನ್ಯದ ಅಸೀಮ ಅನುಪಮ, ಅಗಾಧ, ಅಸಾಧಾರಣ ವ್ಯಕ್ತಿತ್ವದ ವರ್ಚಸ್ಸು.

ಕೋಟಿ ಸೂರ್ಯ ತೇಜಸ್ಸಿನ ಸೆಲೆಯಂತೆ ಅದ್ವಿತೀಯವಾದುದು. ಶ್ರೀಕೃಷ್ಣನನ್ನು ಅವತಾರ ಪುರುಷನೆಂದು ನೋಡುವುದರಲ್ಲಿ ಬ್ರಹ್ಮಾನಂದ ವಿದೆ. ಸಾಹಿತ್ಯಾಭ್ಯಾಸಿಗಳಿಗೆ, ಧಾರ್ಮಿಕ ಮನೋಭಾವದವರಿಗೆ ಶ್ರೀಕೃಷ್ಣ ಕಥಾಮಂಜರಿ ಯಾವತ್ತೂ ರಸಾನಂದದ ತವನಿಯಾಗಿದೆ. ಶ್ರೀಕೃಷ್ಣನ ಮನಮೋಹಕ ವ್ಯಕ್ತಿತ್ವ ಅತ್ಯಂತ ರೋಚಕವಾದುದೂ ಹೌದು. ಕಾರಣ ಅವನ ಜೀವನದುದ್ದಕ್ಕೂ ಕಾಣಬರುವ ಅಪೂರ್ವ ಘಟನಾವಳಿಗಳು, ಆ ಸಂದರ್ಭಗಳಲ್ಲಿ ಅವನು ನಡೆದುಕೊಂಡ ರೀತಿಗಳು, ಶ್ರೀಕೃಷ್ಣನ ವ್ಯಕ್ತಿತ್ವದ ಅನಂತತೆ ಇರುವುದು ಸಾಮಾನ್ಯರಿಗೆ ಸುಲಭವಾಗಿ ಅರಿವಾಗದ ಅವನ ನಡೆ ನುಡಿಯಲ್ಲಿನ ವೈವಿಧ್ಯಮುಖ. ಭಾರತದ ಸಾಂಸ್ಕೃತಿಕ ಕ್ಷೇತ್ರದ ಮಹಾನ್ ಕೊಡುಗೆ ಮಹಾಭಾರತ. ನಮ್ಮನಾಡಿನ ಶ್ರೇಷ್ಠ ಸಾಹಿತ್ಯದ ಅಭಿ ವ್ಯಕ್ತಿಗೆ ರಾಮಾಯಣ, ಮಹಾಭಾರತಗಳು ಇಂದಿಗೂ ಜೀವಂತ ನಿದರ್ಶನ ವಾಗಿವೆ. ಕೃಷ್ಣ ಲೋಕಪ್ರಿಯನಾಯಕ, ವಿಷ್ಣುವಿನ ದಶಾವತಾರಗಳಲ್ಲಿ ಕೃಷ್ಣನ ಅವತಾರ ಎಂಟನೆಯದು. ಭಾರತೀಯರ ಧಾರ್ಮಿಕ ಮನೋ ವೃತ್ತಿಯಲ್ಲಿ ಪೂಜನೀಯ ಕಲ್ಪನೆಗಳಿಂದ ಆವಿಷ್ಕಾರಗೊಂಡ ಕಥಾ ಬಿತ್ತಿಗೆ ಇಲ್ಲಿ ಉತ್ಕೃಷ್ಟ ಉದಾಹರಣೆಗಳು ಸಿಗುತ್ತದೆ.

ಕೃಷ್ಣರಸಿಕ, ಸ್ನೇಹಶೀಲ, ಧರ್ಮಜ್ಞ ಅಷ್ಟೇ ಅಲ್ಲ ಚತುರ ರಾಜಕೀಯ ಪಟು ! ಕಂಸನ ಸೆರೆಮನೆಯಲ್ಲಿ ಮಧ್ಯರಾತ್ರಿಯಲ್ಲಿ ಶ್ರೀಕೃಷ್ಣನ ಜನನ ತುಂಬಾ ಸಾಂಕೇತಿಕವಾದುದು. ಗೋಕುಲದಲ್ಲಿ ಕೃಷ್ಣ ಬೆಳೆದಿದ್ದು, ಕಾಳಿಂಗಮರ್ದನ ಈ ಎಲ್ಲ ಸನ್ನಿವೇಶಗಳಲ್ಲೂ ನೂತನ ಅರ್ಥಗಳನ್ನು ಕಾಣಬಹುದು. ಮಹಾ ಭಾರತ, ಭಾಗವತ ಪುರಾಣ ಮತ್ತು ಹರಿವಂಶಗಳಲ್ಲಿ ಕೃಷ್ಣ ಕಥೆಯ ಉಲ್ಲೇಖ ವಿದೆ. ಮಹಾವಿಷ್ಣುವಿನ ಹತ್ತು ಅವತಾರಗಳಲ್ಲಿ ಎಂಟನೆಯದು ಕೃಷ್ಣಾವತಾರ. ಇದು ಭಾರತೀಯರ ಪ್ರಬಲವಾದ ನಂಬಿಕೆ. ಶ್ರೀಕೃಷ್ಣ ಹಿಮಾಲಯದಂತೆ ಎತ್ತರೆತ್ತರ,ವಾರಿಯಂತೆ ಬಿತ್ತರ, ಸೂರ್ಯನಂತೆ ತೇಜಃಪ್ರಖರ,ಬಾನ್ ಬಯಲಂತೆ ವಿದೂರ, ಅವನ ಅಪೂರ್ವ ವ್ಯಕ್ತಿತ್ವದ, ಅನಂತ ಶಕ್ತಿಯನ್ನು ಅಮೂಲಾಗ್ರವಾಗಿ ಅರಿತವರಿಲ್ಲ, ಸಂಸ್ಕೃತ ಸಾಹಿತ್ಯದ ಸತತ ಅಭ್ಯಾಸದಿಂದ ಶ್ರೀಕೃಷ್ಣನ ಬಗೆಗೆ ಹೆಚ್ಚು ತಿಳಿಯಬಹುದು. ಕೃಷ್ಣನ ಬಗೆಗೆ ನಿಧಾನವಾಗಿ ಓದಿ, ಸಮಾಧಾನ ಚಿತ್ತದಿಂದ ಅರಗಿಸಿಕೊಂಡರೆ ಖಂಡಿತ ಜ್ಞಾನ ಸಂಪಾದನೆ ಯಾಗುತ್ತದೆ. ಪಾಮರರಿಗೆ,ಪಂಡಿತರಿಗೆ 'ಕೃಷ್ಣ ಕಥೆ' ಉತ್ತಮ ರಸಪಾಕ. ಸಮ ಕಾಲೀನ ಜೀವಿಗಳಿಗೆ ಕೃಷ್ಣ ಪಾತ್ರ ನಿಜಕ್ಕೂ ಸದಭಿರುಚಿಯನ್ನು ಕಲಿಸುತ್ತದೆ. ಸಹಸ್ರ ಸಹಸ್ರ





ವರ್ಷಗಳಿಂದ ನಿರಂತರ ''ಧರ್ಮಧಾರೆ'' ಯಾಗಿ ಹರಿದು ಬಂದ ಶ್ರೀಕೃಷ್ಣನ ಪಾತ್ರ ಜೊನ್ನ ಜೇವಿನಂತೆ ಕಲ್ಪವೃಕ್ಷದ ಸಿಹಿ ಜಲದಂತೆ ಅಮೃತೋಮಯ ಶಿಷ್ಟ ರಕ್ಷಣ ಹಾಗೂ ದುಷ್ಟಶಿಕ್ಷಣ ಇವೆರಡೂ ಶ್ರೀಕೃಷ್ಣನ ಪರಮ ಉದ್ದೇಶ. ಅವನನ್ನು ಅನನ್ಯವಾಗಿ ಅಕ್ಕರೆಯಿಂದ ನಂಬಿದವರಿಗೆ ಅವನು 'ವರದ'ನೂ ಹೌದು, ದ್ವೇಷಿಸುವವರ ಪಾಲಿಗೆ ಅಂತಕನೂ ಹೌದು.ಇಂಥ ಶ್ರೀಕೃಷ್ಣನ ಸ್ಮರಣೆಯೇ ಒಂದು ಸೌಭಾಗ್ಯ. 'ನೆನಹುಘನ' ಎಂಬುದೂ ಅನು ಪಮ ಕವಿವಾಣಿ.''ಎತ್ತಲೊ ಲೆವುದು ಧರ್ಮಬಲ,ತಾನತ್ತ ವೊಲೆವುದು ದೈವ..''ಈ ದೃಷ್ಟಿಯಲ್ಲಿ ಶ್ರೀಕೃಷ್ಣನ ಪ್ರತಿಯೊಂದು ನಡೆ, ನುಡಿ,ಆಟ, ಒಲವು,ನಿಲುವು,ಎಲ್ಲವೂ ಧರ್ಮದ ಉತ್ಥಾನಕ್ಕಾಗಿಯೇ. ಕೃಷ್ಣನ ರೀತಿ ಯನ್ನು ಅನುಸರಿಸಿ ಬಾಳಿದರೆ, ಅವನು ತನ್ನೊಳಗೆ ತೆರೆದುಕೊಂಡ ಸಾಧ್ಯತೆ ಗಳನ್ನು ನಿಮ್ಮೊಳಗೂ ತೆರೆದುಕೊಂಡರೆ ಆಗ ಮಾತ್ರ ನಿಮ್ಮ ಮಟ್ಟಿಗೆ ಗೀತೆ ಸತ್ಯವಾಗುವುದು ಬದುಕಿನ ವಾಸ್ತವವಾಗುವುದು. ಕೃಷ್ಣ ತನ್ನ ಬಾಳಿನಲ್ಲಿ ಸನ್ನಿವೇಶಗಳೂ, ವ್ಯಕ್ತಿಗಳಿಗೆ ಸಮಯಕ್ಕೆ ತಕ್ಕಂತೆ ಸ್ಪಂದಿಸಿ , ಕಾರ್ಯಗಳನ್ನು ಕೈಗೊಂಡು ಯಶಸ್ವಿಯಾಗಿ ಪೂರೈಸಿದ.

ಅಲ್ಲಿಯವರೆಗೆ ಯಾರೇ ಹೇಳಿದ ಯಾವುದೇ ಮಾತನ್ನು ನಂಬ ಬೇಡಿ. ಹಾಗೆಂದ ಮಾತ್ರಕ್ಕೆ, ಅದರಲ್ಲಿ ಅಪನಂಬಿಕೆ ಇಡಿ ಎಂದರ್ಥವಲ್ಲ. ಕೃಷ್ಣ ಒಬ್ಬ ನಿರರ್ಥಕ ವ್ಯಕ್ತಿ ಎಂದು ನಾನು ಹೇಳುತ್ತಿಲ್ಲ. ಅವನು ಹೇಳುತ್ತಿ ರುವ ವಿಷಯಗಳು ನಿಮ್ಮ ಪಾಲಿಗೆ ಇನ್ನೂ ಸತ್ಯಸ್ಥಿತಿಯಾಗಿಲ್ಲವೆಂದರ್ಥ. ಇಷ್ಟರ ಮಟ್ಟಿನ ತೆರೆದ ಮನೋಭಾವ ನಿಮ್ಮಲ್ಲಿದ್ದರೆ-ಕೃಷ್ಣ ಏನೋ ಹೇಳು ತ್ತಿರುವವನಲ್ಲ, ನಾನೂ ಮಾಡಿ ತಿಳಿಯಬೇಕು-ಎಂಬ ಕುತೂಹಲ, ತಿಳಿದು ಕೊಳ್ಳುವ ತೆರೆದ ಬುದ್ಧಿ ಮನಸ್ಸು ಇದ್ದರೆ ಸಾಧ್ಯತೆಯೂ ಇರುತ್ತದೆ. ನಿಮ್ಮ ಪಾಲಿಗೆ ಇವೆಲ್ಲವೂ ವಾಸ್ತವವಾಗುವ ಸಂಭವ ಇರುತ್ತದೆ.

ಕೃಷ್ಣನಾಗು ಎನ್ನುವುದರ ಅರ್ಥವೇನು? ನೆರೆಯ ಹುಡುಗಿಯರನ್ನು ಪ್ರೀತಿಸುವುದೇ? ಎದುರಾದವರೊಡನೆ ಯುದ್ಧವೆ? ವಿಷಯ ಅದಲ್ಲ. ಕೃಷ್ಣ ತನ್ನ ಬಾಳಿನಲ್ಲಿ ಎದುರಾದ ಸನ್ನಿವೇಶಗಳು,ವ್ಯಕ್ತಿಗಳಿಗೆ ಸಮಯಕ್ಕೆ ತಕ್ಕಂತೆ ಸ್ಪಂದಿಸಿ, ಕಾರ್ಯಗಳನ್ನು ಕೈಗೊಂಡು ಯಶಸ್ವಿಯಾಗಿ ಪೂರೈಸಿದ. ಇಡೀ ಮಹಾಭಾರತವು ತೀವ್ರತರಹದ ಜೀವನದ ನಾಟಕ. ಮಹಾಭಾರತ ಕಥೆ ಯಲ್ಲಿ ಅಧಮಾಧಮರಿಂದ ಹಿಡಿದು ಉತ್ತಮೋತ್ತಮ ವ್ಯಕ್ತಿಗಳವರೆಗೆ ಎಲ್ಲ ತರದ ಜನರಿದ್ದರು. ಆದರೆ ಸನ್ನಿವೇಶಗಳು ಅಳವಿಗೆ ಮೀರಿದ ತೀವ್ರತೆ ಪಡೆ ದಾಗ ಎಲ್ಲರೂ ಅಸಹನೀಯ ಪಾಡುಪಟ್ಟರು. ಒಳ್ಳೆಯವರೂ ದುಃಖಿಕ್ಕಿಡಾ ದರು. ಕೆಟ್ಟವರೂ ಸಂಕಟ ನೋವನ್ನು ಅನುಭವಿಸಿದರು.
ಕೃಷ್ಣನೊಬ್ಬ ಮಾತ್ರ ತನ್ನ ಮುಂದೆ ಬಂದ ತೊಡಕು







ತೊಂದರೆಗಳ ಸನ್ನಿ ವೇಶಗಳನ್ನು ಯಾವುದೇ ಸಂಕಟ-ದುಃಖದ ಲವಲೇಶವೂ ಇಲ್ಲದಂತೆ ನಿರ್ಲಿಪ್ತ ನಾಗಿ ಎದುರಿಸುತ್ತ ಅನುಭವಿಸುತ್ತ ಬಾಳಿದ.

'ಹಿಂಸಾಚಾರದ-ರಕ್ತದೋಕುಳಿಯ ಸಮರ ಬೇಡ' ಎಂಬ ಅವನ ಹಂಬಲ ಫಲಿಸಲಿಲ್ಲ. ನೂರೊಂದು ಮಕ್ಕಳನ್ನು ಕಳೆದು ಕೊಂಡ ಗಾಂಧಾರಿಯ ಕರುಳು ಕಿವುಚಿದಂತಾಯ್ತು. ಪಾಂಡವರ ರಕ್ಷಣೆಗೆ ನಿಂತು ನನ್ನ ಮಕ್ಕಳ ಸಾವಿಗೆ ಕಾರಣೀಭೂತನಾದ ಕೃಷ್ಣನ ಮೇಲೆ ಅವಳ ರೊಚ್ಚಿಗೆ ಮಿತಿ ಎಂಬುದಿಲ್ಲ 'ಕೃಷ್ಣಾ,ನಿನ್ನ ಯಾದವ ವಂಶ ನಿರ್ನಾಮ ವಾಗಲಿ' ಎಂಬ ಶಾಪ ನೀಡಿ, ಕುಂತಿ, ವಿದುರ, ಧೃತರಾಷ್ಟ್ರನ ಜೊತೆಗೂಡಿ ಕಾಡಿಗೆ ತೆರಳಿದಳು ಗಾಂಧಾರ ಮನೆತನದ ಗಾಂಧಾರಿ; ಕುಂತಿಯ ಹಾಗೆಯೇ ಮಹಾನ್ ಸಾಧ್ವಿ ಗಾಂಧಾರಿ.ಅವಳ ಶಾಪ ಹೇಗೆ ಸುಳ್ಳಾದೀತು? ಕೃಷ್ಣನೂ ಯುದ್ಧ ಸಾವು ನೋವುಗಳಿಂದ ತತ್ತರಿಸಿದ. ಅಣ್ಣ ಬಲರಾಮನನ್ನು ಕಳೆದುಕೊಂಡಿದ್ದ ಆತ, ''ನಾನೂ ನಿರ್ಯಾಣಕ್ಕೆ ತಯಾರು'' ಎಂದು ಗಿಡದ ಕೆಳಗೆ ಕುಳಿತುಕೊಂಡ. ಬೇಟೆಗಾರ ಹೂಡಿದ ಬಾಣ ಇವನ ಕಾಲಿಗೆ ತಗು ಲಿದ್ದೇ ನೆಪವಾಗಿ ಶ್ರೀಕೃಷ್ಣ ತನ್ನ ಅವತಾರ ಮುಗಿಸಿದ ಕೊನೆಗಾಲದಲ್ಲಿ ಅರ್ಜುನನ್ನೂ ನೋಡಲು ಸಾಧ್ಯವಾಗಲಿಲ್ಲ.

ಹುಡುಕುಲೇ ಬೇಕು ನಿನ್ನ ಇತಿಹಾಸದ ಹಂಗಿಲ್ಲದೆ ಕಾವ್ಯದ ಹಂಗಿಲ್ಲ, ಶಾಸ್ತ್ರದ ಹಂಗಿಲ್ಲದೆ ನನ್ನೊಳಗಿರುವ ನಿನ್ನನ್ನೊಮ್ಮೆ ನಾನು ಹುಡುಕಿ ಕಾಣಲೇ ಬೇಕು. ನಿನ್ನ ನೂರು ಹೆಸರು, ನೂರು ರೂಪ, ನೂರಾರು ಕಥೆಗಳನ್ನು ಕೇಳುತ್ತಲೇ ನಿನ್ನನ್ನು ಒಳಗೆ ಬರಮಾಡಿಕೊಂಡ ನಾನು ಈಗ ಅವೆಲ್ಲದರ ಜೊತೆಗೇ ನನ್ನನ್ನೂ ಕಳೆದುಕೊಂಡೇ ನಿನ್ನನ್ನು ಹುಡುಕಬೇಕು.

ಕಳೆದುಕೊಳ್ಳುವ ಬಯಕೆ ಇದ್ದವರಿಗೆಲ್ಲ ನಿನ್ನ ಕಾಣುವ ಹಂಬಲ. ನಮ್ಮನ್ನು ನಾವು ಕಳೆದುಕೊಳ್ಳುವ ಬಯಕೆಯೇ ನಿನ್ನ ಹುಡುಕುವ ಹಂಬಲವೂ ಆಗಿ ನಮ್ಮನ್ನು ಉಳಿಸಿರಲಿ ಕೃಷ್ಣಾ...ನಿನ್ನ ಕರುಣೆಯೂ, ಪ್ರೀತಿಯೂ ಈ ಲೋಕವನ್ನೆಲ್ಲಾ ಸದಾ ಕಾಯುತ್ತಿರುವ ಹಾಗೇ.



## ಗಜವಾಹನೋತ್ಸವ

**ಎರಡನೆಯದಾಗಿ ಗಜವಾಹನ, ಆನೆ ದೊಡ್ಡದಾದ ಪ್ರಾಣಿ, ತಾನಾಗಿ ಉತ್ಪಾತ ಮಾಡುವ ಸ್ವಭಾವದ್ದಲ್ಲ, ನಿಧಾನವಾಗಿ ನಡೆದರೂ ಅದಕ್ಕೆ ಬಹಳ ಮರ್ಯಾದೆ, ರಾಜರ ಆಸ್ಥಾನಗಳಲ್ಲಿ ಅದರ ಮೇಲೆ ಕುಳಿತುಕೊಂಡು ಹೋಗುವುದೇ ಗೌರವ ಎಂದು ರಾಜರು ಅಂದುಕೊಂಡರೆ ಪ್ರಪಂಚದ ರಾಜನಾದ ಭಗವಂತನು ಆ ಗಜನ ಮೇಲೆ ಕುಳಿತು ಆ ಗಜಕ್ಕೆ ಇನ್ನಷ್ಟು ಮಹತ್ವವನ್ನು ಕೊಡುತ್ತಾನೆ. ಭಗವಂತನಿಗೆ ತನ್ನ ಭಕ್ತರಲ್ಲಿ ಗಜದ ಹಿರಿಮೆ ಮತ್ತು ಗಾಂಭೀರ್ಯದ ನಡೆ ಪ್ರೀತಿ ಪಾತ್ರವಾಗಿದೆ. ಗಜ ಎಲ್ಲೇ ಹೋಗಲಿ. ತನ್ನ ಪಾಡಿಗೆ ತನ್ನ ಹಿಂಡಿನ ಜೊತೆಗೆ ಸಂತಸದಿಂದ ಇರುತ್ತದೆ. ಯಾರಾದರೂ ಕೆಣಕಲು ಬಂದಾಗ ತಾನೂ ದಾಳಿ ಮಾಡಿ ರಕ್ಷಿಸಿಕೊಳ್ಳುತ್ತದೆ. ಹಾಗೆಯೇ ಭಗವಂತನ ಭಕ್ತರಿಗೆ ಕೂಡ ನಿಮ್ಮ ಪಾಡಿಗೆ ನೀವು ಇರಿ,ಉತ್ಪಾತ ಮಾಡಲು ಬಂದವರನ್ನು ಸುಮ್ಮನೆ ಬಿಡಬೇಡಿ ಎಂಬ ಸಂದೇಶವನ್ನು ಕೂಡ ಕೊಡುತ್ತದೆ.**





# ಶ್ರೀ ವಾದಿರಾಜರು

**- ಶ್ರೀಧರರಾಯಸಂ**

ಶ್ರೀಮದ್ರಾಮಾಯಣ, ಮಹಾಭಾರತ, ಭಾಗವತ, ವೇದ, ಉಪನಿಷತ್ತು, ಪುರಾಣ, ಪ್ರಮೇಯಗಳನ್ನು ಮತ್ತು ತಮ್ಮ ಕೃತಿಗಳನ್ನೂ ಆಧರಿಸಿ,ಶ್ರೀ ವಾದಿರಾಜರು, ಅನೇಕ ಹೋಲಿಕೆಗಳನ್ನು, ಉಪಮೆಗಳನ್ನು ತಿಳಿಸಿದ್ದಾರೆ.

ಶ್ರೀರಾಮಚಂದ್ರ ವನವಾಸದಲ್ಲಿದ್ದಾಗ,ಸೀತಾಮಾತೆಯನ್ನು ಹುಡುಕುತ್ತಾ, ಋಷ್ಯಮೂಕ ಪರ್ವತದ ತಪ್ಪಲಿಗೆ ಬರುವನು. ಆಗ ಅಲ್ಲಿದ್ದ ಹನುಮಂತನೊಂದಿಗಿದ್ದ ಸುಗ್ರೀವಾದಿಗಳು, ರಾಮಲಕ್ಷ್ಮಣರನ್ನು ಕಂಡು, ಇವರು ವಾಲಿ ಕಡೆಯವರೆಂದು ಓಡಲು ಸಿದ್ಧರಾದಾಗ, ಅವರನ್ನು ತಡೆದು, ನಿಲ್ಲಿಸಿ, ಹನುಮಂತನು ಭಿಕ್ಷು ವೇಷಧರಿಸಿ , ಶ್ರೀ ರಾಮಚಂದ್ರನ ಹತ್ತಿರ ಬಂದು, ಭಕ್ತಿಯಿಂದ ನಮಸ್ಕರಿಸಿ ಸ್ತೋತ್ರಮಾಡಿ, ತಮ್ಮ ಹೆಗಲ ಮೇಲೆ ಕೂಡಿಸಿಕೊಂಡು ಬರುವನು . ಈ ಸನ್ನಿವೇಶವನ್ನು ಶ್ರೀ ಮಧ್ವಾಚಾರ್ಯರು ತಮ್ಮ ಮಹಾಭಾರತ ತಾತ್ಪರ್ಯ ನಿರ್ಣಯದಲ್ಲಿ

ಉತ್ಥಾಪ್ಯ ಚೈನಮರವಿಂದದಲಾಯತಾಕ್ ಷ
ಶ್ಚಕ್ರಾಂಕಿತೇನ ವರದೇನ ಕರಾಂಬುಜೇನ
ಕೃತ್ವಾ ಚ ಸಂವಿದಮನೇನ ನುತೋಸ್ಯ ಚಾಂಸಂ
ಪ್ರೀತ್ಯಾರುರೋಹ ಸಹಸನ್ ಸಹ ಲಕ್ಷ್ಮಣೇನ ॥

ಎಂದು ನಿರ್ಣಯಿಸಿದ್ದಾರೆ. ಈ ಶ್ಲೋಕಕ್ಕೆ ಶ್ರೀ ವಾದಿರಾಜರು ತಮ್ಮ ವ್ಯಾಖ್ಯಾನ ಗ್ರಂಥ ''ಭಾವಪ್ರಕಾಶಿಕೆ''ಯಲ್ಲಿ ಅದ್ಭುತವಾದ ವಿವರಣೆ ನೀಡಿದ್ದಾರೆ.

ಹೇ, ಹನುಮಂತ ನೀನು ಮೂಲರೂಪದಲ್ಲಿ ಹೀಗೆಯೇ, ಸಕಲ ಜೀವರನ್ನು ನಿನ್ನ ಎಡ ಹೆಗಲ ಮೇಲೆ ಮತ್ತು ನನ್ನನ್ನು ಬಲ ಹೆಗಲ ಮೇಲೆ ಕೂಡಿಸಿಕೊಂಡು , ಒಂದು ದೇಹದಿಂದ ಮತ್ತೊಂದು ದೇಹಕ್ಕೆ ಈ ಜೀವನನ್ನು ಪ್ರವೇಶ ಮಾಡಿಸುತ್ತಿ. ಇದನ್ನೇ ಹುಟ್ಟು, ಸಾವು ಎಂದು ಜಗತ್ತಿನಲ್ಲಿ ಕರೆಯುವರು. ಹೀಗಾಗಿ ಇದೇನು ಹೊಸದಲ್ಲ ಎಂಬುದಾಗಿ ಶ್ರೀ ರಾಮಚಂದ್ರ ನಕ್ಕನು. ಇದನ್ನು ಹಸನ್, ಎಂಬ ಶಬ್ದದಿಂದ ಶ್ರೀ ಮಧ್ವಾಚಾರ್ಯರು ನಿರ್ಣಯಿಸಿದ್ದಾರೆ ಎಂದು ಶ್ರೀವಾದಿರಾಜರು ತಮ್ಮ ಭಾವಪ್ರಕಾಶಿಕೆ ಕೃತಿಯಲ್ಲಿ ವ್ಯಾಖ್ಯಾನಿಸಿದ್ದಾರೆ. ಹನುಮಂತನು ಬಲಹೆಗಲ ಮೇಲೆ ಶ್ರೀರಾಮಚಂದ್ರನನ್ನು ಎಡಹೆಗಲ ಮೇಲೆ ಶೇಷಾವತಾರಿಯಾದ, ಲಕ್ಷ್ಮಣನನ್ನು ಕೂಡಿಸಿಕೊಂಡು ಹೊರಟನು. ಇದರಲ್ಲಿ ಕ್ರಮ ವ್ಯತ್ಯಾಸ ಮಾಡಿಲ್ಲ ಎಂಬುದನ್ನು ರಾಮಾಯಣದಲ್ಲಿ ಕಾಣಬಹುದು! ಶ್ರೀವಾದಿರಾಜರು ಸುಂದರಕಾಂಡ, ರಾಮಾಯಣದ ಸನ್ನಿವೇಶವನ್ನು ತಮ್ಮ ಹಾಡಿನ ಮೂಲಕ, ಅತ್ಯಂತ ಪ್ರಾಸಬದ್ಧವಾಗಿ, ರಚಿಸಿ, ಭಕ್ತರಿಗೆ ನೀಡಿದ್ದಾರೆ. ಎಷ್ಟು ಸಾಹಸವಂತ , ನೀನೇ ಬಲವಂತ ದಿಟ್ಟ ಮಾರುತಿ ಭಳಿ ಭಳೀರೇ ಹನುಮಂತ ಎಂದು ಹಾಡಿ, ಹೊಗಳಿದ ಶ್ರೀವಾದಿರಾಜರು, ಹನುಮಂತನ ವೈರಾಗ್ಯ, ಧೈರ್ಯ, ಸಾಹಸ, ಸ್ವಾಮಿ ಭಕ್ತಿಯನ್ನು ಅಧ್ಭುತವಾಗಿ ಹೃದಯ ತುಂಬಿ, ಹಿಗ್ಗಿನಿಂದ ಕೊಂಡಾ ಡಿದ್ದಾರೆ. ಈ ಹಾಡಿನಲ್ಲಿ ಪ್ರಾಸ, ಅನುಪ್ರಾಸ, ಅಂತ್ಯಪ್ರಾಸವನ್ನು ಅತ್ಯಂತ ಸುಂದರವಾಗಿ ಮೈಮರೆತು ಪುಳಕಿತರಾಗಿ ಹಾಡಿದ್ದಾರೆ. ''ದಾಸೋಹಂ ಕೌಸಲೇಂದ್ರ'' ಎಂದು ಹನುಮಂತ ದೇವರು ರಾವಣನಿಗೆ ತನ್ನ ಸ್ವಾಮಿ ಭಕ್ತಿಯನ್ನು ಪ್ರದರ್ಶಿಸಿಸುವುದನ್ನು ಅಧ್ಭುತವಾಗಿ ಚಿತ್ರಿಸಿದ್ದಾರೆ. ಶ್ರೀವೇದವ್ಯಾಸ ದೇವರ ಮಾತುಗಳಾದ, ಬ್ರಹ್ಮಸೂತ್ರಗಳಿಗೆ, ಶ್ರೀವಾದಿರಾಜರು ಅಧ್ಭುತ ಚಿಂತನೆ ಮಾಡಿ, ಭಕ್ತ ಜನರಿಗೆ ಈ ರೀತಿ ತಿಳಿಸಿದ್ದಾರೆ.

ವೇದವ್ಯಾಸರ ಮಾತುಗಳೇ ಬ್ರಹ್ಮಸೂತ್ರಗಳು ಹನುಮಂತ ದೇವರೇ ಶ್ರೀಮದ್ಧರಾಯರು ನಾನಾ ಪ್ರದೇಶಗಳೇ ನಾನಾ ಆಕರ ಗ್ರಂಥಗಳು ಕಲ್ಲು ಬಂಡೆಗಳೇ ಆ ಆಕರ ಗ್ರಂಥಗಳಲ್ಲಿರುವ ಗಟ್ಟಿ ಮುಟ್ಟಾದ ಪ್ರಮಾಣ ವಾಕ್ಯಗಳು ಅವುಗಳಿಂದ ನಿರ್ಮಿತವಾದದ್ದೇ ''ಬ್ರಹ್ಮಸೂತ್ರಗಳು'' ಎಂಬ ಸೇತುವೆ ಈ ಸೇತುವೆ ಮುಕ್ತಿ ಯೋಗ್ಯರಾದ ಸುಜೀವಿಯರ ಗಮನಕ್ಕೆ ಎಂದು ಶ್ರೀ ವಾದಿರಾಜರು ಹೋಲಿಕೆ ಮಾಡಿ ವರ್ಣನೆ ಮಾಡಿದ್ದಾರೆ. ಶ್ರೀ ವಾದಿರಾಜರು ರಚಿಸಿದ ''ವೈಕುಂಠ ವರ್ಣನೆ'' ಕೃತಿಯಲ್ಲಿ ''ತಪ್ತಮುದ್ರಾ ಧಾರಣೆ'' ಬಗ್ಗೆ ಅತ್ಯಂತ ಸುಂದರವಾಗಿ ನಿರೂಪಿಸಿದ್ದಾರೆ. ಭಾಗವತ ದಶಮ ಸ್ಕಂದದಲ್ಲಿ ಬರುವ, ಕಾಳೀಯಮರ್ದನ,ಕಾಲೀಯ ಅಹಂಕಾರ ನಿಗ್ರಹ, ಮತ್ತು ಅವನಿಗೆ ಶ್ರೀ ಹರಿ ನೀಡಿದ ಅಭಯ ಚಿತ್ರಿಸಿದ್ದಾರೆ. ಒಂದು ಮಡುವಿನಲ್ಲಿ ಕಾಲೀಯ ಹಿಂಸೆ ಅತ್ಯಧಿಕವಾಗಿ, ನೀರಿನಲ್ಲಿ ಮತ್ತು ಗಗನದಲ್ಲಿ ಹಾರಾಡುವ ಪ್ರಾಣಿ, ಪಕ್ಷಿಗಳು ಕಾಲೀಯ ವಿಷ ಗಾಳಿಗೆ ದಗ್ಧವಾಗುತಿದ್ದವು. ದುಷ್ಟ ನಿಗ್ರಹಕ್ಕಾಗಿ, ಶ್ರೀಕೃಷ್ಣ ಮಡುವಿಗೆ ಬಂದು, ಕಾಲೀಯ ಹೆಡೆಯ ಮೇಲೆ ನಾಟ್ಯ ಮಾಡಿ ಅವನ ದೇಹವನ್ನು ಜರ್ಝರಿತ ಮಾಡುವನು.ಎಚ್ಚೆತ್ತ. ಕಾಲೀಯ, ಶ್ರೀಕೃಷ್ಣನೇ ನಾರಾಯಣ ಎಂಬ ಜ್ಞಾನ ಉದಯಿಸಿ, ತನ್ನ ತಪ್ಪನ್ನು ಮನ್ನಿಸಬೇಕೆಂದು ಶ್ರೀಕೃಷ್ಣನನ್ನು ಬೇಡಿಕೊಂಡನು. ಅವನ ಪತ್ನಿಯರೂ ಬಂದು ಕಾಳೀಯನನ್ನು ಮನ್ನಿಸಬೇಕೆಂದು, ಪತಿ ಭಿಕ್ಷೆ ಬೇಡಿದರು.ಶ್ರೀ ಕೃಷ್ಣ ಕಾಳೀಯನಿಗೆ, ಕ್ಷಮಿಸಿ ಬಿಟ್ಟು ಬಿಟ್ಟಾಗ ಕಾಳೀಯ ಶರಣಾಗಿ ಅನುಗ್ರಹ ಮಾಡಬೇಕೆಂದು ಪ್ರಾರ್ಥಿಸಿದನು. ಶ್ರೀಕೃಷ್ಣ ಕಾಳೀಯನಿಗೆ ರಮಣ ದ್ವೀಪಕ್ಕೆ ಹೊರಡು ಎಂದು ಅಜ್ಞಾಪಿಸಿದ. ಮಡುವಿನಲ್ಲಿ ತುಂಬಿದ ವಿಷ ಜಲ ಪವಿತ್ರವಾಗಿ,ಯೋಗ್ಯವಾಗಲಿ,ನಿನ್ನ ಶಿರಸ್ಸಿನಲ್ಲಿ ಮೂಡಿರುವ ನನ್ನ ಅಂಗಾಲಿನ ರೇಖೆಗಳಾದ ಶಂಖ ಚಕ್ರ, ಗದಾ ಪದ್ಮಗಳನ್ನು ನೋಡಿದ ಗರುಡ ಸಹ, ನಿನಗೆ ಯಾವ ರೀತಿಯ ತೊಂದರೆ ಕೊಡಲಾರ ಎಂದು ಶ್ರೀಕೃಷ್ಣ ಅಭಯ ನೀಡಿ, ಕಾಳೀಯನಿಗೆ ಅನುಗ್ರಹ ಮಾಡಿದ. ಶಂಖ, ಚಕ್ರ, ಚಿಹ್ನೆಗಳನ್ನು ಎರಡೂ ಭುಜಗಳಲ್ಲಿ ವಿಧಿಪೂರ್ವಕವಾಗಿ ಹೋಮಾಗ್ನಿಯಲ್ಲಿ ದಹಿಸಿ ವಿದ್ಯುಕ್ತ ಮಂತ್ರಗಳಿಂದ ಉಚ್ಚರಿಸಿ ಧಾರಣೆ ಮಾಡಿದರೇ, ಎಲ್ಲಾ ಪಾಪಗಳು ನಾಶವಾಗಿ

# ವಿಘ್ನ ವಿನಾಶಕ ವಿನಾಯಕ

ವಿಷ್ಣು ಲಕ್ಷ್ಮೀದೇವಿಯನ್ನು ವಿವಾಹವಾಗುವಾಗ ದೇವತೆಗಳಿಗೆಲ್ಲ ಒಂದೊಂದು ಕೆಲಸವನ್ನು ಒಪ್ಪಿಸುತ್ತಾನೆ. ದೇವತೆಗಳಿಗೆ ಗಣೇಶ ಮದುವೆಗೆ ಬರುವುದು ಇಷ್ಟವಾಗುವುದಿಲ್ಲ. ಹೀಗಾಗಿ ಅವರು ಗಣೇಶನನ್ನು ಯಾವುದಕ್ಕೂ ಕರೆಯುವುದಿಲ್ಲ. ಅವನ ದೊಟ್ಟ ಹೊಟ್ಟೆ ಮೊರ ದಂಥ ಅಗಲ ಕಿವಿಗಳು ಹೊಟ್ಟೆಗೆ ಸುತ್ತಿದ ಹಾವು ಅವನ ದಪ್ಪ ದಪ್ಪ ಕಾಲುಗಳು ಅಯ್ಯೋ ಛೀ ಈ ಗಣೇಶ ಬೇಡಪ್ಪಾ ನಮ್ಮ ಜೊತೆ ಬರುವುದು ಅವನೋ ಅವನ ವೇಷವೋ ಎಂದು ಮೂಗು ಮುರಿಯುತ್ತಾರೆ. ವಿಷ್ಣುಗೂ ಗಣೇಶ ಮದುವೆಗೆ ಬರುವುದು ಬೇಡ ಎಂದು ಹೇಳಿಕೊಡುತ್ತಾರೆ. ವಿಷ್ಣುಗೆ ಇದು ಇಷ್ಟವಾಗದಿದ್ದರೂ ದೇವತೆಗಳ ಒತ್ತಾಯಕ್ಕೆ ಕಟ್ಟಿ ಬಿದ್ದು ಗಣೇಶನನ್ನು ನೀನು ಸ್ವರ್ಗವನ್ನು ನೋಡಿಕೊಂಡು ಇಲ್ಲೇ ಇರು. ಮದುವೆಗೆ ಬರುವುದು ಬೇಡ ಎಂದು ಹೇಳುತ್ತಾನೆ. ಗಣೇಶನಿಗೆ ನಿರಾಶೆಯಾದರೂ ಒಪ್ಪಿಕೊಳ್ಳುತ್ತಾನೆ. ಎಲ್ಲರೂ ಮದುವೆಗೆ ಹೊರಟು ಬಿಡುತ್ತಾರೆ. ಕಲಹ ಪ್ರಿಯನಾದ ನಾರದನಿಗೆ ಇದು ಗೊತ್ತಾಗುತ್ತದೆ. ದೇವತೆಗಳ ಹುನ್ನಾರವೂ ತಿಳಿಯುತ್ತದೆ. ಅವನು ಓಡೋಡಿ ಬಂದು ಗಣೇಶನ ಬಳಿ ಇದೆಲ್ಲವನ್ನೂ ಹೇಳುತ್ತಾನೆ. ನೀನು ಮದುವೆಗೆ ಹೋಗುವುದು ಬೇಡ ಎಂದ ದೇವತೆಗಳಿಗೆ ಪಾಠ ಕಲಿಸು ಎಂದು ಒಂದು ಉಪಾಯವನ್ನು ಹೇಳಿ ಕೊಡುತ್ತಾನೆ.

ಅದರಂತೆ ಗಣೇಶ ತನ್ನ ವಾಹನವಾದ ಮೂಷಿಕವನ್ನು ಕರೆದು ವಿಷ್ಣು ಹಾಗೂ ಲಕ್ಷ್ಮಿಯ ಮೆರವಣಿಗೆ ಹೊರಡುವ ರಸ್ತೆಯನ್ನು ಹಳ್ಳ ಕೊಳ್ಳಗಳಿರುವಂತೆ ಮಾಡು ಎಂದು ಅಜ್ಞೆ ಮಾಡುತ್ತಾನೆ. ಮೂಷಿಕವು ತನ್ನ ಸೈನ್ಯದೊಡನೆ ರಸ್ತೆಯನ್ನು ಕೊರೆದು ಒಳಗಡೆ ಡೊಗರು ಮಾಡಿ ಬಿಡುತ್ತದೆ. ಮೇಲ್ನೋಟಕ್ಕೆ ರಸ್ತೆ ಸರಿಯಾಗಿ ಕಂಡರೂ ಮೆರವಣಿಗೆ ಬಂದಾಗ ರಥಗಳು ಕುದುರೆಗಳು ಎಲ್ಲವೂ ಆ ಹಳ್ಳದಲ್ಲಿ ಬಿದ್ದು ಹೋಗುತ್ತದೆ. ದೇವತೆಗಳು ಎಷ್ಟು ಪ್ರಯತ್ನಿ ಸಿದರೂ ರಥಗಳನ್ನು ಮೇಲೆತ್ತಲು ಆಗುವುದಿಲ್ಲ. ಆಗ ಅಲ್ಲಿಯೇ ಹೋಗುತ್ತಿದ್ದ ಆ ಊರಿನ ರೈತನೊಬ್ಬನು ಕಾಣುತ್ತಾನೆ. ಅವನನ್ನು ಕರೆದು ಸಹಾಯ ಮಾಡಲು ಕೇಳಿ ಕೊಳ್ಳುತ್ತಾರೆ. ಅವನು ಜೈ ಗಣೇಶ ಎಂದು ಜೋರಾಗಿ ಕೂಗುತ್ತಾ ರಥವನ್ನು ಮೇಲೆತ್ತುತ್ತಾನೆ. ರಥ ಸುಲಭವಾಗಿ ಮೇಲೆ ಬರುತ್ತದೆ. ದೇವತೆ ಗಳಿಗೆ ಆಶ್ಚರ್ಯವಾಗುತ್ತದೆ. ನೀನು ರಥವನ್ನು ಮೇಲಕ್ಕೆತ್ತುವಾಗ ಜೈ ಗಣೇಶ ಎಂದು ಏಕೆ ಕೂಗಿದೆ ಎಂದು ರೈತನನ್ನು ಕೇಳುತ್ತಾರೆ. ಅದಕ್ಕೆ ರೈತ ಹೇಳುತ್ತಾನೆ. ಗಣೇಶನನ್ನು ನೆನೆದು ಯಾವ ಕೆಲಸ ಮಾಡಿದರೂ ಜಯವಾಗುತ್ತದೆ ಹಾಗೂ ಗಣೇಶ ವಿಘ್ನ ನಿವಾರಕ ಅವನನ್ನು ನೆನೆದರೆ ನಮ್ಮ ಕೆಲಸದಲ್ಲಾಗುವ ವಿಘ್ನಗಳನ್ನು ತಪ್ಪಿಸುತ್ತಾನೆ. ಅವ ನನ್ನು ನೆನೆಯದೆ ನಾವು ಯಾವ ಕೆಲಸವನ್ನೂ ಮಾಡುವುದಿಲ್ಲ.



ಇದನ್ನು ಕೇಳಿ ದೇವತೆಗಳಿಗೆ ನಾಚಿಕೆ ಯಾಗುತ್ತದೆ. ತಮ್ಮ ತಪ್ಪಿನ ಅರಿವಾಗುತ್ತದೆ. ಗಣೇಶನನ್ನು ಮದುವೆಗೆ ಆಹ್ವಾನಿಸಲು ವಿಷ್ಣುಗೆ ಕೇಳಿಕೊಳ್ಳು ತ್ತಾರೆ. ವಿಷ್ಣು ಮನದಲ್ಲೇ ದೇವತೆಗಳ ಅಜ್ಞಾನಕ್ಕೆ ನಗುತ್ತಾ ಗಣಪತಿಯನ್ನು ಮದುವೆಗೆ ಆಹ್ವಾನಿಸುತ್ತಾನೆ.

ಗಣಪತಿ ಬಂದ ತಕ್ಷಣ ರಸ್ತೆ ಮೊದಲಿನಂತೆ ಸಮ ತಟ್ಟಾಗುತ್ತದೆ. ಮದುವೆಯ ಮೆರವಣಿಗೆ ನಿರ್ವಿಘ್ನವಾಗಿ ಸಾಗುತ್ತದೆ. ದೇವತೆಗಳು ಗಣೇಶನನ್ನು ಕ್ಷಮೆ ಕೇಳುತ್ತಾರೆ.

ಯಮದೂತರು ಭಯಪಡುವರೆಂದು ಶ್ರೀವಾದಿರಾಜರು ತಪ್ತಮುದ್ರಾಧಾರಣೆ ಬಗ್ಗೆ ವಿವರವಾಗಿ, ಅತ್ಯಂತ ಗಹನವಾದ ವಿಷಯ ತಿಳಿಸಿದ್ದಾರೆ.ಶ್ರೀಕೃಷ್ಣ ಸತ್ಯ ಭಾಮ ಅವರ ಶೃಂಗಾರ ಭರಿತ ಸಂಭಾಷಣೆ, ಅತ್ಯಂತ ಸೊಗಸಾಗಿ ಶ್ರೀವಾದಿ ರಾಜರು ಚಿತ್ರಿಸಿದ್ದಾರೆ. ಸತ್ಯಭಾಮ ಅರಮನೆ ಯೊಳಗಿದ್ದಾಗ ಶ್ರೀ ಕೃಷ್ಣ ಹೊರಗಿ ನಿಂದ ಬಂದು, ಸತ್ಯಭಾಮ ಇರುವ ಅರ ಮನೆಯ ಕೋಣೆಯ ಬಾಗಿಲನ್ನು ತಟ್ಟುತ್ತಾನೆ. ಬೆರಳೊಳು ಕುಟಿಲದಿ ಕದವನು ಬಡಿವವ, ಯಾರೆಂದು ಪ್ರಶ್ನಿ ಸುತ್ತಾಳೆ. ನಾನು,ಚಕ್ರಧರ ಹರಿ, ಮಾಧವ ಫಣೇಂದ್ರ , ಖಗಪತಿರಸಿ, ಎಂದೂ ಬೇರೆ ಬೇರೆ ಹೆಸರುಗಳನ್ನು ಶ್ರೀ ಕೃಷ್ಣ ಹೇಳಿ ಉತ್ತರಿಸುತ್ತಾನೆ. ಈ ಎಲ್ಲಾ ಹೆಸರು ಗಳಿಗೆ, ಬೇರೆ, ಬೇರೆ ಅರ್ಥ ಸತ್ಯಭಾಮ ಹೇಳಿ, ಬಾಗಿಲು ತೆರೆಯದೇ ಇರಲು, ಕೊನೆಗೆ ಶ್ರೀಕೃಷ್ಣ "ಪದ್ಮನಾಭ" ಎಂದು ಉತ್ತರಿಸಲು, ಸಂತೋಷದಿಂದ ಸತ್ಯ ಭಾಮ ಬಾಗಿಲು ತೆಗೆದು, ಶ್ರೀಕೃಷ್ಣನನ್ನು ದರ್ಶಿಸಿ ಆನಂದಪಡುವ ಈ ಸಂದರ್ಭವನ್ನು ಶ್ರೀವಾದಿರಾಜರು ಅತ್ಯಂತ ಚಮತ್ಕಾರ ಶೃಂಗಾರ ಕಾವ್ಯಾ ತ್ಮಕವಾಗಿ ಬರೆದಿದ್ದಾರೆ.

ಭಾಗವತ ದಶಮ ಸ್ಕಂದದಲ್ಲಿ, ಶ್ರೀಕೃಷ್ಣನ ಗೋಕುಲದ ವರ್ಣನೆ, ಶ್ರೀವಾದಿರಾಜರು ಬಹು ಸುಂದರವಾಗಿ, ಕಾವ್ಯಾತ್ಮಕವಾಗಿ ವರ್ಣಿಸಿದ್ದಾರೆ. ಕಂಸ ನಿಂದ ಕಳುಹಿಸಲ್ಪಟ್ಟ ಅಕ್ರೂರ, ಶ್ರೀಕೃಷ್ಣನನ್ನು ದರ್ಶಿಸಲು ಗೋಕುಲಕ್ಕೆ ಬರುವ ಸಮಯದಲ್ಲಿ ಇನ್ನೇನು ಗೋಕುಲ ಹತ್ತಿರ ಬರಲು ಅನೇಕ ಗೋವುಗಳು, ಹುಲ್ಲನ್ನು ಮೇಯುತ್ತಿದ್ದವು. ಅಕ್ರೂರ, ಮೇಯುತ್ತಿದ್ದ ಗೋವುಗಳನ್ನು ನೋಡಿ ಆಶ್ಚರ್ಯಪಟ್ಟನು . ಅಲ್ಲಿಯ ಗೋವುಗಳು ತಲೆಯೆತ್ತದೇ ಹುಲ್ಲನ್ನು ಮೇಯುತ್ತಿದ್ದವು. ಶ್ರೀವಾದಿರಾಜರು ಈ ಸಮ ಯವನ್ನು ಅತ್ಯಂತ ಶೃಂಗಾರಮಯವಾಗಿ ಚಮತ್ಕಾರದಿಂದ ಹೋಲಿಕೆ ಯೊಂದಿಗೆ ವರ್ಣಿಸಿದ್ದಾರೆ. ಶ್ರೀಕೃಷ್ಣನ ವೇಣುಗಾನದ ನಿನಾದ ಕೇಳಿ, ಆನಂದಪಡುತ್ತಾ ಗೋವುಗಳು ತಲೆಯೆತ್ತದೇ, ಎಲ್ಲಿ ತಮ್ಮ ಕೊರಳೊ ಳಗಿನ ಗಂಟೆ ಶಬ್ಧದೊಂದಿಗೆ ತಲೆ ಯಾಡಿಸಿದರೆ, ಶ್ರೀಕೃಷ್ಣನ ಸುಮಧುರ ವೇಣುಗಾನಕ್ಕೆ ತಮ್ಮ ಕೊರಳೊಳಗಿನ ಗಂಟೆ ಶಬ್ದ ಶ್ರೀಕೃಷ್ಣನ ವೇಣು ಗಾನ ಕದಡಿಸಿ, ತೊಂದರೆ ಯಾಗುವುದೇನೋ ಎಂದು ತಿಳಿದು, ತಲೆ ತಗ್ಗಿಸಿ ಶ್ರೀಕೃಷ್ಣನ ವೇಣುಗಾನ ಆಲಿಸುತ್ತಾ, ಹುಲ್ಲನ್ನು ಮೇಯುತ್ತಿದ್ದವು ಎಂದು ಶೃಂಗಾರ ಭರಿತವಾಗಿ, ಚಮತ್ಕಾರದಿಂದ ಶ್ರೀ ವಾದಿರಾಜರು ವರ್ಣಿಸಿರುವುದು ಅವರ ದೈವಿಕ ಶೃಂಗಾರದ ಕೃತಿ " ಶ್ರೀ ರುಕ್ಮೀಣೀಶ ವಿಜಯ" ಕಾವ್ಯದಲ್ಲಿ ಕಾಣಬಹುದು.

ತಿರುಪತಿಯ ಶ್ರೀವೆಂಕಟೇಶ್ವರನನ್ನು ಅತಿ ಹೆಚ್ಚು 11 ಶ್ಲೋಕಗಳಿಂದ ತೀರ್ಥ ಪ್ರಬಂಧ ಖಂಡಕಾವ್ಯದಲ್ಲಿ ವರ್ಣನೆ ಶ್ರೀವಾದಿರಾಜರು ಮಾಡಿದ್ದಾರೆ.

ಶ್ರೀವೆಂಕಟಲಸಚ್ಛೈಲವಾಸೀ ಕೃತಾಮರ. ಛಾಯಾಯಾ ಪಾತು ಮಾಂ ನಿತ್ಯಂ ಶ್ರೀನಿವಾಸಸುರದ್ರುಮ. (ತೀರ್ಥ ಪ್ರಬಂಧ ಪೂರ್ವ ಪ್ರಬಂಧ 19 ನೇ ಶ್ಲೋಕ) ದೇವತೆಗಳಿಗೆ ಪ್ರಿಯನಾದ ಶ್ರೀವೆಂಕಟೇಶನು, ಭಕ್ತರ ಇಷ್ಟಾರ್ಥಗಳನ್ನು ಪೂರೈಸುವನು. ಭಕ್ತರು ವೆಂಕಟೇಶನ ಅನುಗ್ರಹದಿಂದ ಲಕ್ಷ್ಮೀ ಕಟಾಕ್ಷಕ್ಕೆ ಪಾತ್ರರಾಗಿ ಧನ್ಯರಾಗುವರು ಎಂದು ವರ್ಣಿಸಿದ್ದಾರೆ. ದಕ್ಷಿಣ ಪ್ರಬಂಧದಲ್ಲಿ ಶ್ರೀ ವಾದಿರಾಜರು ತಿರುವನಂತಪುರದ ಅನಂತಶಯನ ಏಕೆ ಮಲಗಿದ್ದಾನೆಂದು ವರ್ಣಿಸುತ್ತಾರೆ. ಹದಿನಾಲ್ಕು ಲೋಕದ ಒಡೆಯನಾದ ಶ್ರೀಹರಿಯ ನಾಭಿಯಿಂದ ಹುಟ್ಟಿದ ಕಮಲದಲ್ಲಿ ಆಸೀನವಾಗಿರುವ ಬ್ರಹ್ಮ ದೇವರಿಗೆ ಎಲ್ಲಿ ತಾನು ಅಲ್ಲಾಡಿದರೆ. ಲೋಕಾತ್ಮಕವಾದ ಕಮಲವೂ ಅಲ್ಲಾಡುವುದೋ ಎಂದು ಅಥವಾ ನೀನು ಶೇಷನ ಶರೀರದಲ್ಲಿ ಸುಮನೆ ಮಲಗಿದ್ದಿಯಾ ಅಥವಾ ಮಗನಾದ ಬ್ರಹ್ಮನ ಮೇಲಿನ ವಾತ್ಸಲ್ಯದಿಂದ ಎಲ್ಲಿಯೂ ಹೋಗದೆ, ಮಲಗಿದ್ದೀಯಾ ಎಂದು ಶ್ರೀವಾದಿರಾಜರು ಅತ್ಯಂತ ಶೃಂಗಾರ ಭರಿತ ಶ್ಲೋಕ ರಚಿಸಿ, ಹೋಲಿಕೆಯ ವರ್ಣನೆ ಮಾಡಿದ್ದಾರೆ.!! ಸರಸ ಭಾರತೀ ವಿಲಾಸ, ವೈಕುಂಠ ವರ್ಣನೆ ರುಕ್ಮಿಣೀಶ ವಿಜಯ, ತೀರ್ಥ ಪ್ರಬಂಧ ಮುಂತಾದ ಕೃತಿಗಳಲ್ಲಿ ಅನೇಕ ಯುಕ್ತಿ, ಶೃಂಗಾರ ಜಾಣ್ಮೆ, ಉಪಮೆ, ಹೋಲಿಕೆ, ವರ್ಣನೆ, ರೂಪಕಗಳನ್ನು ಬರೆದು , ಭಕ್ತರಿಗೆ ನೀಡಿದ್ದಾರೆ.

ಶ್ರೀವಾದಿರಾಜರು ಉಡುಪಿಯ ಶ್ರೀಕೃಷ್ಣನ ಚತುರ್ದಶ ಪೂಜೆಗಳ ಕೀರ್ತನೆಯನ್ನು ರಚಿಸಿ, ಅತ್ಯಂತ ಮನೋಹರವಾಗಿ ಶ್ರೀ ಕೃಷ್ಣನನ್ನು, ಶ್ರೀಮಧ್ವಾಚಾರ್ಯರನ್ನು, ಭಕ್ತಿಯಿಂದ ಕೊಂಡಾಡಿದ್ದಾರೆ.

ಹಡಗಿನಿಂದಲಿ ಬಂದು ಕಡಲಾಡಿಯಲಿ ನಿಂದು
ಬಿಡದೆ ಯತಿಗಳ ಕಯ್ಯ ಬಿಂಕದಿ ಪೂಜೆಗೊಂಬ
ಆದಿ ಕೃಷ್ಣನ ಆಹ್ನಿಕವ.ಆದರದಲಿ ಓದಿ, ವಿನೋದದಲಿ
ಪಠಿಪ ಜನರಿಗೆ ಆದಿವ್ಯಾಧಿಗಳಟ್ಟಿ, ಬಹುಭಾಗ್ಯಗಳ ಕೊಡುವ
ಮಾಧವನ ಕೃಪೆಯಿಂದಲಿ ವಾದಿರಾಜರಿಗೊಲಿದು ವಚನ
ಶುಧ್ಧೋಕ್ತದಲಿ ಹೇಳುವ ಜನರಿಗೆ, ಬರುವ ದುರಿತಗಳ ಕಳೆದು
ಮೇಲಾಗಿ ರಕ್ಷಿಸಿಕೊಂಬ ಹಯವದನ ಉತ್ಸವದಾಹ್ನಿಕವಾ॥

ಅತ್ಯಂತ ಸುಂದರ ಕಾವ್ಯಗಳನ್ನು ಸಂಸ್ಕೃತ, ಕನ್ನಡ, ತುಳು ಮುಂತಾದ ಭಾಷೆಗಳಲ್ಲಿ ಬರೆದ ಶ್ರೀವಾದಿರಾಜರ ಪರಮ ಭಕ್ತರಾಗಿದ್ದ ವಿಜಯನಗರ ಸಾಮ್ರಾಜ್ಯದ ಚಕ್ರವರ್ತಿ ಶ್ರೀಕೃಷ್ಣದೇವರಾಯನ ಕಾಲದಲ್ಲಿದ್ದ "ರಾಯಸಂ ವೆಂಕಟಾದ್ರಿ"(ಕಾರ್ಯದರ್ಶಿ,ಅಧಿಕಾರಿ) "ಸ್ಮೃತಿ ಕೌಸ್ತುಭ" ಎಂಬ ಧರ್ಮ ಶಾಸ್ತ್ರದ ಬೃಹತ್ ಗ್ರಂಥರಚಿಸಿ ಆದಿಯಲ್ಲಿ ಶ್ರೀವಾದಿರಾಜರ ಸ್ತೋತ್ರವನ್ನು ಗದ್ಯ, ಪದ್ಯಾತ್ಮಕಗಳಿಂದ ಬಹು ಸುಂದರವಾಗಿ ಭಕ್ತಿಯಿಂದ ಸ್ತೋತ್ರ ಮಾಡಿದ್ದಾರೆ.

ಮುನಿ ಶ್ರೇಷ್ಠರಾದ ಭಾವಿ ಸಮೀರರಾದ, ಶ್ರೀವಾದಿರಾಜ ಗುರು ಸಾರ್ವಭೌಮರು, ಅಸದೃಶವಾದ, ಸರ್ವ ವಿಧವಾದ ವಾಕ್ಪಟುತ್ವ ನಮಗೆ ಕರುಣಿಸಲಿ ಎಂಬ ಭಾವಾರ್ಥ ಚಿಂತನೆ, ಆಧ್ಯಾತ್ಮ ಜಿಜ್ಞಾಸುಗಳಿಗೆ ಶ್ರೀವಾದಿರಾಜರ ಸ್ಮರಣೆ ನಿತ್ಯ ಮಾಡಲು, ಪಠಿಸಲು, ಅರ್ಥಚಿಂತನೆ ಮಾಡಲು, ಅವರಲ್ಲಿ ಭಕ್ತಿ ಮೂಡಲು, "ಶ್ರೀಹಯವದನ ದೇವರಲ್ಲಿ ಪ್ರಾರ್ಥಿಸೋಣ.

ಶ್ರೀ ಕೃಷ್ಣಾರ್ಪಣಮಸ್ತು.




# ಸಿಂಹ ವಾಹನೋತ್ಸವ

**ಇನ್ನು ಸಿಂಹವಾಹನ ಕಾಡಿನ ಪ್ರಾಣಿಗಳಿಗೆಲ್ಲ ಸಿಂಹವೇ ರಾಜ. ಸಿಂಹದ ವಿಶೇಷತೆ ಅದು ಬೇರೆಯವರ ಆಹಾರ ಬೇರೆ ಪ್ರಾಣಿಗಳು ಮಾಡಿದ ಬೇಟೆಯನ್ನು ಸ್ವೀಕರಿಸುವುದಿಲ್ಲ. ಭಕ್ತನಲ್ಲೂ ಕೂಡ ತನ್ನ ಕೆಲಸವನ್ನು ತಾನೇ ಮಾಡಿಕೊಳ್ಳುವ ಸ್ವಾಭಿಮಾನವು ಭಗವಂತನಿಗೆ ಬಹಳ ಹಿಡಿಸುತ್ತದೆ. ಭಕ್ತಿಯಲ್ಲಿ ಮತ್ತೊಬ್ಬರ ಕರ್ಮ ನಮಗೆ ಸದ್ಗತಿಯನ್ನು ಕೊಡದು ತಾನು ಪಡೆಯಲು ಬಯಸುವುದನ್ನು ತಾನೇ ಶ್ರಮವಹಿಸಿ ಪಡೆಯಬೇಕೆಂಬ ಈ ಸಿಂಹವು ಭಕ್ತನಾಗಿ ಭಗವಂತನ ಸೇವೆ ಮಾಡಲು ಸದಾ ಸಿದ್ಧ ಎಂದು ತೋರಿಸುತ್ತದೆ. ಒಂದು ಸಮುದಾಯಕ್ಕೆ ರಾಜನಾದರೂ ಕೂಡ ಭಗವಂತನ ಎದುರು ಸೇವಕನೇ ಏಕೆಂದರೆ ಪರಮಾತ್ಮನೇ ಪ್ರಪಂಚದ ರಾಜ ಎಂಬುದನ್ನು ಸಿಂಹ ತೋರಿಸುತ್ತದೆ.**

## ಪುಸ್ತಕ ಪರಿಚಯ




# "ಸಿರಿಕಾಂತ ವಿಠಲ" ರ "ಶ್ರೀ ವಿಷ್ಣು ಸಹಸ್ರ ನಾಮ ಮಹಾಕಾವ್ಯ"

### ಒಂದು ಕಿರುಪರಿಚಯ

**ಕೃತಿಯ ಹೆಸರು :** ಶ್ರೀ ವಿಷ್ಣುಸಹಸ್ರನಾಮ ಮಹಾಕಾವ್ಯ

**ಲೇಖಕರ ಹೆಸರು :** ಡಾ|| ಬ.ಲ. ಸುರೇಶ್

**ಪ್ರಕಾಶಕರು :** ಸಿರಿಕಾಂತವಿಠಲ ಪ್ರತಿಷ್ಠಾನ, ಬೆಂಗಳೂರು

**ಪುಟಗಳು :** 1080

**ಮುಖಬೆಲೆ :** 750/-

**ಪ್ರತಿಗಳಿಗಾಗಿ ಸಂಪರ್ಕಿಸಿ :** 94804 90615

ಕಲಿಯುಗದ ತಪಸ್ಸು ಎಂದರೆ ವಿಷ್ಣು ಸಹಸ್ರನಾಮದ ಪಾರಾಯಣ. ಕುರುಕ್ಷೇತ್ರ ಯುದ್ಧದಲ್ಲಿ ವಿಶ್ವದಲ್ಲಿನ 12 ಮಹಾಜ್ಞಾನಿಗಳಲ್ಲಿ ಒಬ್ಬರೆನಿಸಿರುವ ಶರಮಂಚವೇರಿದ್ದ ಭೀಷ್ಮಾಚಾರ್ಯರು ಕುರುಕ್ಷೇತ್ರ ಮಹಾಯುದ್ಧದ ಘನಘೋರ ದುರಂತಗಳನ್ನು ಕಣ್ಣಾರೆ ಕಂಡು ಪಾಪಪ್ರಜ್ಞೆಯಿಂದ ತೊಳಲಾಡುತ್ತಿದ್ದ ಯುಧಿಷ್ಠರರಿಗೆ ಹೇಳಿದ ಶ್ರೀವಿಷ್ಣು ಸಹಸ್ರನಾಮ ಭಗವಂತನ ಸಾವಿರ ನಾಮ ಕಲಿಯುಗದಲ್ಲಿ ಮಾನವ ಕಲೋದ್ಧಾರಕ್ಕಾಗಿ ದ್ವಾಪರದಲ್ಲೇ ಭಗವಂತ ನೀಡಿದ ಮಹಾಸ್ತೋತ್ರ. ಈ ವಿಷ್ಣು ಸಹಸ್ರನಾಮ, ಶ್ರೀವ್ಯಾಸ ಮಹಾಮುನಿಗಳು ಆತ್ಮೋದ್ಧಾರಕ್ಕಾಗಿ ಇದರಲ್ಲಿ 107 ಶ್ಲೋಕಗಳನ್ನು ಬರೆಸಿದರು. ಕೋಟ್ಯಾನುಕೋಟಿ ಮನೆ ಮನಗಳಲ್ಲಿ ಮತ್ತೆ ಶ್ರೀ ಗುರುರಾಯರನ್ನು ಅವತರಿಸುವಂತೆ ಮಾಡಿದ "ಶ್ರೀಗುರು ರಾಘವೇಂದ್ರ ವೈಭವ" ಧಾರಾವಾಹಿಯ ದಿಗ್ದರ್ಶಕರಾದ "ಸಿರಿಕಾಂತ ವಿಠಲ" ಕಾವ್ಯ ನಾಮಾಂಕಿತ ಡಾ||ಬ.ಲ. ಸುರೇಶ್‌ರವರು "ಪಾರ್ಥಸಾರಥಿ ವಿಠಲದಾಸ" ಅಂಕಿತದಡಿ ಹೆಸರಾದ. ವಿಷ್ಣು ಸಹಸ್ರನಾಮವನ್ನು ವಿಶ್ವ ಸಹಸ್ರನಾಮವನ್ನಾಗಿ ಸುವತ್ತ ಧಾಪುಗಾಲು ಹಾಕುತ್ತಿರುವ ಡಾ|| ಅರಳು ಮಲ್ಲಿಗೆ ಪಾರ್ಥಸಾರಥಿ ರವರ ಪ್ರೇರಣೆ, ಆಶೀರ್ವಾದದ ಫಲವಾಗಿ ವಿಷ್ಣು ಸಹಸ್ರನಾಮದಲ್ಲಿನ ಭಗವಾನ್ ವಿಷ್ಣುವಿನ ಒಂದೊಂದು ನಾಮಕ್ಕೂ ಒಂದೊಂದು ಕೀರ್ತನೆಗಳನ್ನು ರಚಿಸಿ ರಾಗ ಸಂಯೋಜಿಸಿ ಖ್ಯಾತ ಗಾಯಕರ ಸುಮಧುರ ಕಂಠಸಿರಿಯಲ್ಲಿ ಹೊರಹೊಮ್ಮಿದ್ದ ಕೀರ್ತನೆಗಳು ಒಂದು ಸಾವಿರವಾದ ನಂತರ ಗುರು ಹಿರಿಯರ ಅಣತಿಯಂತೆ ಒಂದು ಸಾವಿರ ಕೀರ್ತನೆಯುಳ್ಳ 1080 ಪುಟಗಳ ಶ್ರೀ ವಿಷ್ಣು ಸಹಸ್ರನಾಮ ಕೀರ್ತನೆ ಮಹಾಕಾವ್ಯವಾಗಿ ಲೋಕಾರ್ಪಣೆ ಗೊಂಡಿತು.

ವಿಷ್ಣು ಸಹಸ್ರನಾಮದ ಒಂದೊಂದು ನಾಮಗಳನ್ನು ಬಣ್ಣಿಸಿ ವರ್ಣಿಸುವ ಒಂದು ನೂರು ಕೀರ್ತನೆಗಳಾಗುತ್ತಿದ್ದಂತೆ ಭಗವಾನ್ ವಿಷ್ಣುವಿನ ದಶಾವತಾರದ ಚಿತ್ರಗಳು, ವಿಶ್ವರೂಪದರ್ಶನ, ನಾಟ್ಯ ಗಣಪ, ಮಹಾಲಕ್ಷ್ಮೀ ಮೊದಲಾದ ದೇವಾನುದೇವತೆಗಳ ರೇಖಾ ಚಿತ್ರಗಳ ಅಲಂಕಾರ ಈ ಮಹಾಕಾವ್ಯದ ಶ್ರೇಷ್ಠತೆ ಮತ್ತಷ್ಟು ಉತ್ತುಂಗಕ್ಕೇರುವಲ್ಲಿ ಸಹಕಾರಿಯಾಗಿದೆ. ಈ ಮೂಲಕ ಸಾಮಾನ್ಯ ಓದುಗರಿಗೂ, ಎಲ್ಲಾ ಆಸ್ತಿಕ ಮನೆ ಮನಗಳಿಗೂ ತಲುಪುವಂತೆ ಮಾಡಿದ ಕೀರ್ತಿ ಡಾ||ಬ.ಲ. ಸುರೇಶ್ ರವರಿಗೆ ಸಲ್ಲುತ್ತದೆ.

ಇಂತಹ ಅತ್ಯಂತ ಸರಳ, ಸುಲಿದ ಬಾಳೆಯ ಹಣ್ಣಿನಂತೆ ಸುಲಲಿತವಾದ ಅರ್ಥಗರ್ಭಿತವಾದ ಅನಂತ ಆನಂದ ನೀಡುವ ಮಹಾ ಕಾವ್ಯ, ಪ್ರತಿಯೋರ್ವ ಆಸ್ತಿಕ ಮನೆ ಮನಗಳ ಗರ್ಭಗುಡಿಯಲ್ಲೂ ಪ್ರತಿಷ್ಠಾಪಿಸಲ್ಪಡುವಂತಹ ಶ್ರೇಷ್ಠ ಕೀರ್ತನೆ ಮಹಾಕಾವ್ಯವಿದಾಗಿ ಹೊರ ಹೊಮ್ಮಿದೆ. ಭಗವಾನ್ ವಿಷ್ಣುವಿನ ಪ್ರತಿ ನಾಮಗಳಲ್ಲೂ ಮಾಡಿರುವ ಅರ್ಥಾನುಸಂಧಾನ, ಕಾವ್ಯನಿರ್ಮಾಣ ಪ್ರಕ್ರಿಯೆ. ರಸಾನುಭೂತಿಗಳ ಅನುಭಾವದ ಅಲೌಕಿಕ ಅನುಭಾವದ ಸಿಂಚನ ಕಾಣಬಹುದಾಗಿದೆ. ಈ ಮಹಾಕಾವ್ಯವನ್ನು ವಿಶ್ವರೂಪದರ್ಶನ,ವಿಷ್ಣುವಿನ ದಶಾವತಾರ ಬಿಂಬಿಸುವ ಚಿತ್ರ ಕಲಾಕೃತಿಗಳೂ ಅಲಂಕರಿಸಿವೆ.

**ಕೃತಿಯ ಪರಿಚಯ: ವಿ.ಎಸ್. ಕುಮಾರ್**
**- 78923 46105**



# ಶ್ರೀ ಅನಂತಪದ್ಮನಾಭ ವ್ರತಾಚರಣೆ



-ಶ್ರೀಮತಿ. ಪಾರಿಜಾತ ಬಿ.ಎಸ್.
90083 35689

ನಾವು ಮಾಡುವ ಪ್ರತಿಯೊಂದು ಕಾರ್ಯಕ್ಕೂ ಒಂದು ಕಾರಣ ವಿರುತ್ತದೆ. ನಡೆಯುವ ಪ್ರತಿಯೊಂದು ಘಟನೆಗೂ ಒಂದು ಪ್ರೇರಣೆಯಿರುತ್ತದೆ. ಅದನ್ನು ನಂಬಿ ಒಪ್ಪಿ, ನಮ್ಮ ಹಿರಿಯರ ಮಾರ್ಗದರ್ಶನದಲ್ಲಿ ಬದುಕು ರೂಪಿಸಿ ಕೊಳ್ಳುವುದು ಪ್ರತಿಯೊಬ್ಬನ ಜಾಣ್ಮೆ. ಜ್ಞಾನ ಸಂಪಾದನೆ, ಊಟ ಉಪಚಾರ, ವಿಶ್ರಾಂತಿ, ಮನರಂಜನೆ, ಮಾತ್ರವೇ ಜೀವನದ ಭಾಗವಲ್ಲ. ಇವೆಲ್ಲವನ್ನು ಪಡೆ ಯುವುದರ ಜೊತೆಗೆ ಶಾಂತಿಯುತವಾದ ಸಾರ್ಥಕ ಬದುಕನ್ನು ಹೊಂದುವುದು ಬಹು ಮುಖ್ಯ. ಅದಕ್ಕೆಂದೆ ಕುಟುಂಬದ ಸದಸ್ಯರೊಡಗೂಡಿ ಬದುಕುವುದು. ಒಂಟಿಯಾಗಿ ಏನೇ ಹೊಂದಿದ್ದರು ಶಾಂತಿ ನೆಮ್ಮದಿಯೆಂಬುದು ಸಂಘಜೀವಿ ಯಾದಾಗ ಮಾತ್ರ. ಹತ್ತಾರು ವರ್ಷ ಪ್ರಶಾಂತ ವನಸಿರಿಯ ನಡುವೆ ಕುಳಿತು ತಪಗೈದ ತಪಸ್ವಿಯೂ ತಾನು ಪಡೆದ ಜ್ಞಾನವನ್ನು ಇತರರೊಂದಿಗೆ ಹಂಚಿ ಕೊಂಡಾಗಷ್ಟೇ ಸಾರ್ಥಕತೆ.

ಸಂಘ ಜೀವಿಯಾದ ಮನುಷ್ಯ ಕುಟುಂಬದ ಸದಸ್ಯರೊಡನೆ ಅನೇಕ ವಿಚಾರಗಳನ್ನು ಕಲಿಯುತ್ತಾನೆ, ಕಲಿಸುತ್ತಾನೆ, ಮುಂದಿನ ಪೀಳಿಗೆಗೆ ರವಾನಿಸುತ್ತಾನೆ. ಹೀಗೆ ನಮ್ಮ ಅನೇಕ ಆಚಾರ ವಿಚಾರಗಳು, ಸಂಸ್ಕೃತಿ ಸಂಪ್ರದಾಯಗಳು ಜೀವನದ ಎಳೆಯೊಂದಿಗೆ ಬೆಸೆದುಕೊಂಡಿವೆ. ಇದರಿಂದ ಜ್ಞಾನದ ಜೊತೆಗೆ ಮಾನಸಿಕ ನೆಮ್ಮದಿ, ಸೌಹಾರ್ದತೆಯೊಂದಿಗೆ ಶಾಂತ ಜೀವನ,ತಾನು ತನ್ನವರೆಂಬ ಭಾವೈಕ್ಯತೆ, ವೈವಿಧ್ಯತೆಯ ವಿನಿಮಯ ಇತ್ಯಾದಿಗಳಿಂದ ಮನುಷ್ಯನ ಬದುಕು ಮತ್ತಷ್ಟು ಸಾರ್ಥಕ.

ಇಂತಹ ಸೂತ್ರದ ಎಳೆಗಳಲ್ಲಿ ನಮ್ಮ ಹಬ್ಬಹರಿದಿನಗಳು ಸಂಪ್ರದಾಯಗಳು ಪ್ರಮುಖ ಪಾತ್ರವಹಿಸುತ್ತವೆ. ಪ್ರತೀ ಹಬ್ಬಗಳ ಆಚರಣೆಗೂ ಅದ ರದ್ದೇ ಆದ ವೈಶಿಷ್ಟತೆ, ಕಾರಣದ ವಿವರಣೆಯಿದೆ. ಭಾದ್ರಪದ ಮಾಸದ 14ನೇ ದಿನ ಅನಂತಪದ್ಮನಾಭ ವ್ರತವೆಂಬ ಆಚರಣೆ ಯನ್ನು ಬಹಳ ಶ್ರದ್ಧಾ ಭಕ್ತಿಯಿಂದ ನಡೆಸಲಾಗುತ್ತದೆ. ಭಗವಾನ್ ವಿಷ್ಣುವನ್ನು ವೃದ್ಧಾವತಾರದಲ್ಲಿ ಪೂಜಿಸುವ ಕ್ರಮವಿದೆ. ಅನಂತ ಎಂದರೆ ಅಂತ್ಯವಿಲ್ಲದ್ದು, ಕೊನೆಯಿಲ್ಲದ್ದು ಎಂಬ ಅರ್ಥವಿದೆ. ಪದ್ಮ ಎಂದರೆ ಕಮಲ ನಾಭಿ ಎಂದರೆ ಹೊಕ್ಕಳು. ಬ್ರಹ್ಮಾಂಡ ಸೃಷ್ಟಿಯ ಸಮಯದಲ್ಲಿ ಶ್ರೀ ವಿಷ್ಣುದೇವರ ಹೊಕ್ಕಳಲ್ಲಿ ಕಮಲ ಉತ್ಪತ್ತಿಯಾಗಿ ಅದರಲ್ಲಿ ಸೃಷ್ಟ ಕರ್ತ ಬಹ್ಮದೇವರು ಜನಿಸಿದರೆಂಬ ನಂಬಿಕೆ ತಿಳಿದ ವಿಷಯ. ಇಂತಹ ಭಗವಾನ್ ವಿಷ್ಣುವು ಜಗದ್ರಕ್ಷಕನಾಗಿ ಕಾರ್ಯ ನಿರ್ವಹಿಸುತ್ತಾ ಸುಸ್ತಾಗಿ ಶೇಷಶಯನನಾಗಿ ವಿಶ್ರಾಂತಿ ಪಡೆದನೆಂಬ ನಂಬಿಕೆಯು ಇದೆ.

## ಶ್ರೀ ಅನಂತ ಪದ್ಮನಾಭ ವ್ರತಾಚರಣೆಯ ಮಹತ್ವ

ಈ ವ್ರತವನ್ನು ತಮ್ಮ ಕುಟುಂಬದ ಶ್ರೇಯೋಭಿವೃದ್ಧಿಗೆ, ಸುಖ ಸಮೃದ್ಧಿಗೆ,ಕಳೆದುಕೊಂಡ ಧನಧಾನ್ಯ ಸಂಪತ್ತನ್ನು ಮರಳಿ ಪಡೆಯಲು ಸಂತಾನ ಪ್ರಾಪ್ತಿಗಾಗಿ ದಂಪತಿಗಳು ನಡೆಸುವ ವ್ರತಾಚರಣೆಯಾಗಿದೆ. ಮಾತೆ ಯಮುನೆ, ಶೇಷನಾಗ ಹಾಗೂ ವಿಷ್ಣುವನ್ನು ಈ ಆಚರಣೆಯಲ್ಲಿ ಪೂಜಿಸಲಾಗುತ್ತದೆ. ಭಾದ್ರಪದ ಮಾಸದ ಶುಕ್ಲಪಕ್ಷದ 14ನೇ ದಿನ ಈ ವ್ರತವನ್ನು ನಡೆಸಲಾಗುತ್ತದೆ. ಬಹಳಷ್ಟು ಜನರು 14 ವರ್ಷಗಳು ಈ ವ್ರತವನ್ನು ನಡೆಸಿ ಉಧ್ಯಾಪನೆ ಮಾಡುತ್ತಾರೆ. ಸಂಖ್ಯೆ 14 ಕ್ಕೆ ಈ ವ್ರತದಲ್ಲಿ ವಿಶೇಷ ಸ್ಥಾನವಿದೆ.

ಮಾನವ ದೇಹದಲ್ಲಿನ 7 ಚಕ್ರಗಳು ಹಾಗೂ ಬ್ರಹ್ಮಾಂಡದ 7 ಚಕ್ರಗಳನ್ನು ಮೀರಿ ಬ್ರಹ್ಮೈಕ್ಯ ಹೊಂದುವ ಮಾರ್ಗದಲ್ಲಿ 14ನೇ ದಿನದ ಪೂಜೆಯಾಗಿ 14 ವರ್ಷಗಳು ಆಚರಿಸಲಾಗುತ್ತದೆ. 14 ಪೂಜಾವಿಧಾನ, 14 ವಿಧಧ ಪುಷ್ಪಗಳು ಪತ್ರೆಗಳು 14 ಬಗೆಯ ಭಕ್ಷ್ಯಗಳ ನೈವೇದ್ಯಗಳ ಮೂಲಕ ಭಗವಂತನನ್ನು ಒಲಿಸಿಕೊಳ್ಳುವ ಪ್ರಯತ್ನವಾಗಿದೆ.

ದ್ವಾಪರಯುಗದಲ್ಲಿ 14 ವರ್ಷ ವನವಾಸ ಅನುಭವಿಸಿದ ಪಾಂಡವರು ಶೌನಕಾದಿ ಮುನಿಗಳಿಂದ ಈ ವ್ರತದ ಮಹತ್ವ ತಿಳಿದು ಶ್ರೀಕೃಷ್ಣನ ಪ್ರೇರಣೆಯಂತೆ ಶ್ರೀಅನಂತ ಪದ್ಮನಾಭನ ವ್ರತ ಕೈಗೊಂಡು, ಕಳೆದುಕೊಂಡಿದ್ದ ರಾಜ್ಯವನ್ನು ಮತ್ತೆ ಪಡೆದರು ಎಂದು ಹೇಳಲಾಗುತ್ತದೆ.

ಹಿಂದೆ ಒಮ್ಮೆ ಕೌಂಡಿಲ್ಯ ಮುನಿಗಳು ತಮ್ಮ ಪತ್ನಿ ಸಹಿತರಾಗಿ ಪ್ರವಾಸ ಕೈಗೊಂಡಿರುವಾಗ ಮಾರ್ಗ ಮಧ್ಯೆ ಕೆಲವು ಹೆಂಗಳೆಯರು




ಕೈಗೊಂಡಿದ್ದ ಪೂಜೆಯನ್ನು ಕಂಡು ಮಹರ್ಷಿ ಪತ್ನಿ ಅದು ಯಾವ ವ್ರತವೆಂದು ಕೇಳಿ ಅದರ ಮಹತ್ವವನ್ನು ತಿಳಿದರು. ತಾನು ಆ ವ್ರತ ವನ್ನು ಆಚರಿಸಲು ಸಂಕಲ್ಪ ಮಾಡಿ ವ್ರತ ಕೈಗೊಂಡರು. ಅದರಿಂದ ಧನ ಕನಕ, ಸಂಪತ್ತನ್ನು ಪಡೆದು ಸುಖಸಮೃದ್ಧಿಯನ್ನು ಕಂಡರಂತೆ. ಹೀಗಿರು ವಾಗ ಒಮ್ಮೆ ಮುನಿಯು ತಮ್ಮ ಈ ಸುಖಶಾಂತಿ ಸಮೃದ್ಧಿಗೆ ಕಾರಣ ವೇನೆಂದು ಪತ್ನಿಯೊಡನೆ ವಿಮರ್ಶಿಸಲು ಆಕೆಯು ತಾನು ಕೈಗೊಂಡ ವ್ರತದ ಬಗ್ಗೆ ತಿಳಿಸಿದರಂತೆ. ಆದರೆ ಆದನ್ನೊಪ್ಪದೇ ತಾನು ಗಳಿಸಿದ ಸಂಪತ್ತಿದು ಎಂದು ಮುನಿಯು ಅಹಂಕಾರ ಪಡಲು ಕಾಲಕ್ರಮೇಣ ಅವರಲ್ಲಿದ್ದ ಸಂಪತ್ತು ಕ್ಷೀಣಿಸಿತ್ತಂತೆ. ತಮ್ಮ ತಪ್ಪಿನ ಅರಿವಾಗಿ ಮತ್ತೆ ಶ್ರೀಅನಂತ ಪದ್ಮನಾಭನ ವ್ರತಾಚರಣೆ ಮೂಲಕ ಯಶಸ್ಸನ್ನು ಪಡೆದರೆಂಬ ಕಥೆಯೊಂದು ವ್ರತಾಚರಣೆಯ ಮಹತ್ವ ಸಾರಿದೆ.

### ಶ್ರೀ ಅನಂತನ ವ್ರತಾಚರಣೆ

ಸಾಮಾನ್ಯವಾಗಿ ಈ ವ್ರತವನ್ನು ದಂಪತಿಗಳು ಆಚರಿಸುವ ಪದ್ಧತಿಯಿದೆ. ವಿಶೇಷ ಸಂದರ್ಭಗಳಲ್ಲಿ ಒಬ್ಬ ವ್ಯಕ್ತಿ ಪೂಜಾಕಾರ್ಯ ನಡೆಸುವ ಅವಕಾಶವಿದೆ. 14 ಮೃದುವಾದ ಸಿಹಿಯಾದ ಭಕ್ಷ್ಯಗಳ ನೈವೇದ್ಯ. 14 ಬಗೆಯ ಹೂಪತ್ರೆಗಳು 14 ಗಂಟಿನ ದಾರ ಧಾರಣೆ, 14 ವಿಧದ ಪೂಜಾ ವಿಧಾನ ಇತ್ಯಾದಿಗಳಿಂದ 14 ವರ್ಷಗಳ ಮಹತ್ವದಲ್ಲಿ ಶ್ರೀಅನಂತ ಪದ್ಮ ನಾಭನ ಪೂಜೆ ನಡೆಸಲಾಗುತ್ತದೆ.

### ಯಮುನೆಯ ಪೂಜೆ

ಈ ದಿನ ಮನೆಯನ್ನು ತಳಿರುತೋರಣ ವಿವಿಧ ಪುಷ್ಪಗಳಿಂದ ಅಲಂಕರಿಸಿ, ರಂಗೋಲಿ ಬರೆದು ಮಂಟಪ ರಚಿಸಲಾಗುತ್ತದೆ. ಈ ವ್ರತದಲ್ಲಿ ಮೊದಲಿಗೆ ಯಮುನೆಯನ್ನು ಪೂಜಿಸಲು ಬಾವಿ, ಕೆರೆಕಟ್ಟೆಗಳಿಂದ ಅಥವಾ ಯಾವುದೇ ಶುದ್ಧವಾದ ಸ್ಥಳದಿಂದ ಜಲವನ್ನು ತಂದು ಕಲಶ ಸ್ಥಾಪಿಸಿ ಮಾವಿನ ಎಲೆಯನ್ನಿಡಲಾಗುತ್ತದೆ. ಹರಿದ್ರಾಕುಂಕುಮ ಗಂಧಾಕ್ಷತೆ ಯೊಂದಿಗೆ, ಧೂಪದೀಪಗಳಿಂದ ಪೂಜಿಸಲಾಗುತ್ತದೆ.

### ಶೇಷನಾಗ ಪೂಜೆ

ಶೇಷಶಯನ ಶ್ರೀವಿಷ್ಣುವನ್ನು ಅನಂತನಾಗಿ ಪೂಜಿಸುವಾಗ ಶೇಷನಾಗನ ಪೂಜೆ ವಿಶೇಷವೆನಿಸಿದೆ. ದರ್ಭೆಯಲ್ಲಿ 7 ಹೆಡೆಯ ನಾಗನನ್ನು ರಚಿಸುತ್ತಾರೆ. ಈ ನಾಗದೇವರನ್ನು ಅಕ್ಕಿ ಹರಡಿದ ತಟ್ಟೆ ಅಥವಾ ಬಟ್ಟಲಿನಲ್ಲಿ ಸ್ಥಾಪಿಸಿ, ಗಂಧಾಕ್ಷತೆಯಿಂದ ವಿಶೇಷವಾಗಿ ಪೂಜಿಸಲಾಗುತ್ತದೆ.

### ದಾರ ಪೂಜೆ

ಅನಂತನ ವ್ರತದಲ್ಲಿ ಕೆಂಪು ಬಣ್ಣದ ಅನಂತನ ದಾರದ ಪೂಜೆಗೆ ವಿಶೇಷ ಮಹತ್ವವಿದೆ. 14 ಗಂಟುಗಳನ್ನು ಹಾಕಿದ ಕೆಂಪು ದಾರವನ್ನು ಅಕ್ಕಿ ಹರಡಿದ ಬಟ್ಟಲು ಅಥವಾ ತಟ್ಟೆಯಲ್ಲಿಟ್ಟು, ಹರಿದ್ರಾಕುಂಕುಮದಿಂದ ಪೂಜಿಸಲಾಗುತ್ತದೆ. ಈ ವ್ರತಾಚರಣೆ ಮಾಡುವ ದಂಪತಿಗಳು ಗಂಡಸರು ಬಲ ತೋಳಿಗೆ ಹಾಗೂ ಹೆಂಗಸರು ಕುತ್ತಿಗೆಯ ಮಾಲೆಯಾಗಿ ಧರಿಸುತ್ತಾರೆ.

### ಅನಂತನ ಪೂಜೆ

ಈ ವ್ರತವನ್ನು ಆಚರಿಸುವವರು ಉಪವಾಸ ಆಚರಿಸಿ, ಪರಿಶುದ್ಧರಾಗಿ, ಶ್ರದ್ಧೆ ಭಕ್ತಿಗಳಿಂದ ಪೂಜೆಯಲ್ಲಿ ಭಾಗವಹಿಸುತ್ತಾರೆ. ಶುದ್ಧವಾದ ಸ್ಥಳದಲ್ಲಿ ಪೀಠ ಸ್ಥಾಪಿಸಿ ತುಂಡಾಗದ ಅಕ್ಕಿಯನ್ನು ತಟ್ಟೆಯಲ್ಲಿ ಹರಡಿ ಕಲಶ ಸ್ಥಾಪಿಸುತ್ತಾರೆ. ವಸ್ತ್ರ, ಹೂಗಳಿಂದ ಅಲಂಕರಿಸಲಾಗುತ್ತದೆ. ಪೀಠ ಪೂಜೆ, ಅಂಗಪೂಜೆ, ಪುಷ್ಪ ಅರ್ಚನೆ, ದಾರ ಧಾರಣೆ ನಡೆಸಲಾಗುತ್ತದೆ. ಅಭಿಷೇಕ, ಧೂಪಾರತಿ, ದೀಪಾರತಿಯಿಂದ ಆರಾಧಿಸಲಾಗುತ್ತದೆ. ಕೆಂಪು ಅಕ್ಷತೆ, ಕೆಂಪು ಹೂ, ಕೆಂಪು ದಾರ, ಗೆಜ್ಜೆ ವಸ್ತ್ರ ಪೂಜೆಯಲ್ಲಿ ವಿಶೇಷವಾಗಿ ಬಳಸಲಾಗುತ್ತದೆ. ಮೃದುವಾದ ಸಿಹಿಯಾದ 14 ಭಕ್ಷ್ಯಗಳನ್ನು ನೈವೇದ್ಯ ಮಾಡುತ್ತಾರೆ. ದಂಪತಿಯರಿಗೆ ತಾಂಬೂಲ, ಅನಂತನ ದಾರ ನೀಡಿ, ಆಶೀರ್ವಾದ ಪಡೆಯುತ್ತಾರೆ.

# ಮಹಾಮಹಿಮ ಜಗನ್ನಾಥದಾಸರು



– ಡಾ|| ಆರ್. ವಾದಿರಾಜು.
97317 33245

ಕನ್ನಡ ನಾಡಿನ ಪ್ರಮುಖ ಹರಿದಾಸರಲ್ಲಿ ಒಬ್ಬರಾದ ಜಗನ್ನಾಥ ದಾಸರು ಆಧ್ಯಾತ್ಮಿಕ ಸಾಹಿತ್ಯವನ್ನು ಶ್ರೀಮಂತಗೊಳಿಸಿದವರು. ಜಗನ್ನಾಥ ದಾಸರನ್ನು ಅವರಿಗಿದ್ದ ಅಪರೋಕ್ಷ ಜ್ಞಾನದಿಂದ ರಂಗನೊಲಿದ ದಾಸ ಎಂದೂ ರಂಗೋಲಿ ಹಾಕುವ ಕಲೆ ಪರಿಣತಿಯಿದ್ದುದರಿಂದ ರಂಗೋಲಿ ದಾಸ ಎಂದು ಕರೆಯಲಾಗುತ್ತಿತ್ತು.

ರಾಯಚೂರ ಜಿಲ್ಲೆ ಮಾನ್ವಿ ತಾಲ್ಲೂಕು ಬ್ಯಾಗವಾಟದಲ್ಲಿ ನರಸಿಂಹಚಾರ್ಯರು ಲಕ್ಷ್ಮೀಬಾಯಿ ದಂಪತಿಗಳಿಗೆ ಕ್ರಿ.ಶ. 1727 ಶಾಲಿವಾಹನ ಶಕೆ ಕೀಲಕ ಸಂವತ್ಸರ ಶ್ರಾವಣ ಶುದ್ಧ ಬಿದಿಗೆಯಂದು ಪುತ್ರ ರತ್ನ ಜನ್ಮವಾಗುತ್ತದೆ. ಆ ಮಗುವಿಗೆ ಶ್ರೀನಿವಾಸನೆಂದು ನಾಮಕರಣ ಮಾಡುತ್ತಾರೆ. ಆ ಬಾಲಕನೆ ಮುಂದೆ ಜಗನ್ನಾಥದಾಸರಾಗಿ ಸರ್ವಮಾನ್ಯ ರಾಗುತ್ತಾರೆ. ಕನ್ನಡ ಸಂಸ್ಕೃತ ಉಭಯ ಭಾಷಾ ವಿಶಾರದನಾಗಿ ಬೆಳೆದ ಸೀನಪ್ಪ ಎರಡೂ ಭಾಷೆಗಳಲ್ಲಿ ಆಶುಕವಿತ್ವ ಪ್ರತಿಭೆಯನ್ನು ಹೊಂದಿ ರುತ್ತಾರೆ.

ಶ್ರೀ ರಾಘವೇಂದ್ರ ಸ್ವಾಮಿಗಳ ಮಠದ ಪರಂಪರೆಯಲ್ಲಿ ಬಂದ ಶ್ರೀ ವರದೇಂದ್ರ ತೀರ್ಥರ ಬಗ್ಗೆ ಅವರ ಸನ್ನಿಧಿ ಯಲ್ಲಿ ಶ್ಲೋಕಗಳನ್ನು ರಚಿಸಿ ಅರ್ಪಿಸಿದರು. ವರದೇಂದ್ರರ ಬಗ್ಗೆ, ರಾಯರ ಬಗ್ಗೆ, ರಾಮಚಂದ್ರರ ದೇವರ ಬಗ್ಗೆ ಮೂಲ ರಾಮ ದೇವರು ದೊರೆತ ಬಗ್ಗೆ ಹೇಳುತ್ತಾ ಕೊನೆ ಶ್ಲೋಕದಲ್ಲಿ ತಮ್ಮ ವಿದ್ಯಭಿ ಲಾಷೆಯನ್ನು ತೋಡಿಕೊಳ್ಳುತ್ತಾರೆ. ಅಂದಿನಿಂದಲೇ ಮಂತ್ರಾಲಯ ಮಠ ದಲ್ಲಿ ತತ್ವ ಪ್ರಕಾಶಿಕಾ ಪಾಠ ಆರಂಭಿಸುತ್ತಾರೆ. ವ್ಯಾಸತ್ರಯ, ನ್ಯಾಯ ಸುಧೆ ಗಳಲ್ಲಿ ದಾಸರು ಪಾರಂಗತರಾಗುತ್ತಾರೆ. ಶ್ರೀನಿವಾಸ ಹೀಗೆ ಪಾಂಡಿತ್ಯದಲ್ಲಿ ಪ್ರಾಬಲ್ಯ ಪಡೆಯುತ್ತಾ ಸಾಗುತ್ತಾರೆ. ವಿವಾಹ ನಂತರ ಗುರು ಆಜ್ಞೆಯಂತೆ ಪಾಠ ಪ್ರವಚನ ಮಾಡುತ್ತ ಮಾನವಿಯಲ್ಲಿ ನೆಲೆಸು ತ್ತಾರೆ.

ಮುಂದೆ ತಾವು ಹರಿದಾಸರಾಗುವ ಬಯಕೆ ಹೊಂದಿ ಗುರುಗಳ ಆದೇಶದಂತೆ ಪಂಡರಾಪುರಕ್ಕೆ ಪ್ರಯಾಣ ಮಾಡಿ ಅಲ್ಲಿ ಚಂದ್ರಭಾಗ ನದಿ ಯಲ್ಲಿ ಮೀಯುವಾಗ ಜಗನ್ನಾಥವಿಠಲ ಎಂಬ ಅಂಕಿತ ಪ್ರಾಪ್ತಿಯಾಯಿತು. ಅಂದಿನಿಂದ ಜಗನ್ನಾಥದಾಸರು ಎಂದೇ ಖ್ಯಾತಿಯಾದರು. ಮುಂದಿನ ಜೀವನವೆಲ್ಲ ಪಾಠ-ಪ್ರವಚನ ಕೃತಿ ರಚನೆ ತೀರ್ಥ ಯಾತ್ರೆ ಆರ್ತ ಜನರ ಉದ್ಧಾರದ ಮೂಲಕ ತತ್ವ ಪ್ರಸಾರಕ್ಕೆ ಜೀವನವನ್ನು ಮುಡಿಪಾಗಿಟ್ಟರು.

ಶಾಸ್ತ್ರ-ಪಾಂಡಿತ್ಯ-ಕೀರ್ತನ ವೈಖರಿಗಳಿಂದ ಜಗನ್ನಾಥದಾಸರ ಕೀರ್ತಿ ಹೆಚ್ಚುತ್ತಾ ಹೋಗುತ್ತದೆ. ಪುತ್ರನ ಅಗಲಿಕೆ ಮಗಳ ವೈಧವ್ಯ ಇವರ ಬಾಳಲ್ಲಿ ಬಂದೆರಗುತ್ತದೆ. ಮಗಳ ಮನಶಾಂತಿಗಾಗಿ ತತ್ವಸುವ್ವಾಲಿ ಎಂಬ 600 ನುಡಿಗಳ ಕೃತಿಯನ್ನು ರಚಿಸುತ್ತಾರೆ. ಅದರ ಪ್ರಭಾವದಿಂದ ಆಕೆ ಮಹಾಜ್ಞಾನಿಯಾಗುತ್ತಾಳೆ. ತಂತ್ರಸಾರ ಎಂಬ ಕೃತಿಯೊಂದನ್ನು ದಾಸರು ರಚಿಸಿದ್ದು, ಅದು ಪಾಹಿ ಪಂಕೇರು ಹೇಕ್ಷಣ ಸರ್ವರಾಮೆದ ಪಾಹಿ ಪದಾಲಯನಿಕೇತನ ಸದಾ ಪಾಹಿ ಪಾಹಿ ಎಂದು ಆರಂಭವಾಗುತ್ತದೆ. ಮುಂದೆ ದಾಸ ಸಾಹಿತ್ಯದ ಮೇರು ಕೃತಿಗಳಲ್ಲಿ ಒಂದೆನಿಸಿದ ಹರಿಕಥಾಮೃತ ಸಾರವನ್ನು ತಮ್ಮ 80ನೆಯ ವಯಸ್ಸಿನಲ್ಲಿ ರಚಿಸಿದರು. ಭಾಮಿನಿ ಷಟ್ಪದಿ ಯಲ್ಲಿ 32 ಸಂಧಿಗಳಲ್ಲಿ ರಚಿತವಾಗಿರುವ ಅಮೂಲ್ಯ ಕೃತಿ.ನಾಡಿ ಪ್ರಕರಣ ಸಂಧಿಯಲ್ಲಿ ದೇಹದ ಎಡ ಪಾಶ್ವದಲ್ಲಿ 36 ಸಾವಿರ, ಬಲ ಪಾಶ್ವ ದಲ್ಲಿ 36 ಸಾವಿರ, ಹೀಗೆ 72 ಸಾವಿರ ನಾಡಿಗಳಿರುವುದನ್ನು ಸೂಚಿಸುತ್ತ ಚರಣಗಳಲ್ಲಿ 12 ಸಾವಿರ ದೇಹದ ಮಧ್ಯ ಭಾಗದಲ್ಲಿ 14 ಸಾವಿರ ಬಾಹುಗಳಲ್ಲಿ 4 ಸಾವಿರ ಶಿರಭಾಗದಲ್ಲಿ 6 ಸಾವಿರ ನಾಡಿಗಳಿರುವುದಾಗಿ ಹೇಳುತ್ತಾರೆ. ವೈಜ್ಞಾನಿಕ ಸಂಶೋಧನೆಗಳ ನೆರವಿಲ್ಲದೆ, ಹುಟ್ಟಿರುವ ಈ ಮಾಹಿತಿ ದಂಗು ಬಡಿಸು ವಂತಿದೆ. 100 ವರ್ಷಕ್ಕೆ 36 ಸಾವಿರ ದಿನಗಳಂತೆ ನಾಡಿಗಳು 36 ಸಾವಿರ




**ಸಪ್ತಗಿರಿ ಕ್ವಿಜ್ ಜುಲೈ 2023**

**ತಿಂಗಳ ರಸಪ್ರಶ್ನೆಯ ಉತ್ತರಗಳು**

1. ಗೋಪೂಜೆ
2. ದುರ್ಬಲ ಮತ್ತು ಅಶಕ್ತ ಆತ್ಮ
3. ಪರಬ್ರಹ್ಮನಿಗೆ
4. ಬಲಗೈ ಹೆಬ್ಬೆರಳನ್ನು
5. ಜಿಂಕೆಯ ರೂಪ
6. ಜನಕರಾಜ
7. ಮುದುಗೆರೆ
8. ದುರ್ಮುಖಿ ವರ್ಷ
9. ಉತ್ತರಾಯಣ
10. ಸಂಜೀವಿನಿ ವ್ರತ
11. ಆಕಾಶ ಭೂಮಿಯಾದ್ಯಂತ
12. ನಾರಾಯಣನು
13. ಉಪ್ಪು
14. ವಕ್ಷಸ್ಥಳ
15. ದ್ರುಪದ

ಇರುವುದು ವಿಪರ್ಯಾಸ. ನಾಮಸ್ಮರಣ ಸಂಧಿಯಲ್ಲಿ ದೇವರನ್ನು ಯಾವಾಗಲೂ ಸ್ಮರಿಸುತ್ತಿರಬೇಕೆಂಬುದನ್ನು ಮಕ್ಕಳಾಡಿಸುವಾಗ ವಾಹನವೇರಿ ಮೆರೆವಾಗ ಬಿಕ್ಕುವಾಗ, ಆಕಳಿಸುವಾಗ, ಹೀಗೆ ಸದಾ ನಾಮಸ್ಮರಣೆಯ ದುಃಖ ದೋಷಗಳನ್ನು ಪರಿಹರಿಸುತ್ತದೆ ಎನ್ನುತ್ತಾರೆ.

ಶ್ವಾಸ ಸಂಧಿಯಲ್ಲಿ ಗಂಟೆಗೆ 900 ಸಲ ಶ್ವಾಸ ಉಚ್ಛ್ವಾಸಗಳು ನಡೆಯುವುದನ್ನು ಸೂಚಿಸುತ್ತಾರೆ. 28 ನೇಯದಾದ ಗಣಪತಿ ಸ್ತೋತ್ರ ಸಂಧಿ ಪಠಿಸಿದರೆ, ಸಕಲ ದುರ್ವಿಘ್ನಗಳು ಪರಿಹಾರವಾಗುತ್ತದೆ ಎಂದು ಹೇಳುತ್ತಾರೆ. ಇಡೀ ಕೃತಿಯನ್ನು ಗಮನಿಸಿದಾಗ ಮನುಷ್ಯ ಮಾತ್ರರಿಂದ ಇದು ಸಾಧ್ಯವೇ? ಎಂಬ ಅನುಮಾನ ಕಾಡುವುದು ಖಂಡಿತ ಹರಿದಾಸರು ಅಪರೋಕ್ಷ ಜ್ಞಾನಿಗಳು ಎಂಬುದಕ್ಕೆ ಈ ಕೃತಿ ಅಪಾರ ದಾಖಲೆಗಳನ್ನು ಒದಗಿಸುತ್ತದೆ. ಜಗನ್ನಾಥದಾಸರು ಕೀರ್ತನೆಗಳನ್ನು ಸಹ ರಚಿಸಿದ್ದಾರೆ. ರಾಯರನ್ನು ಕುರಿತು ಜಗನ್ನಾಥದಾಸರು ಕರುಣೆಗಳೊಳಗೆಣೆಗಾಣೆ ಶ್ರೀರಾಘವೇಂದ್ರ ಯಾಕೆ ಮೂಕನಾದ್ಯೋ ಎನ್ನುತ್ತಾರೆ. ಯಾಕೆ ಮೂಕ ನಾದ್ಯೋದಲ್ಲಿ ಹಿಂದಕ್ಕೆ ನೀ ಎನ್ನ ಮುಂದೆ ಸುಳಿದಾಡಿದಿ ಎಂಬ ಸಾಲು ರಾಯರು ಅವರಿಗೆ ದರ್ಶನವಿತ್ತ ಸೂಚನೆ ನೀಡುತ್ತದೆ. ರಾಯ ಬಾರೋ ತಂದೆ-ತಾಯಿ ಬಾರೋ ಇದು ಜನಪ್ರಿಯ ರಚನೆಯಾಗಿದೆ. ರಾಘವೇಂದ್ರ ರಾಜಿತ ಗುಣ ಸಾಂದ್ರ, ಪೊಂದಿ ಬದುಕಿರೋ,ವಂದಿಸುವೇ ಗುರುರಾಘವೇಂದ್ರಾರ್ಯರ, ಮುಂತಾದ ಕೀರ್ತನೆಗಳಲ್ಲಿ ರಾಯರ ಮಹಿಮೆಯನ್ನು ಹಾಡಿ ಹೊಗಳಿದ್ದಾರೆ.

ವಾದಿರಾಜ ಗುರು ಕೃತಿಯಲ್ಲಿ ಭಾವಿಸಮೀರರನ್ನು ಬಣ್ಣಿಸುತ್ತಾ ಜನ್ಮಾದಿವ್ಯಾದಿ ಉನ್ಮಾದದ ಭ್ರಮೆ ನಿಮ್ಮೆರೆ ಹೊಕ್ಕ ಮೇಲಿನ್ನಿರಲುಂಟೆ ಎನ್ನುತ್ತಾ ದೈಹಿಕ ಮಾನಸಿಕ ಖಾಯಿಲೆಗಳಿಗೆ ಬೇಷಜರು ನೀವು ಎನ್ನುತ್ತಾರೆ. ಸಪ್ತಗಿರಿ ಒಡೆಯ ಶ್ರೀನಿವಾಸನ ಬಗ್ಗೆ ಹಲವಾರು ಕೀರ್ತನೆಗಳಲ್ಲಿ ಹಾಡಿ ಹೊಗಳಿರುವ ಈ ದಾಸರ "ಸ್ತುತಿಸಬಲ್ಲನೆ ನಾ ನಿನ್ನ ವೆಂಕಟರನ್ನ"11 ನುಡಿಗಳ ಕೃತಿಯಾಗಿದೆ. ಶ್ರೀವೆಂಕಟಾಚಲ ನಿವಾಸ 47 ನುಡಿಗಳ ಕೀರ್ತನೆಯಾಗಿದೆ. ಶ್ರೀವಿಷ್ಣು ಸರ್ವೋತ್ತಮನು, ಜೀವ ಜಡತ್ಮಾಕ ಎಂಬ 32 ನುಡಿಗಳ ತಾರತಮ್ಯ ಗದ್ಯ ರಚಿಸಿದ್ದು, ಪ್ರತಿ ನುಡಿಯು ನಮಸ್ಕಾರಗಳೊಂದಿಗೆ ಮುಗಿಯುತ್ತದೆ. ಎಂತು ಬಣ್ಣಿಪೆನೊ ನಿನ್ನ ಎಂಬ ನುಡಿಗಳ ಕೃತಿ ವರ್ಣನಾ ವೈಭವಕ್ಕೆ ಸಾಕ್ಷಿಯಾಗಿದೆ. ಹೀಗೆ ರಂಗವಲಿದ ದಾಸರಾದ ಜಗನ್ನಾಥದಾಸರು ಜಗನ್ಮಾನ್ಯ ದಾಸರಾಗಿ ಮೆರೆದಿದ್ದಾರೆ.



## ಅಶ್ವವಾಹನೋತ್ಸವ

**ಅಶ್ವವಾಹನ ಕುದುರೆ ತನ್ನ ವೇಗಕ್ಕೆ ಪ್ರಸಿದ್ಧ ಬಹಳಷ್ಟು ದೇವತೆಗಳ ವಾಹನ ಅಶ್ವವಾಗಿದೆ. ಅಶ್ವವು ಅಷ್ಟು ವೇಗವಾಗಿ ಏಕೆ ಓಡುತ್ತದೆ ಎಂದರೆ ಅದಕ್ಕೆ ತನ್ನ ಅಕ್ಕಪಕ್ಕದ ಯಾವುದೇ ವಸ್ತುವಿನ ಕಡೆಗೆ ಲಕ್ಷ್ಯ ಹೋಗುವುದಿಲ್ಲ ತನ್ನ ಗುರಿಯತ್ತ ಮಾತ್ರ ಮನಸ್ಸು ಕೇಂದ್ರಿಕೃತವಾಗಿರುತ್ತದೆ. ಹಾಗೆಯೇ ಭಕ್ತನ ಮನಸ್ಸು ಭಗವಂತನ ಪಾದಚರಣಗಳಲ್ಲಿ ಸ್ಥಾನ ಪಡೆಯುವ ಒಂದೇ ಉದ್ದೇಶವಿದ್ದಾಗ ಅವನ ಪಾದ ಸೇರುತ್ತೇವೆ ಎನ್ನುವ ವಿಚಾರವನ್ನು ಹೇಳುವ ಅಶ್ವವು ಕೂಡ ಪರಮಾತ್ಮನ ಸೇವೆಗೆ ತತ್ಪರವಾಗಿರುತ್ತದೆ.**

# ಜಗತ್ತಿನ ಪ್ರಥಮ ಶಿಲ್ಪಿ ಬ್ರಹ್ಮ ಮಾನಸ ಪುತ್ರ ವಿಶ್ವಕರ್ಮ



– ಡಾ. ಎಸ್. ನಂಜುಂಡಸ್ವಾಮಿ
7899011310

## ವೇದಗಳಲ್ಲಿ ವಿಶ್ವಕರ್ಮ

ವಿಶ್ವಕರ್ಮನು ಜಗತ್ತಿನ ಪ್ರಪ್ರಥಮ ಮಹಾಶಿಲ್ಪಿಯಾದುದರಿಂದ ಅವನ ಜಯಂತಿಯನ್ನು ಪ್ರತಿವರ್ಷವೂ ಆಚರಿಸಿಕೊಂಡು ಬರಲಾಗುತ್ತಿದೆ. ವಿಶ್ವಕರ್ಮನೆಂಬ ಪರಿಕಲ್ಪನೆಯು ವೇದ ಮೂಲವಾದುದು.ಎಲ್ಲ ದೇವತೆಗಳ ಸರ್ವಶಕ್ತಿಯೇ ವಿಶ್ವಕರ್ಮನೆಂಬ ದೇವತೆಯ ರೂಪವನ್ನು ತಾಳಿತು. ವಿಶ್ವಕರ್ಮ ಎಂದರೆ ವಿಶ್ವವನ್ನು ರಚಿಸಿದ ಮಹಾಶಿಲ್ಪಿ, ಎಲ್ಲವನ್ನು ಸೃಷ್ಟಿಸುವ ಶಕ್ತಿಯ ಮೂರ್ತಸ್ವರೂಪ ಎಂದು ವೇದ ಸೂಕ್ತದಲ್ಲಿ ಹೇಳಿದೆ. ಋಗ್ವೇದದ ದಶಮ ಸ್ಕಂದದಲ್ಲಿ ವಿಶ್ವಕರ್ಮ ಸೂಕ್ತವಿದೆ. ಯಜುರ್ವೇದೀಯ ಸೂಕ್ತದಲ್ಲೂ ಸಮಸ್ತ ಕರ್ಮಗಳೂ ವಿಶ್ವಕರ್ಮನಲ್ಲಿ ನಿಹಿತವಾಗಿದೆ ಎಂದು ಹೇಳಿದೆ. ವಿಶ್ವಕರ್ಮನ ಅವತಾರವೇ ಪ್ರಜಾಪತಿ ತ್ವಷ್ಟ್ರುಎಂಬ ಕಲ್ಪನೆಯಿದೆ. ತ್ವಷ್ಟ್ರುವನ್ನು ಋಗ್ವೇದದ ವಿಶ್ವ ದೇವತೆಗಳ ಸಾಲಿನಲ್ಲಿ ಸ್ತುತಿಸಲಾಗಿದೆ. ಕಬ್ಬಿಣದ ಕೊಡಲಿಯನ್ನು ಕೈಯಲ್ಲಿ ಹಿಡಿದಿರುವ ತ್ವಷ್ಟ್ರುವನ್ನು ದೇವತೆಗಳಲೆಲ್ಲಾ ಅತ್ಯಂತ ಬಲಶಾಲಿಯಾದವನು ಎಂದು ಹೇಳಿದೆ. ತ್ವಷ್ಟ್ರುವನ್ನೇ ದೇವ ಶಿಲ್ಪಿಯಾದ ವಿಶ್ವಕರ್ಮನೆಂದು ಕರೆಯಲಾಗಿದೆ. ತ್ವಷ್ಟ್ರು ಅಂದರೆ ವಿಶ್ವ ಕರ್ಮನೇ ಇಂದ್ರನಿಗೆ ವಜ್ರಾಯುಧವನ್ನು ತಯಾರಿಸಿಕೊಟ್ಟನೆಂದೂ ಹೇಳಿದೆ. ಆತನೇ ವಿಶ್ವದ ವಾಸ್ತುಶಿಲ್ಪಿ. ದೇವತೆಗಳ ಬಡಗಿ, ಅವರ ಆಯುಧಗಳ ಕುಶಲಕರ್ಮಿ. ಸಕಲ ಕಲೆಗಳಲ್ಲಿ ನಿಷ್ಣಾತ. ದೇವತೆಗಳಿಗೆ ಬೇಕಾದ ದಿವ್ಯವಾದ ಆಭರಣಗಳು, ರಥಗಳನ್ನು ನಿರ್ಮಿಸಿಕೊಡುತ್ತಾನೆ ಎಂದು ಋಗ್ವೇದದಲ್ಲಿ ಹೇಳಿದೆ.

## ಮಹಾಭಾರತ, ರಾಮಾಯಣಗಳಲ್ಲಿ ವಿಶ್ವಕರ್ಮ

ಮೊಟ್ಟಮೊದಲಿಗೆ ಮಹಾಭಾರತದ ಕೆಲವು ಪರ್ವಗಳಲ್ಲಿ ವಿಶ್ವಕರ್ಮನ ವೃತ್ತಾಂತವು ನಿರೂಪಿತವಾಗಿದೆ. ವಿಶ್ವಕರ್ಮನು ಅಷ್ಟವಸುಗಳಲ್ಲಿ ಒಬ್ಬನಾದ ಪ್ರಭಾಸ ಮತ್ತು ಬೃಹಸ್ಪತ್ಯಾಚಾರ್ಯನ ತಂಗಿಯಾದ ಯೋಗಸಿದ್ಧಿಯ ಮಗನೆಂದು ಹೇಳಿದೆ. ಹರಿವಂಶದಲ್ಲಿ ಬೃಹಸ್ಪತ್ಯಾ ಚಾರ್ಯನ ತಂಗಿಯ ಹೆಸರು ಬ್ರಹ್ಮವಾದಿನಿ ಎಂದು, ವಿಶ್ವಕರ್ಮನಿಗೆ ತ್ವಷ್ಟ್ರು ಎಂಬ ಹೆಸರೂ ಇತ್ತು ಎಂದು ಹೇಳಿದೆ. ಇವನೇ ದೇವಶಿಲ್ಪಿಯಾದ ವಿಶ್ವಕರ್ಮ. ಸುಂದೋಪ ಸುಂದರ ವಧೆಯನ್ನು ಮಾಡಲು ಬ್ರಹ್ಮನ ಆಜ್ಞೆಯ ಮೇರೆಗೆ ವಿಶ್ವಕರ್ಮನು ತಿಲೋತ್ತಮೆಯನ್ನು ಸೃಷ್ಟಿಸಿದನೆಂದು, ಶ್ರೀ ಕೃಷ್ಣನ ಅಪ್ಪಣೆಯಂತೆ ಇಂದ್ರಪ್ರಸ್ಥವನ್ನು ನಿರ್ಮಾಣ ಮಾಡಿದನೆಂದು ಆದಿಪರ್ವದಲ್ಲಿ ಹೇಳಿದೆ. ತ್ರಿಪುರಾಸುರ ಸಂಹಾರ ಮಾಡಲು ಶಿವನಿಗೆ ವಿಶೇಷವಾದ ರಥವನ್ನೂ ವಿಶ್ವಕರ್ಮನೇ ತಯಾರಿಸಿ ಕೊಟ್ಟನೆಂದು ದ್ರೋಣ, ಕರ್ಣ ಪರ್ವದಿಂದ ತಿಳಿದು ಬರುತ್ತದೆ. ವಿಶ್ವಕರ್ಮನು ದೇವೇಂದ್ರನಿಗೆ ಅಮರಾವತಿ ಪಟ್ಟಣವನ್ನು ನಿರ್ಮಿಸಿದಂತೆ, ರಾಕ್ಷಸರಿಗಾಗಿ ಲಂಕಾದ್ವೀಪವನ್ನು ಮತ್ತು ಅದರಲ್ಲಿ ಸ್ವರ್ಣಮಯವಾದ ಲಂಕಾಪಟ್ಟಣವನ್ನು ನಿರ್ಮಿಸಿಕೊಟ್ಟನೆಂದು ರಾಮಾಯಣದಲ್ಲಿ ಹೇಳಿದೆ. ಭರತನ ನಾಟ್ಯ ಶಾಸ್ತ್ರದಲ್ಲಿ ಬ್ರಹ್ಮನ ಆದೇಶದ ಮೇರೆಗೆ ವಿಶ್ವಕರ್ಮನು ಸುಂದರವಾದ ನಾಟ್ಯ ಶಾಲೆಯನ್ನು ನಿರ್ಮಿಸಿದನೆಂದು, ಹಿಮವಂತನಿಗೆ ಭವ್ಯವಾದ ಸಭಾಂಗಣವನ್ನು, ಬ್ರಹ್ಮನಿಗೆ ಪುಷ್ಪ ರಥವನ್ನು ವಿಶ್ವಕರ್ಮನೇ ನಿರ್ಮಿಸಿಕೊಟ್ಟನೆಂದು ತಿಳಿದು ಬರುತ್ತದೆ.

ಶಿಲ್ಪಶಾಸ್ತ್ರಕ್ಕೆ ಸಂಬಂಧಿಸಿದ ಮಾನಸಾರ ಎಂಬ ಗ್ರಂಥದಲ್ಲಿ ಬ್ರಹ್ಮನು ತನ್ನ ನಾಲ್ಕು ಮುಖಗಳಿಂದ ನಾಲ್ಕು ಜನ ಸ್ಥಪತಿಗಳನ್ನು ಸೃಷ್ಟಿಸಿದನು. ಈ ನಾಲ್ವರನ್ನು ಬ್ರಹ್ಮನ ಮಾನಸಪುತ್ರರು ಎಂದು ಕರೆದಿದೆ. ಅವರಲ್ಲಿ ಮೊದಲನೆಯವನು ವಿಶ್ವಕರ್ಮ, ಎರಡನೆಯವನು ಮಯ. ಮತ್ಸ್ಯಪುರಾಣದಲ್ಲಿ ಹದಿನೆಂಟು ಜನರನ್ನು ವಾಸ್ತು ಶಿಲ್ಪದ ಪುರಾತನ ಆಚಾರ್ಯರೆಂದು ಹೇಳಿದ್ದು, ಇವರಲ್ಲಿ ವಿಶ್ವಕರ್ಮ ಮತ್ತು ಮಯ ಪ್ರಮುಖರು.

## ಸ್ಕಾಂದಪುರಾಣದಲ್ಲಿ ವಿಶ್ವಕರ್ಮನ ವೃತ್ತಾಂತ

ಸ್ಕಾಂದ ಪುರಾಣದ,ಕಾಶಿಖಂಡದ ಉತ್ತರಾರ್ಧದಲ್ಲಿ ವಿಶ್ವ ಕರ್ಮನ ವೃತ್ತಾಂತವು ವಿವರವಾಗಿ ಬಂದಿದೆ. ಕಾಶಿಯಲ್ಲಿರುವ ಅಸಂಖ್ಯಾತ ಶಿವ ಲಿಂಗಗಳಲ್ಲಿ ಯಾವುವು ಅತ್ಯಂತ ಮಹಿಮೆಯುಳ್ಳ ಅನಾದಿ ಸಂಸಿದ್ಧ ಲಿಂಗಗಳಾಗಿವೆ. ಅವುಗಳ ಉತ್ಪತ್ತಿ ಮತ್ತು ಮಹಿಮೆಯನ್ನು ತಿಳಿಸಿ ಎಂದು ಪಾರ್ವತಿಯು ಪರಶಿವನನ್ನು ಕೇಳಲು, ಶಿವನು ಅವಿಮುಕ್ತ ಕ್ಷೇತ್ರವಾದ ಕಾಶಿಯಲ್ಲಿ 28 ಅನಾದಿ ಸಂಸಿದ್ಧಲಿಂಗಗಳಿವೆ. ಅದರಲ್ಲಿ ಹದಿನಾಲ್ಕು ಲಿಂಗಗಳು ಮುಕ್ತಿ ಕ್ಷೇತ್ರದಲ್ಲಿವೆ. ಈ ಹದಿನಾಲ್ಕು ಲಿಂಗಗಳಲ್ಲಿ ವಿಶ್ವ ಕರ್ಮೇಶ್ವರ ಲಿಂಗವೂ ಒಂದು ಎಂದು ಹೇಳಿ ಅದರ ಮಹಿಮೆಯನ್ನು ಪಾರ್ವತಿಗೆ ಹೇಳುತ್ತಾನೆ.

ಪೂರ್ವದಲ್ಲಿ ಬ್ರಹ್ಮಮಾನಸ ಪುತ್ರನಾದ ತ್ವಷ್ಟ್ರ ಎಂಬ ಪ್ರಜಾಪತಿಗೆ ವಿಶ್ವಕರ್ಮನೆಂಬ ಮಗನು ಜನಿಸಿದನು. ವಿಶ್ವಕರ್ಮನೆಂದರೆ ಎರಡನೆಯ ಬ್ರಹ್ಮನು. ತಂದೆಯು ವಿಶ್ವಕರ್ಮನಿಗೆ ಐದನೆಯ ವರ್ಷಕ್ಕೇ ಉಪನಯನ ಸಂಸ್ಕಾರವನ್ನು ಮಾಡಿ ವಿದ್ಯಾಭ್ಯಾಸಕ್ಕಾಗಿ ಗುರುಕುಲಕ್ಕೆ ಕಳುಹಿಸಿದನು. ವಿಶ್ವಕರ್ಮನು ವಿದ್ಯಾಭ್ಯಾಸ ಮಾಡುತ್ತಿದ್ದಾಗ, ಗುರುವು ಅವನನ್ನು ಕರೆದು ತನಗಾಗಿ ಯಾವ ಕಾಲಕ್ಕೂ ನಾಶವಾಗದ, ಹಳೆಯದಾಗದ ಪರ್ಣಶಾಲೆಯನ್ನು ನಿರ್ಮಿಸಿಕೊಡು ಎಂದು ಹೇಳುತ್ತಾನೆ. ಗುರುವಿನ ಪತ್ನಿಯು ವಿಶ್ವಕರ್ಮ ನೀನು ನನಗಾಗಿ ಸರಿಯಾಗಿ ಹೊಂದುವ ಮರದ ತೊಗಟೆ ಅಂದರೆ ನಾರುಮಡಿಯಿಂದ ಎಲ್ಲೂ ಹೊಲಿಗೆಯನ್ನೇ ಹಾಕದೇ ಇರುವ ಒಂದು ಚೋಳಿ (ಕಂಚುಕ - ರವಿಕೆ)ಯನ್ನು ಸಿದ್ಧಪಡಿಸಿ ಕೊಡು ಎನ್ನುತ್ತಾಳೆ. ಗುರುಪುತ್ರನು, ವಿಶ್ವಕರ್ಮ ನನಗೆ ಎಷ್ಟೇ ನಡೆದರೂ ಆಯಾಸವಾಗದ, ನೆಲದ ಮೇಲೆ , ಆಕಾಶದಲ್ಲಿ ಮತ್ತು ನೀರಿನ ಮೇಲೆ ನಡೆಯುವಂತಹ , ಸವೆದು ಹೋಗದ, ಚರ್ಮವನ್ನು ಉಪಯೋಗಿಸದ, ಮರದಕಟ್ಟಿಗೆಯ ಚಡಾವುಗಳನ್ನು ತಯಾರಿಸಿಕೊಡು ಎಂದು ಕೇಳುತ್ತಾನೆ. ಗುರುಪುತ್ರಿಯು ವಿಶ್ವಕರ್ಮ ನೀನು ನನಗೆ ಬಂಗಾರದ ಕಿವಿಯೋಲೆಗಳನ್ನು, ಆನೆಯ ದಂತದ ಆಟಿಕೆಗಳನ್ನು ತಯಾರಿಸಿಕೊಡು, ಮನೆಗೆ ಬೇಕಾದ ಎಲ್ಲ ಬಗೆಯ ಪಾತ್ರೆ ಪದಾರ್ಥ ಪರಿಕರಗಳನ್ನು ತಯಾರಿಸಿ ಕೊಡು, ಎಲ್ಲಿಗೆ ಬೇಕೆಂದರೆ ಅಲ್ಲಿಗೆ ತೆಗೆದುಕೊಂಡು ಹೋಗಬಲ್ಲ ಒಂದೇ ಕಂಬದ ಮನೆಯನ್ನು ನಿರ್ಮಿಸಿಕೊಡು ಎಂದು ಕೇಳುತ್ತಾಳೆ. ವಿದ್ಯಾವಂತನು, ವಿನಯಶಾಲಿಯೂ ಆದ ವಿಶ್ವಕರ್ಮನು ಎಲ್ಲರಿಗೂ ಆಗಲಿ, ನೀವು ಕೇಳಿದುದನ್ನು ತಯಾರಿಸಿ ಕೊಡುತ್ತೇನೆ ಎಂದು ಹೇಳುತ್ತಾನೆ.

ವಿಶ್ವಕರ್ಮನು ಎಂದಿನಂತೆ ಗುರುಕುಲದ ಗೋವುಗಳನ್ನು ಮೇಯಿಸಲು ಅರಣ್ಯಕ್ಕೆ ಹೋಗಿ, ದಾಕ್ಷಿಣ್ಯಕ್ಕೆ ಕಟ್ಟು ಬಿದ್ದು, ಗುರುಗಳು ಹಾಗೂ ಅವರ ಕುಟುಂಬದ ಎಲ್ಲರ ಕೋರಿಕೆಯನ್ನೂ ಈಡೇರಿಸಿ ಕೊಡುತ್ತೇನೆ ಎಂದು ಹೇಳಿ ಬಿಟ್ಟಿದ್ದೇನೆ, ಆದರೆ ನನಗೆ ಇವುಗಳನ್ನು ನಿರ್ಮಾಣ ಮಾಡಲು ಬರುವುದಿಲ್ಲ. ಇವುಗಳನ್ನು ಹೇಗೆ ತಯಾರಿಸಿ ಕೊಡಲಿ ಎಂದು ಚಿಂತಾಕ್ರಾಂತನಾಗಿ ಕುಳಿತಿರಲು ಅಲ್ಲಿಗೆ ಒಬ್ಬ ಮಹಾ ತೇಜಸ್ವಿಯಾದ ಋಷಿಯು ಆಗಮಿಸುತ್ತಾನೆ. ವಿಶ್ವಕರ್ಮನು ಸಾಕ್ಷಾತ್ ಶಿವನೇ ಈ ರೂಪದಲ್ಲಿ ಬಂದಿದ್ದಾನೆಂದು ತಿಳಿದು, ಭಕ್ತಿಭಾವನೆಯಿಂದ ಅವನ ಕಾಲುಗಳನ್ನು ಹಿಡಿದು,



ಗುರುಗಳ ಕುಟುಂಬದ ಬೇಡಿಕೆಯನ್ನು ಈಡೇರಿಸುವ ಮಾರ್ಗವನ್ನು ಸೂಚಿಸಬೇಕೆಂದು ಪ್ರಾರ್ಥಿಸುತ್ತಾನೆ. ಆಗ ಆ ಋಷಿಯು, ಪ್ರಪಂಚದ ಸೃಷ್ಟಿಕರ್ತನಾದ ಬ್ರಹ್ಮನ ಅಂಶದಿಂದ ಜನಿಸಿದವನು ನೀನು. ನಿನಗೆ ಆ ಶಕ್ತಿ ಇದೆ, ನೀನು ಈಗಿಂದೀಗಲೇ ಕಾಶಿಗೆ ಹೋಗಿ ವಿಶ್ವನಾಥನ ಆರಾಧನೆಯನ್ನು ಮಾಡು , ನಿನ್ನ ಮನೋರಥವು ಈಡೇರುತ್ತದೆ ಎನ್ನುತ್ತಾನೆ ಮತ್ತು ತಾನೇ ವಿಶ್ವಕರ್ಮವನ್ನು ಜೊತೆಯಲ್ಲಿ ಕಾಶಿಗೆ ಕರೆದುಕೊಂಡು ಹೋಗಿ ಬಿಟ್ಟು ಅದೃಶ್ಯನಾಗುತ್ತಾನೆ.

ವಿಶ್ವಕರ್ಮನು ವಿಶ್ವನಾಥನ ದರ್ಶನ ಪಡೆದು, ಕಾಶಿಯಲ್ಲಿ ತಾನೇ ಒಂದು ಶಿವಲಿಂಗವನ್ನು ಸ್ಥಾಪಿಸಿ, ಮೂರುವರ್ಷಗಳ ಕಾಲ ನೇಮ ನಿಷ್ಠೆಗಳಿಂದ ಪೂಜಿಸುತ್ತಾನೆ. ಹೀಗಿರಲು ಶಿವನು ಪ್ರತ್ಯಕ್ಷನಾಗಿ, ವಿಶ್ವಕರ್ಮ ನಿನ್ನ ಗುರುಗಳ ಹಾಗೂ ಅವರ ಕುಟುಂಬದವರು ಚಿತ್ರವಿಚಿತ್ರವಾದ ವಸ್ತುಗಳನ್ನು ಮಾಡಿಕೊಡಲು ನಿನಗೆ ಅಪ್ಪಣೆ ಕೊಟ್ಟಿದ್ದಾರೆ. ಅವೆಲ್ಲವನ್ನೂ ನಿರ್ಮಾಣ ಮಾಡಿಕೊಡುವ ಶಕ್ತಿಯನ್ನು ನಿನಗೆ ಕರುಣಿಸಿದ್ದೇನೆ, ಕಟ್ಟಿಗೆ, ಕಲ್ಲು,ಧಾತು (ಲೋಹ), ಮುತ್ತು,ರತ್ನ,ಹೂವು,ವಸ್ತ್ರ,ಸುಗಂಧಿತ ಪದಾರ್ಥಗಳು, ನೀರು, ದ್ರವ್ಯ, ಕಂದಮೂಲಗಳು, ಹಣ್ಣು, ಗಿಡದ ತೊಗಟೆ ಇವುಗಳಿಂದ ನಾನಾ ರೀತಿಯ ಚಿತ್ರವಿಚಿತ್ರ ವಸ್ತುಗಳನ್ನು ಸೃಷ್ಟಿಸುವ ಶಕ್ತಿಯು ನಿನಗೆ ಕರಗತವಾಗುವುದು. ಶೃಂಗಾರ ಸಾಮಾಗ್ರಿಗಳು, ಆಭರಣ, ವಾಸ್ತುಶಿಲ್ಪ ಮೊದಲಾದವುಗಳನ್ನು ರಚನೆ ಮಾಡುವ ಚಾತುರ್ಯ ಉಂಟಾಗುವುದು. ನೃತ್ಯ, ಗೀತೆಗಳು, ಸಕಲ ಕಲೆಗಳೂ ನಿನಗೆ ಕೈಗೂಡುವುವು. ಯಂತ್ರ, ಶಸ್ತ್ರಾಸ್ತ್ರ. ಜಲಾಶಯ ನಿರ್ಮಾಣ, ದುರ್ಗರಚನೆ, ಜ್ಞಾನ, ವಿಜ್ಞಾನ, ಕಲಾಕೌಶಲ್ಯ, ಕೃತಿರಚನೆ, ಇಂದ್ರಜಾಲ, ಮಹೇಂದ್ರ ಜಾಲವೇ ಮೊದಲಾದ ಜ್ಞಾನವು ನಿನಗೆ ಸಿದ್ಧಿಸುವುದು ಎಂದು ವರವನ್ನು ನೀಡಿದನು. ಆಗ ವಿಶ್ವಕರ್ಮನು ಮಹೇಶ್ವರ ನಾನು ಸ್ಥಾಪಿಸಿರುವ ಈ ವಿಶ್ವಕರ್ಮೇಶ್ವರ ಲಿಂಗವನ್ನು ಪೂಜಿಸುವವರಿಗೆ ಕೂಡಾ ವಿವಿಧ ಬಗೆಯ ಕಲಾಕೌಶಲ್ಯಗಳು ಸಿದ್ಧಿಸುವಂತೆ ವರ ನೀಡು ಎನ್ನಲು ಶಿವನು ತಥಾಸ್ತು ಎಂದನು. ಅಲ್ಲಿಂದ ವಿಶ್ವಕರ್ಮನು ತನ್ನ ಗುರುಕಲಕ್ಕೆ ಹಿಂದಿರುಗಿ ಗುರುವಿನ ಕುಟುಂಬದವರ ಎಲ್ಲ ಬೇಡಿಕೆಗಳನ್ನೂ ಈಡೇರಿಸಿದನು. ವಿಶ್ವಕರ್ಮನು ಶಿಲ್ಪ ಶಾಸ್ತ್ರಕ್ಕೆ ಸಂಬಂಧಿಸಿದಂತೆ ವಿಶ್ವಕರ್ಮಪ್ರಕಾಶ ಎಂಬ ಗ್ರಂಥವನ್ನು ಬರೆದಿದ್ದಾನೆಂದು ತಿಳಿದು ಬರುತ್ತದೆ.

తిరుమల తిరుపతి దేవస్థానములు

# సప్తగిరి

సచిత్రమాసపత్రిక

திருமலை திருப்பதி தேவஸ்தானம்

# ஸப்தகிரி

சமய மாத இதழ்

तिरुमल तिरुपति देवस्थान

# सप्तगिरि

सचित्र मासिक पत्रिका

TIRUMALA TIRUPATI DEVASTHANAMS

# SAPTHAGIRI

ILLUSTRATED MONTHLY

ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಸಚಿತ್ರಮಾಸ ಪತ್ರಿಕೆ

तिरुमलतिरुपतिदेवस्थानम्

# सप्तगिरिः

ತಿರುಮಲೆ ತಿರುಪತಿ ದೇವಸ್ಥಾನಗಳು

## ವಿಜ್ಞಪ್ತಿ

'ಸಪ್ತಗಿರಿ' ಬಗ್ಗೆ ತೋರಿಸುವ
ಅಭಿಮಾನ ಅನನ್ಯ ಸಾಮಾನ್ಯ ತಿ.ತಿ.ದೇ.
ಹಾಗೂ ಪಾಠಕರಿಗೆ ಮಧ್ಯ ವಾರಧಿಯಾಗಿ
ಇರುವ 'ಸಪ್ತವರ್ಣ'
ಆಧ್ಯಾತ್ಮಿಕ ಸಚಿತ್ರ ಮಾಸಪತ್ರಿಕೆ
'ಸಪ್ತಗಿರಿ' ಪತ್ರಿಕೆ ಬೆಲೆಯಲ್ಲಿ ಬದಲಾವಣೆ
ನಿಮ್ಮ ಮನೆಗೆ ಸಪ್ತಗಿರೀಶನು ಬಂದ
ಅನುಭೂತಿಯನ್ನು ಪಡೆಯಿರಿ.

'ಸಪ್ತಗಿರಿ'
ಆಧ್ಯಾತ್ಮಿಕ ಸಚಿತ್ರ ಮಾಸಪತ್ರಿಕೆಗೆ
ಚಂದಾದಾರರಾಗಿ ಕಟ್ಟಿ.
ಸ್ವಾಮಿಯವರ ಅಕ್ಷರ ಪ್ರಸಾದವನ್ನು
ಪ್ರತಿ ತಿಂಗಳು
ಪಡೆದು ಕೊಳ್ಳಿ






# ಸಪ್ತಗಿರಿ

ಆಧ್ಯಾತ್ಮಿಕ ಸಚಿತ್ರಮಾಸಪತ್ರಿಕೆ

(ತೆಲುಗು, ತಮಿಳು, ಕನ್ನಡ, ಹಿಂದಿ, ಆಂಗ್ಲ, ಸಂಸ್ಕೃತ ಭಾಷೆಗಳು)

..... ಚಂದಾ ವಿವರಗಳು.....

ಬಿಡಿ ಪ್ರತಿ ರೂ. 20/-
ವಾರ್ಷಿಕ ಚಂದಾ : ರೂ. 240/-
ಆಜೀವ ಚಂದಾ : (12 ವರ್ಷಗಳು) ರೂ. 2,400/-
ವಿದೇಶಿ ವಾರ್ಷಿಕ ಚಂದಾ : ರೂ. 1030/-

ವಿವರಗಳಿಗೆ: ಪ್ರಧಾನ ಸಂಪಾದಕರು, ತಿ.ತಿ.ದೇ., ಪ್ರೆಸ್ ಕಾಂಪೌಂಡ್ ಕೆ.ಟಿ.ರೋಡ್ಡು,
ತಿರುಪತಿ : 517 507.ಫೋನ್ : 0877 - 2264363, 2264543



## ಸೆಪ್ಟೆಂಬರ್ ತಿಂಗಳ

# ರಾಶಿ ಫಲಗಳು

ಮೂಲ-ಬ್ರಹ್ಮಶ್ರೀ ತಂಗಿರಾಲ ವೆಂಕಟಕೃಷ್ಣ ಪೂರ್ಣಪ್ರಸಾದ್ ಸಿದ್ಧಾಂತಿ
ಅನುವಾದ- ಕೆ.ಎನ್.ಎಸ್



**ಮೇಷ**

ಗೃಹವಾತಾವರಣ ಅನುಕೂಲಕರವಾಗಿರುತ್ತದೆ. ಜೀವನ ಸಂಗಾತಿ ಹಾಗೂ ಸಂತಾನದೊಂದಿಗೆ ಕಾಲ ಕಳೆಯಲು ಸಮಯ ನೀಡುತ್ತೀರಿ. ತಕ್ಕಷ್ಟು ಆದಾಯ ಒದಗಿ ಬರುತ್ತದೆ.ವಿದ್ಯಾರ್ಥಿಗಳು ಸೋಮಾರಿ ತನವನ್ನು ಬಿಟ್ಟು ಓದಿನಲ್ಲಿ ಆಸಕ್ತಿ ತೋರುತ್ತಾರೆ. ಅಶ್ವತವೃಕ್ಷಕ್ಕೆ ಪ್ರದಕ್ಷಿಣೆ ಹಾಕುವುದರಿಂದ ಮಾನಸಿಕವಾಗಿಯೂ, ಶಾರೀರಿಕವಾಗಿಯೂ ಉತ್ಸಾಹವನ್ನು ಕೊಡುತ್ತದೆ. ದೈವಬಲ ವೃದ್ಧಿಯಾಗುತ್ತದೆ.

**ವೃಷಭ**

ಶತ್ರುಜಯ, ಮಿತ್ರಲಾಭ, ಸ್ನೇಹಿತರಿಂದ ಧನಯೋಗವುಂಟಾಗುತ್ತದೆ. ಶುಭ ಸಮಾಚಾರಗಳನ್ನು ಕೇಳುವಿರಿ. ಸಾಮಾಜಿಕ ಜೀವನ ಗೌರವಪ್ರದವಾಗಿರುತ್ತದೆ. ಶುಭಕಾರ್ಯ ಆಚರಣೆ ಒದಗಿಬರುತ್ತದೆ.ದೂರದ ಸಂಬಂಧಿಗಳನ್ನು ಭೇಟಿಯಾಗುವಿರಿ. ನಿಮ್ಮ ಅಕ್ಕ - ತಂಗಿಯರೊಂದಿಗೆ, ಕುಟುಂಬ ಸದಸ್ಯರೊಂದಿಗೆ ಆನಂದವಾಗಿ ಕಾಲ ಕಳೆಯುವಿರಿ. ಪ್ರಭುತ್ವದಿಂದ ಗೌರವ ಪ್ರಾಪ್ತಿಯಾಗಲಿದೆ.

**ಮಿಥುನ**

ಪ್ರಮೋಷನ್ ಅಥವಾ ವೇತನ ವೃದ್ಧಿಯಾಗಲಿದೆ. ವೃತ್ತಿ ವಿಚಾರಗಳಲ್ಲಿ ನೈಪುಣ್ಯತೆ ಪ್ರಗತಿ, ಆನಂದ, ಉತ್ತಮ ಆರೋಗ್ಯ ಮತ್ತು ಸಂಪದಗಳು ಕೂಡಿ ಬರಲಿವೆ. ಧೈರ್ಯಸ್ಥಾನದಲ್ಲಿರುವ ಸೂರ್ಯನು ಶತ್ರುಗಳನ್ನು ಅತಿಕ್ರಮಿಸಲು ನಿಮಗೆ ಹೊಸಶಕ್ತಿಯನ್ನು ಕೊಡುತ್ತಾನೆ. ಶರೀರ ಆರೋಗ್ಯವು ಚೆನ್ನಾಗಿರುತ್ತದೆ. ಮೊಣಕಾಲು ಬಾಧೆ ಕಡಿಮೆಯಾಗುತ್ತದೆ. ಮನೆಯ ವಾತಾವರಣ ಚೆನ್ನಾಗಿರುತ್ತದೆ. ದೂರ ಪ್ರಯಾಣ ಮಾಡುವಿರಿ.

**ಕರ್ಕಾಟಕ**

ಈ ರಾಶಿಯವರಿಗೆ ಆರ್ಥಿಕ ಅಭಿವೃದ್ಧಿಯುಂಟಾಗುತ್ತದೆ. ಪ್ರತಿ ವಿಷಯದಲ್ಲೂ ಆನಂದ, ಉತ್ಸಾಹ ಕಂಡು ಬರುತ್ತದೆ. ಸುಭದ್ರವಾದ ವೃತ್ತಿ, ಉದ್ಯೋಗ ನೈಪುಣ್ಯಗಳನ್ನು ಬೆಳೆಸಲು ಇತರರೊಂದಿಗೆ ಸತ್ಸಂಬಂಧಗಳನ್ನು ಹೊಂದಲು ಸಹೋದ್ಯೋಗಿಗಳೊಂದಿಗೆ ಯಾವುದೇ ರೀತಿಯ ವಾದ-ಚರ್ಚೆಗಳನ್ನು ಇಟ್ಟುಕೊಳ್ಳದಿರುವುದು ಒಳಿತು. ಆರ್ಥಿಕ ಮೂಲಗಳು ಬೆಳೆದು ಲಾಭವುಂಟಾಗುತ್ತವೆ. ಇತರರಿಗೆ ಬೇಕಾದ ಸಹಾಯ ಮಾಡಲಿದ್ದೀರಿ.

**ಸಿಂಹ**

ಗ್ರಹಗಳ ಸ್ಥಿತಿ ಸಾಮಾನ್ಯವಾಗಿದೆ.ಮಾಸದ ದ್ವಿತಿಯಾರ್ಥದಲ್ಲಿ ಬುಧನ ಸಂಚಾರ ಮಾತ್ರ ಒಳ್ಳೆಯ ಫಲಗಳನ್ನು ನೀಡುತ್ತದೆ. ಸ್ಫೂರ್ತಿದಾಯಕವಾದ ವ್ಯಕ್ತಿಗಳೊಂದಿಗೆ ಪರಿಚಯ, ಬೆಳೆಯುತ್ತದೆ. ನಿಮ್ಮ ವಾಕ್ಚಾತುರ್ಯದಿಂದ ಎಲ್ಲಾ ಕಡೆ ಗೆಲ್ಲುತ್ತೀರಿ. ವಿದ್ಯಾರ್ಥಿಗಳಿಗೆ ಇನ್ನಷ್ಟು ಅವಕಾಶಗಳು ಬೆಳೆಯುತ್ತವೆ. ಹಿಂದಿಗಿಂತಲೂ ಹೆಚ್ಚಿನದಾದ ಆರೋಗ್ಯವಿರುತ್ತದೆ. ಆರ್ಥಿಕ ವಿಷಯಗಳಲ್ಲಿ ಮುನ್ನಡೆಯಿರುತ್ತದೆ.

**ಕನ್ಯ**

ಶಸ್ತ್ರ ಚಿಕಿತ್ಸೆಯಾಗುವ ಸಂಭವವಿದೆ. ವೃತ್ತಿ ವ್ಯವಹಾರಗಳು ಅಷ್ಟಷ್ಟೆ ಇದ್ದು ವೃಥಾಕಾಲಹರಣ, ಅನಾರೋಗ್ಯವು ಜ್ವರ ಅಥವಾ ರಕ್ತ ಸಂಬಂಧಿತ ಸೋಂಕುಗಳಿಂದ ಬರಬಹುದು. ವೃತ್ತಿ ವ್ಯಾಪಾರಗಳಲ್ಲಿ ಏರಿಳಿತಗಳು ಸಹಾ ಆಗಬಹುದು. ಪ್ರಸ್ತುತ ಸ್ವಂತವಾಗಿ ವ್ಯಾಪಾರ ಮಾಡದಿರುವುದು ಲೇಸು. ಮಾತೃವರ್ಗದವರೊಂದಿಗೆ ನಿಮ್ಮ ಸಂಬಂಧ ಅಷ್ಟು ಸ್ನೇಹ ಪೂರ್ವಕವಾಗಿರದೇ ಹೋಗಬಹುದು.

**ತುಲಾ**

ನಿಮ್ಮ ಸಂಕಲ್ಪ ಶಕ್ತಿ ಬೆಳೆಯುತ್ತದೆ. ಈ ಸಮಯದಲ್ಲಿ ನೀವು ಸ್ನೇಹಿತರಿಂದ ಮೆಚ್ಚುಗೆಯನ್ನು ಪಡೆಯುವಿರಿ. ರಿಯಲ್ ಎಸ್ಟೇಟ್ ವ್ಯವಹಾರಕ್ಕೂ ಇದು ಸೂಕ್ತ ಸಮಯ. ಈ ಕಾಲದಲ್ಲಿ ವ್ಯಾಪಾರವು ಸಹಾ ಲಾಭ ದಾಯಕವಾಗಿರುತ್ತದೆ.ನೀವು ಆದಾಯಕ್ಕೆ ಒಳ್ಳೆಯ ಪ್ರೋತ್ಸಾಹವನ್ನು ಕೊಡುತ್ತೀರಿ. ಸಂತಾನ ವಿಷಯದಲ್ಲಿ ಮುನ್ನಡೆ ಸಾಗುವಿರಿ. ಅವರಿಗೆ ಪ್ರೋತ್ಸಾಹ ಕೊಡುವಿರಿ.

**ವೃಶ್ಚಿಕ**

ನೀವು ಆಧ್ಯಾತ್ಮಿಕದೆಡೆಗೆ ಹೆಚ್ಚು ಬಲವು ತೋರುತ್ತೀರಿ. ನಿಮ್ಮ ಸಾಮಾಜಿಕ ಸ್ಥಿತಿ ಕೂಡಾ ಗಣನೀಯವಾಗಿ ಪರಿಗಣಿಸಲ್ಪಡುತ್ತದೆ. ಇದರಿಂದ ಮಾನಸಿಕ ಪ್ರಶಾಂತತೆಯು ಲಭಿಸುತ್ತದೆ. ದೂರ ಪ್ರಾಂತ್ಯದಲ್ಲಿ ಭೂಮಿಯನ್ನು ಖರೀದಿಸುವಿರಿ. ರಿಯಲ್ ಎಸ್ಟೇಟ್‌ನವರಿಗೆ, ಏಜಂಟರಿಗೆ ಸಮಯ ಒದಗಿ ಬರುತ್ತದೆ. ಶರೀರದ ಆರೋಗ್ಯ ಉತ್ತವಾಗಿರುತ್ತದೆ.

**ಧನಸ್ಸು**

ಹಲವು ಸಮಸ್ಯೆಗಳು ನಿಮ್ಮನ್ನು ನಿಮ್ಮ ಜೀವನ ಸಂಗಾತಿಯೊಂದಿಗೆ ವಿಬೇಧಿಸುತ್ತವೆ. ಖರ್ಚುಗಳನ್ನು ಕಡಿಮೆ ಮಾಡಿ, ಉಳಿತಾಯದ ಬಗ್ಗೆ ಆಲೋಚಿಸುವಿರಿ. ಹೆಚ್ಚು ಶ್ರಮವಿಲ್ಲದೇ ಅಭಿವೃದ್ಧಿ ಹಾಗೂ ಲಾಭಗಳನ್ನು ಅನುಭವಿಸುವ ಶುಭ ಕಾಲವಿದು. ಉದ್ಯೋಗಸ್ಥರಿಗೆ ಉನ್ನತಿ ಉಂಟಾಗಲಿದೆ.

**ಮಕರ**

ಗ್ರಹಸ್ಥಿತಿ ಮಿಶ್ರ ಫಲಗಳನ್ನು ನೀಡಲಿದೆ. ಗುಪ್ತಾಂಗಗಳಿಗೆ ಸಂಬಂಧಿಸಿದ ಸೋಂಕುಗಳು, ಪ್ರಯಾಣದಲ್ಲಿ ಮಾರ್ಗವರೋಧ ಸಮಸ್ಯೆಗಳು, ವೈವಾಹಿಕ ಜೀವನ ಸಾಮಾನ್ಯ ಖರ್ಚುಗಳಲ್ಲಿ ಹೆಚ್ಚಳ ಮತ್ತು ಪ್ರೇಮ ವಿಷಯಗಳಲ್ಲಿ ಅಸಂತೃಪ್ತಿಯನ್ನು ಕೂಡಾ ತರಬಹುದು. ನಿಮ್ಮನ್ನು ಸಮಸ್ಯೆಗೆ ಸಿಲುಕಿಸುವ ಪ್ರಯತ್ನದಲ್ಲಿರುವವರಿಂದ ಜಾಗ್ರತೆಯಾಗಿರಬೇಕು.

**ಕುಂಭ**

ಬಂಧು - ಮಿತ್ರರ ಸಮಾಗಮ, ಹಳೆಯ ಮಿತ್ರರ ಭೇಟಿ, ಗುರುಗಳನ್ನು ಸಮಾಜ ಸೇವೆಯಲ್ಲಿರುವವರನ್ನು ಗೌರವಿಸುವುದು,ಬಂಧು ಮಿತ್ರರಿಂದ ಶುಭ ವಾರ್ತೆ ಕೇಳುವಿರಿ. ಅಧಿಕಾರ ಕಾರ್ಯಕ್ರಮಗಳಿಗಾಗಿ ಮನೆ ಬಿಟ್ಟು ಹೊರಗೆ ಇರಬಹುದಾದ ಸಂದರ್ಭ ಬರಬಹುದು.

**ಮೀನ**

ಎಲ್ಲಾ ಪ್ರಯತ್ನಗಳಲ್ಲಿಯೂ ವಿಜಯವು ವರಸೆಯಿಂದ ನಿಮ್ಮಲ್ಲಿಗೆ ಬರುವುದು. ವ್ಯಾಪಾರವು ಬೆಳೆಯುತ್ತದೆ. ಜ್ಞಾನ ವೃದ್ಧಿಯಾಗುತ್ತದೆ ಮತ್ತು ನೀವು ಅನೇಕ ಮಾರ್ಗಗಳಿಂದ ಬಹಳಾ ಪ್ರಯೋಜನಗಳನ್ನು ಪಡೆಯುವಿರಿ. ಬಂಧು ಮಿತ್ರ ಸಮಾಗಮವು ಪ್ರಾಪ್ತಿಯಾಗುತ್ತದೆ ಮತ್ತು ನಿಮಗೆ ಅವರ ಅಭಿನಂದನೆಗಳು ಸಹಾ ಒದಗಿ ಬರುತ್ತವೆ.

# नवविंशः पाठः

## ಪಾಠ : 29

ರಚನೆ:-ಕೆ. ಸೂರ್ಯನಾರಾಯಣ
ಅನುವಾದ: ವಿ. ಪ್ರದೀಪ್ ಕುಮಾರ್

| | | |
|---|---|---|
| अस्मान् = ನಮ್ಮನ್ನು | आहूय = ಕರೆದು | पास्यति = ಕುಡಿಯಬಲ್ಲನು. |
| वृक्षात् = ಮರದ ದೆಸೆಯಿಂದ | पातुम् = ಕುಡಿಯಲು | पतति = ಬೀಳುತ್ತಿದ್ದಾನೆ. |
| वृक्षेभ्यः = ಮರಗಳ ದೆಸೆಯಿಂದ | पृष्ट्वा = ಕೇಳಿ | चरति = ನಡೆಯುತ್ತಿದ್ದಾನೆ. |

### ಪ್ರಶ್ನೆ

1. किमरे! क्षीरं पास्यसि किम्?
2. बालकः वृक्षात् अपतत्।
3. त्वं तत्र मा गच्छ।
4. ते बालकाः दौष्ट्यं करिष्यन्ति।
5. ब्राह्मणाः स्नानं कृत्वा तटाकात् आगच्छन्ति।
6. अनन्तरं भोजनं करिष्यन्ति।
7. अहमपि स्नानार्थं गच्छमि।
8. भोजनार्थम् आलस्यं मा कुरुत।
9. तव जनकः एतावत्पर्यन्तं ग्रामात् न आगच्छत्।
10. श्वः आगमिष्यति किं वा; तवानुजं प्रक्ष्यसि चेत् सः वदिष्यति।

### ಉತ್ತರ

1. ಆ ಹುಡಗನನ್ನು ಹಾಲು ಕುಡಿಯಲು ಕರೆ.
2. ಅಲ್ಲಿ ನನ್ನ ಮಂಚವಿದೆ ಇಲ್ಲಿಗೆ ತೆಗೆದುಕೊಂಡು ಬಾ.
3. ನಾನು ತರಲ್ಲ.
4. ನಿನ್ನ ತಮ್ಮನನ್ನು ಕರೆದುಕೊಂಡು ಬಾ.
5. ನೀನು ಬಾಲಕನನ್ನು ಕೇಳಿ ಅಲ್ಲಿಗೆ ಹೋಗು.
6. ಆ ಹುಡುಗರು ತರಾಟೆ ಮಾಡುತ್ತಿದ್ದಾರೆ.
7. ನಮ್ಮ ಹಣ್ಣುಗಳನ್ನು ಯಾರು ತಿಂದರು?
8. ನೀವೇ ತಿಂದಿದ್ದೀರಿ ಅಲ್ವಾ.
9. ಅಯ್ಯೋ! ಮರಗಳಿಂದ ಹಣ್ಣುಗಳು ಬಿದ್ದಿವೆ.
10. ನಿನ್ನ ಪಾತ್ರೆಯಲ್ಲಿ ಸ್ವಲ್ಪ ಹಾಲಿದ್ದಲ್ಲಿ ನಾನು ಕುಡಿಯುತ್ತೇನೆ.

### ಪ್ರಶ್ನೆ

1. ಎಲೈ! ಹಾಲು ಕುಡಿಯುತ್ತೀಯಾ ಏನು?
2. ಬಾಲಕನು ಮರದಿಂದ ಬಿದ್ದನು.
3. ನೀನು ಎಲ್ಲಿಗೆ ಹೋಗಬೇಡ.
4. ಆ ಬಾಲಕರು ಗಲಾಟೆ ಮಾಡಬಲ್ಲರು.
5. ಬ್ರಾಹ್ಮಣರು ಸ್ನಾನ ಮಾಡಿ ತಟಾಕದಿಂದ ಬರುತ್ತಿದ್ದಾರೆ.
6. ಆದ ಮೇಲೆ ಊಟ ಮಾಡುತ್ತಾರೆ.
7. ನಾನು ಕೂಡ ಸ್ನಾನಕ್ಕೋಸ್ಕರ ಹೋಗುತ್ತೇನೆ.
8. ಭೋಜನಕ್ಕೋಸ್ಕರ ಆಲಸ್ಯ ಮಾಡಬೇಡಿ.
9. ನಿನ್ನ ತಂದೆಯು ಇದುವರೆಗೂ ಗ್ರಾಮದಿಂದ ಬರಲಿಲ್ಲ.
10. ನಾಳೆ ಬರುತ್ತಾನಾ ಏನು? ನಿನ್ನ ತಮ್ಮನನ್ನು ಕೇಳಿದರೇ ಅವನು ಹೇಳುತ್ತಾನೆ.

### ಉತ್ತರ

1. तं बालकं क्षीरं पातुम् आहूय।
2. तत्र मम शय्या अस्ति अत्र आनय।
3. अहं न आनयामि।
4. तव अनुजम् आनय।
5. त्वं बालकं पृष्ट्वा तत्र गच्छ।
6. ते बालकाः दौष्ट्यं कुर्वन्ति।
7. अस्माकं फलानि के अखादन्?
8. यूयमेव अखादत खलु।
9. अहो! वृक्षेभ्यः फलानि अपतन्।
10. तव पात्रे किञ्चित् क्षीरं अस्ति चेत् अहं पास्यामि।



# ನಿಮ್ಮ ಸಂದೇಹಗಳಿಗೆ ನಮ್ಮ ಉತ್ತರಗಳು

– ಡಾ. ಅನಸೂಯ ಎಸ್.ರಾಜೀವ್

**1. ಬೆಳಗ್ಗೆ ಎದ್ದೊಡನೆ ಕೈಗಳನ್ನೇಕೆ ಉಜ್ಜಬೇಕು?**

**ಉತ್ತರ :** ನಮ್ಮ ದೇಹ ಒಂದು ಮಿನಿ ವಿದ್ಯುತ್ ಉತ್ಪಾದನಾ ಕೇಂದ್ರ. ಮುಖ್ಯವಾಗಿ ಇಪ್ಪತ್ನಾಲ್ಕು ಕೇಂದ್ರಗಳಲ್ಲಿ ವಿದ್ಯುತ್ ಉತ್ಪಾದನೆಯಾಗುತ್ತದೆ. ಉತ್ಪಾದನೆಯಾದಷ್ಟು ವಿದ್ಯುತ್ ಅಷ್ಟೇ ಪ್ರಮಾಣದಲ್ಲಿ ವಿಸರ್ಜನೆಯಾಗಬೇಕು. ಹಾಗಿದ್ದಾಗ ಮಾತ್ರ ದೇಹ ಆರೋಗ್ಯವಾಗಿರುತ್ತದೆ. ವಿದ್ಯುತ್ ಎಂದರೆ ಶಕ್ತಿ. ಈ ಶಕ್ತಿಯು ಕೈಕಾಲಿನ ಬೆರಳಿನ ತುದಿಗಳು, ಕಣ್ಣು, ಅಂಗೈ, ಅಂಗಾಲು ಮುಂತಾದವುಗಳ ಮೂಲಕ ಹೊರಗೆ ಹೋಗುತ್ತದೆ. ನಾವು ಮಲಗಿರುವಾಗ ಈ ಕ್ರಿಯೆ ಬಹಳ ನಿಧಾನಗತಿಯಲ್ಲಿ ಆಗುತ್ತಾ ಇರುತ್ತವೆ. ಹಾಗಾಗಿ ಸಂಚಯವಾದ ಶಕ್ತಿ ಬಹಳ ಪ್ರಬಲವಾಗಿರುತ್ತವೆ. ರಾತ್ರಿ ನಿದ್ರೆ ಮಾಡುವಾಗ ಸಂಚಯಗೊಂಡ ಶಕ್ತಿ ತರಂಗಗಳು ಬೆಳಿಗ್ಗೆ ಕಣ್ಣು ತೆರೆದಾಗ ಒಂದೇ ಸಲ ಹೊರ ಹೊಮ್ಮುತ್ತವೆ. ನೇರವಾಗಿ ಇವು ಯಾರಿಗಾದರೂ ತಾಕಿದರೆ ದುಷ್ಪರಿಣಾಮವಾಗಬಹುದು. ಹಾಗಾಗಿ ಇದೇ ನಮ್ಮ ಅಂಗೈಗಳಲ್ಲಿ ವಿಸರ್ಜನೆಯಾದಾಗ ನಮ್ಮ ಅಂಗೈಗಳೂ ಶಕ್ತಿ ವಿಸರ್ಜನಾ ಕೇಂದ್ರಗಳಾಗಿರುವುದರಿಂದ ಅವು ನಿಷ್ಕ್ರಿಯವಾಗುತ್ತವೆ. ಹಾಗಾಗಿ ಬೆಳಗಾಗೆದ್ದು ಕಣ್ಣು ತೆರೆದು ಮೊದಲು ನಮ್ಮ ಅಂಗೈಗಳನ್ನು ನೋಡಿಕೊಳ್ಳಬೇಕು.

**2.ಕೈಗಳನ್ನು ನೋಡಿ ಕರಾಗ್ರೇ ವಸತೇ ಮಂತ್ರ ಹೇಳುವ ಉದ್ದೇಶವೇನು?**

**ಉತ್ತರ:** "ಕರಾಗ್ರೇ ವಸತೇ ಲಕ್ಷ್ಮೀ ಕರಮಧ್ಯೇ ಸರಸ್ವತೀ
ಕರಮೂಲೇ ಸ್ಥಿತಾ ಗೌರೀ ಪ್ರಭಾತೇ ಕರದರ್ಶನಂ"

ಈ ಶ್ಲೋಕವನ್ನು ಕೈ ನೋಡಿಕೊಂಡು ಹೇಳುತ್ತೇವೆ. ಇದು ಬೆಳಗ್ಗೆ ಎದ್ದಾಗಿನಿಂದಲೇ ಪ್ರಾರ್ಥನೆ ಪ್ರಾರಂಭವಾಗಲಿ ಎನ್ನುವ ಉದ್ದೇಶ. ಲಕ್ಷ್ಮೀ ಎಂದರೆ ಸಿರಿ ಎಂದರ್ಥ. ಮನುಷ್ಯನು ಯೋಚನೆ ಮಾಡಬಲ್ಲ ಚಿಂತನೆ ಎಂಬ ಸಿರಿಯನ್ನು ಪಡೆದ ಜೀವಿ. ಇದಿಷ್ಟೇ ಅಲ್ಲದೆ ನಮ್ಮ ದೈಹಿಕ ಹಾಗೂ ಪಾರಿವಾರಿಕ ಸಿರಿವಂತಿಕೆಗಳನ್ನು ನೆನೆಪಿಸಿಕೊಳ್ಳುವುದಕ್ಕೆ ಲಕ್ಷ್ಮೀ ಎಂದು ಹೇಳಿರುತ್ತದೆ. ನಮ್ಮಜ್ಞಾನಕ್ಕೆ ಸರಸ್ವತೀ ಎಂತಲೂ, ನಮ್ಮಧೈರ್ಯ ಸಾಧನೆಗೆ ಮೂಲ ಸ್ವರೂಪದ ಅರಿವಿಗೆ ಗೌರಿ ಎಂತಲೂ ಹೇಳಿರುತ್ತದೆ. ಇವೆಲ್ಲ ನಮ್ಮ ಪ್ರಯತ್ನದಿಂದ ಲಭ್ಯವಾಗುತ್ತವೆ. ನಮ್ಮ ಕೈಗಳು ನಮ್ಮ ಪ್ರಯತ್ನವನ್ನು ಪ್ರತಿನಿಧಿಸುತ್ತವೆ. ಈ ದಿನ ದೇವರ ದಯದಿಂದ ನಾನು ಕಷ್ಟಪಟ್ಟು ದುಡಿದು ಬುದ್ಧಿವಂತಿಕೆಯಿಂದ ಸಿರಿಯನ್ನು ಸಂಪಾದಿಸುವಂತಾಗಲಿ ಎಂಬ ಗೂಢಾರ್ಥವೇ ಈ ಬೆಳಗಿನ ಪ್ರಾರ್ಥನೆ.

**3. ನಾವು ಉಪವಾಸ ಏಕೆ ಮಾಡಬೇಕು?**

**ಉತ್ತರ:** ಉಪ ಎಂದರೆ ಹತ್ತಿರ, ವಾಸ ಎಂದರೆ ಇರುವುದು. ದೇವರ ಬಳಿ ಇರುವುದು ಉಪವಾಸ. ಅಂದರೆ ದೇವರ ಬಗ್ಗೆ ಚಿಂತನೆ ಮಾಡೋದು. ಹೀಗೆ ಚಿಂತನೆ ಮಾಡೋಕೆ ಸ್ಥಿರವಾದ ಮನಃಸ್ಥಿತಿ ಬೇಕು. ದೇಹದಲ್ಲಿ ಲವಲವಿಕೆ ಚೈತನ್ಯ ಇರಬೇಕು. ಪಚನಾಂಗಗಳಲ್ಲಿ ವ್ಯಯವಾಗೋ ಶಕ್ತಿಯನ್ನುಳಿಸಿ ಚಿಂತನೆಗೆ ವಿನಿಮಯಿಸುವುದು. ಕ್ರಮಬದ್ಧವಾದ ಈ ಉಪವಾಸದಿಂದ ದೇಹದಲ್ಲಿ ಸೇರಿಕೊಂಡಿರಬಹುದಾದ ವಿಷಗಳು ಹೊರಗೆ ಹೋಗುತ್ತವೆ. ಕೊಬ್ಬು ಚಟುವಟಿಕೆಗಳಿಗೆ ಉಪಯೋಗಿಸಲ್ಪಡುವುದರಿಂದ ದೇಹ ತೆಳುವಾಗುತ್ತೆ. ಪಚನಾಂಗಗಳು ವಿಶ್ರಾಂತಿ ಪಡೆದು ಅನಂತರ ಚುರುಕಾಗಿ ಕೆಲಸ ಮಾಡುತ್ತದೆ.

**4. ಏಕಾದಶಿಯಂದು ಉಪವಾಸ ಮಾಡಲು ಕಾಣವೇನು?**

**ಉತ್ತರ :** ಚಂದ್ರಗ್ರಹವು ಭೂಮಿಯ ಮೇಲೆ ಪ್ರಭಾವ ಬೀರುತ್ತದೆ. ಸಮುದ್ರದ ಅಲೆಗಳಲ್ಲಿ ಏರಿಳಿತ ಚಂದ್ರನಿಂದಲೇ ಆಗುವುದು. ಅವನ ಆಕರ್ಷಣ ಶಕ್ತಿ ನಮ್ಮ ದೇಹದ ಮೇಲೂ ಪರಿಣಾಮ ಬೀರುತ್ತದೆ. ಏಕೆಂದರೆ ನಮ್ಮದೇಹದಲ್ಲಿ ಜಲಭಾಗವು ಶೇಕಡ ಎಂಭತ್ತರಷ್ಟಿದೆ. ಏಕಾದಶಿಯ ಚಂದ್ರ ಭೂಮಿಗೆ ಸಮೀಪವಾಗಿರುವುದರಿಂದ ನಮ್ಮ ಮನಸ್ಸಿನ ಮೇಲೂ ಅಗಾಧ ಪರಿಣಾಮವಾಗುತ್ತದೆ. ಮಾನಸಿಕ ರೋಗಿಗಳಲ್ಲಿ ಈ ಪರಿಣಾಮ ಸ್ಪಷ್ಟವಾಗಿ ಕಂಡು ಬರುತ್ತದೆ. ಆ ದಿನ ನಮ್ಮ ಜೀರ್ಣಾಂಗಗಳಲ್ಲಿ ಆಹಾರ ಇದ್ದರೆ ಅದು ಸರಿಯಾಗಿ ಪಚನವಾಗುವುದಿಲ್ಲ. ಇದು ರೋಗಕ್ಕೆ ಎಡೆ ಮಾಡಿಕೊಡುತ್ತದೆ. ದೇಹದ ಆರೋಗ್ಯ ಸರಿಯಿದ್ದರೆ ಮನಸ್ಸು ಸುಸ್ಥಿತಿಯಲ್ಲಿರುತ್ತದೆ. ಹರಿ ಚಿಂತನೆಗೆ ದಾರಿಯಾಗುತ್ತದೆ. ಹಾಗಾಗಿ ಏಕಾದಶಿಯಂದೇ ಉಪವಾಸ ಮಾಡಬೇಕು.

**5. ರಾತ್ರಿ ಮಲಗುವಾಗ ಯಾವ ದಿಕ್ಕಿಗೆ ತಲೆ ಹಾಕಿ ಮಲಗಬೇಕು?**

**ಉತ್ತರ :** ಪೂರ್ವದಿಕ್ಕಿಗೆ ತಲೆ ಇಟ್ಟು ಮಲಗಿದರೆ ಆಯುಷ್ಯ ವೃದ್ಧಿ. ದಕ್ಷಿಣದಿಕ್ಕಿಗೆ ತಲೆ ಇಟ್ಟು ಮಲಗಿದರೆ ಆರೋಗ್ಯ ವೃದ್ಧಿ. ಪಶ್ಚಿಮದಿಕ್ಕಿಗೆ ತಲೆ ಇಟ್ಟು ಮಲಗಿದರೆ ದುಃಖ ಚಿಂತೆ ವೃದ್ಧಿ. ಉತ್ತರ ದಿಕ್ಕಿಗೆ ತಲೆ ಇಟ್ಟು ಮಲಗಿದರೆ ವ್ಯಾಧಿ. ಉತ್ತರ ದಿಕ್ಕಿಗೆ ತಲೆ ಇಟ್ಟು ಮಲಗಲೇಬಾರದು. ನಮ್ಮ ರಕ್ತದಲ್ಲಿ ಹಿಮೋಗ್ಲೋಬಿನ್ ಎಂಬ ಕಬ್ಬಿಣದ ಅಂಶ ಇರುತ್ತದೆ. ಭೂಮಿ ಒಂದು ಅಯಸ್ಕಾಂತ. ಅಯಸ್ಕಾಂತವು ಯಾವಾಗಲೂ ಉತ್ತರ ದಕ್ಷಿಣ ಮುಖ ಮಾಡಿ ನಿಲ್ಲುತ್ತದೆ. ಉತ್ತರ ದಿಕ್ಕಿಗೆ ತಲೆಹಾಕಿ ಮಲಗಿದರೆ ಭೂಮಿ ಅಯಸ್ಕಾಂತವು ನಮ್ಮ ರಕ್ತದಲ್ಲಿರುವ ಕಬ್ಬಿಣಾಂಶವನ್ನು ಆಕರ್ಷಿಸುತ್ತದೆ. ಇದರಿಂದ ಆರೋಗ್ಯದಲ್ಲಿ ತೊಂದರೆಯುಂಟಾಗುತ್ತದೆ.

ನೀತಿಕಥೆ

# ಅರಳಿ ಮರವೇಕೆ ಬಾಡುವುದಿಲ್ಲ?

-ಕೃಪೆ



ರಾಮಲಕ್ಷ್ಮಣರು ವನವಾಸದಲ್ಲಿದ್ದಾಗ ಗಯಾ ಕ್ಷೇತ್ರಕ್ಕೆ ಬರುತ್ತಾರೆ. ಸೀತಾದೇವಿಯನ್ನು ಫಲ್ಗುಣಿ ನದಿಯ ದಂಡೆಯಲ್ಲಿ ಕೂಡಿಸಿ ಅವರಿಬ್ಬರೂ ಕಾಡಿಗೆ ಹೋಗುತ್ತಾರೆ. ಇದಾದ ಸ್ವಲ್ಪ ಹೊತ್ತಿನಲ್ಲೇ ನದಿಯ ಒಳಗಿನಿಂದ ಕೈಯೊಂದು ಹೊರಗೆ ಬರುತ್ತದೆ.

ಸೀತಾದೇವಿ ನನಗೆ ಹಸಿವೆಯಾಗುತ್ತಿದೆ ಎಂದಂತಾಗುತ್ತದೆ. ಪದೇ ಪದೇ ಆ ಧ್ವನಿ ಮರುಕಳಿಸುತ್ತದೆ. ಆ ಧ್ವನಿಯು ದಶರಥ ಮಹಾರಾಜನ ದಂತೆ ಇರುತ್ತದೆ. ಸೀತೆಗೆ ಏನು ಮಾಡುವುದೆಂದೇ ತೋಚುವುದಿಲ್ಲ. ಬೇರೆ ದಾರಿ ಇಲ್ಲದೆ ಮರಳಿನ ಉಂಡೆಯನ್ನು ಮಾಡಿ ಅದರಲ್ಲಿ ಅನ್ನವನ್ನು ಆವಾಹನೆ ಮಾಡಿ ನದಿಯಿಂದ ಮೇಲೆ ಬಂದ ಕೈಯೊಳಗೆ ಇಡುತ್ತಾಳೆ.ನಂತರ ತನ್ನ ಕರ್ತವ್ಯಕ್ಕೆ ಐದು ಸಾಕ್ಷಿಗಳನ್ನು ಆಧಾರವಾಗಿ ಇಟ್ಟುಕೊಳ್ಳುತ್ತಾನೆ.

ಸೀತೆ ನೀಡಿದ ಆಹಾರದಿಂದ ದಶರಥ ಸಂತುಷ್ಟನಾಗುತ್ತಾನೆ ಹರಸಿ ಮರೆಯಾಗುತ್ತಾನೆ. ಇತ್ತ ರಾಮ ಲಕ್ಷ್ಮಣರು ಮರಳಿದಾಗ ಸೀತೆ ಅವರಿಗೆ ನಡೆದ ಸಂಗತಿಯೆಲ್ಲವನ್ನೂ ವಿವರಿಸುತ್ತಾನೆ. ರಾಮ ಲಕ್ಷ್ಮಣರಿಗೆ ಮೊದಲಿಗೆ ಸೀತೆಯ ಮಾತಿನ ಮೇಲೆ ನಂಬಿಕೆ ಬರುವುದಿಲ್ಲ. ಆಗ ಸೀತೆ ತನ್ನ ಕೃತ್ಯಕ್ಕೆ ಫಲ್ಗುಣಿ ನದಿ,ತುಳಸಿಗಿಡ, ಹಸು, ಬ್ರಾಹ್ಮಣ ಮತ್ತು ಅರಳಿ ಮರವೇ ಸಾಕ್ಷಿ ಎನ್ನುತ್ತಾಳೆ.

ಆದರೆ, ಸೀತೆಯ ಸಹಾಯಕ್ಕೆ ಅರಳಿ ಮರದ ಹೊರತಾಗಿ ಮತ್ಯಾರೂ ಬರುವುದಿಲ್ಲ. ಅರಳಿಮರ ಸಾಕ್ಷ್ಯ ನುಡಿಯುತ್ತದೆ. ರಾಮ, ಲಕ್ಷ್ಮಣರು, ಸೀತೆಯ ಕರ್ತವ್ಯ ಪ್ರಜ್ಞೆಯನ್ನು ಶ್ಲಾಘಿಸುತ್ತಾರೆ. ಆದರೆ,ಸೀತೆ ತನ್ನ ಮಾತಿಗೆ ವಿರುದ್ಧವಾಗಿ ನಡೆದುಕೊಂಡ ಫಲ್ಗುಣಿ ನದಿ, ಹಸು, ಬ್ರಾಹ್ಮಣ ಮತ್ತು ತುಳಸಿ ಗಿಡಕ್ಕೆ ಶಾಪ ಕೊಡುತ್ತಾಳೆ. ಫಲ್ಗುಣಿ ನದಿಗೆ ಮಳೆಗಾಲದಲ್ಲೂ ಸಹ ನಿನ್ನ ಪಾತ್ರಕ್ಕೆ ಎಷ್ಟೇ ನೀರು ಬಂದರೂ ಬರಿದಾಗಲಿ. ನೀರು ನೆಲದ ಒಳಗೇ ಉಳಿದು ಕೊಳ್ಳಲಿ. ಹೇ ಬ್ರಾಹ್ಮಣ. ನೀನು ಸತ್ಯ ಹೇಳದೇ ನನಗೆ ಮೋಸ ಮಾಡಿದೆ. ಹೀಗಾಗಿ ಈ ಕ್ಷೇತ್ರದಲ್ಲೇ ಇದ್ದು ಕ್ಷೇತ್ರಕ್ಕೆ ಬರುವ ಯಾತ್ರಿಕರನ್ನು ಪೀಡಿಸಿ ಅದರಿಂದ ಬಂದ ಲಾಭದಿಂದ ಜೀವನ ನಡೆಸು ಗೋಮಾತೆ ನೀನು ಜಗವನ್ನು ಬೆಳಗಬೇಕಾದವಳು ಆದರೆ ನೀನು ನನ್ನ ಮಾತು ಮೀರಿ ಲೋಭತನ ಮೆರೆದೆ. ಹಾಗಾಗಿ ಗಯಾ ಕ್ಷೇತ್ರದಲ್ಲೆ ಇದ್ದುಕೊಂಡು ಅವರಿವರ ಪಿಂಡವನ್ನು ತಿನ್ನುತ್ತಾ ಜೀವನ ಸಾಗಿಸು ಎಷ್ಟು ತಿಂದರೂ ನಿನ್ನ ಹೊಟ್ಟೆ ತುಂಬದಿರಲಿ.

ತುಳಸಿ ಮಾತೆ ನೀನು ಪವಿತ್ರಳಾದವಳು. ನೀನು ಸಹ ನನ್ನ ಮಾತು ಮೀರುವೆ ಎಂದು ಕೊಂಡಿರಲಿಲ್ಲ. ಹಾಗಾಗಿ ನೀನು ಎಲ್ಲೆಂದರಲ್ಲಿ ಬೆಳೆಯುವಂತಾಗಲಿ. ಸೀತೆಯ ಶಾಪದಂತೆ ಫಲ್ಗುಣಿ ನದಿ ಬತ್ತಿ ಹೋಗಿದೆ. ನದಿಯೊಳಗಿನ ಮರಳನ್ನು ಅಗೆದಾಗಳಷ್ಟೇ, ಇಂದಿಗೂ ನೀರು ಬರುತ್ತದೆ. ಫಲ್ಗುಣಿ ನದಿ ತೀರದಲ್ಲಿರುವ ಹಸುಗಳಿಗೆ ಪಿಂಡಗಳೇ ಆಹಾರ. ಅವು ಎಷ್ಟು ಹಸಿದಿರುತ್ತವೆ ಎಂದರೆ ಕೆಲವೊಮ್ಮೆ ಪಿಂಡ ವಿಸರ್ಜನೆಗೂ ಅವಕಾಶ ಕೊಡದೆ ಬಾಯಿ ಹಾಕುತ್ತವೆ.ನಂತರ ಸೀತೆಯ ದೃಷ್ಟಿ ಅರಳೀ ಮರದತ್ತ ಬೀಳುತ್ತದೆ. ಆಕೆ ಪರಮ ಸಂತೋಷದಿಂದ ಆಶೀರ್ವದಿಸುತ್ತಾಳೆ. ಅಂದಿನಿಂದ ಅರಳಿ ಮರ ಬಾಡದೆ ಕಂಗೊಳಿಸುತ್ತಿದೆ.

# ಬಾಲ ವಿನೋದಿನಿ

ಈ ಗೊಂಬೆಗೆ ಚುಕ್ಕಿಯನ್ನು ಸೇರಿಸಿ ಹಾಗೂ ಬಣ್ಣವನ್ನು ತುಂಬಿರಿ.....




ಈ ಗೊಂಬೆಯನ್ನು ನೋಡಿ ಬಣ್ಣವನ್ನು ತುಂಬಿರಿ.



## ಈ ಅಕ್ಷರಗಳಲ್ಲಿ ಒಂದು ಗಾದೆ ಇದೆ ಕಂಡು ಹಿಡಿಯಿರಿ ನೋಡೋಣ....

ಟ್ಟ ಕ್ಕ ಷ ವೇ ಕ್ಕೆ ಭಾ ಕ್ಕ

ಷೆ ತ ಕ್ಕೆ ಆ ಷ ತ ವೇ

ಉತ್ತರಗಳು:

ಆಟಕ್ಕೆ ತಕ್ಕ ವೇಷ, ವೇಷಕ್ಕೆ ತಕ್ಕ ಭಾಷೆ

## ದಾರಿ ತೋರಿಸಿ



| | | | | | | |
|---|---|---|---|---|---|---|
| | | ↓ | 0 | 2 | 0 | 1 |
| | | 0 | 1 | 4 | 6 | 8 |
| 10 | 8 | 3 | 2 | 3 | 3 | 5 |
| 3 | 5 | 7 | 0 | 4 | 5 | 8 |
| 1 | 4 | 7 | 6 | 5 | 0 | 3 |
| 9 | 5 | 8 | 9 | 1 | | |
| 9 | 0 | 9 | 10 | → | | |



ಮಹಾಲಕ್ಷ್ಮೀ ದೇವಿ ಇಲ್ಲದ ಕಾರಣದಿಂದ ಶ್ರೀ ವೈಕುಂಠದಿಂದ ಶ್ರೀನಿವಾಸನು ಭೂಲೋಕಕ್ಕೆ ಮಹಾಲಕ್ಷ್ಮಿಯನ್ನು ಹುಡುಕಿಕೊಂಡು ಬಂದ ದಾರಿಯನ್ನು ಮಕ್ಕಳೇ ಕಂಡು ಹಿಡಿಯಿರಿ.

తిరుమల తిరుపతి దేవస్థానములు

# ಮಕ್ಕಳೇ ಇದು ನಿಮಗಾಗಿ

## ರಸಪ್ರಶ್ನೆಗಳು

01. ಋಷಿ ಪಂಚಮಿಯು ಯಾವ ಮಾಸದಲ್ಲಿ ಬರುತ್ತದೆ? ..........
02. ಗೌರಿಯನ್ನು ಭೂಮಿಗೆ ಸ್ವಾಗತಿಸಲು ಯಾರು ಬರುತ್ತಾರೆ? ..........
03. ಲಕ್ಷ್ಮೀದೇವಿಯನ್ನು ಕುರಿತಂತೆ ದೀರ್ಘಕೃತಿ ರಚಿಸಿದವರು ಯಾರು? ..........
04. ವರಾಹ ಎಂದರೆ ಏನು ಅರ್ಥ? ..........
05. ಶ್ರುತಾವತಿಯ ಪತಿ ಯಾರು? ..........
06. ವರದರಾಜ ಸ್ವಾಮಿ ದೇವಾಲಯದ ಹಿಂಬದಿಯಲ್ಲಿ ಯಾರ ದೇವಾಲಯವಿದೆ? ..........
07. ಬಲರಾಮನ ಸಹೋದರನ ಹೆಸರೇನು? ..........
08. ಗೋಕುಲದ ಲೀಲಾ ಪುರುಷನ್ಯಾರು? ..........
09. ಶ್ರೀರಾಮಚಂದ್ರನು ಸೀತೆಯನ್ನು ಹುಡುಕುತ್ತಾ ಯಾವ ಪರ್ವತ ತಪ್ಪಲಿಗೆ ಬಂದನು? ..........
10. ಅನಂತನ ವ್ರತದಲ್ಲಿ ಯಾವ ಬಣ್ಣದ ದಾರಕ್ಕೆ ವಿಶೇಷ ಮಹತ್ವವಿದೆ? ..........
11. ಜಗನ್ನಾಥದಾಸರ ಜನನ ಯಾವ ಸಂವತ್ಸರದಲ್ಲಿ ಆಯಿತು? ..........
12. ಜಗತ್ತಿನ ಪ್ರಪ್ರಥಮ ಮಹಾಶಿಲ್ಪಿ ಯಾರು? ..........
13. ವಿಶ್ವಕರ್ಮನು ಯಾರ ದರ್ಶನ ಪಡೆದನು? ..........
14. ಸೀತಾದೇವಿ ಯಾರು ಯಾರಿಗೆ ಶಾಪ ನೀಡಿದಳು? ..........
15. ನಾಗರಾಜನನ್ನು ಎಲ್ಲಿಗೆ ಹೋಗೆಂದು ಶ್ರೀಕೃಷ್ಣನು ಹೇಳಿದನು? ..........

15 ಕ್ವಿಜ್

## ಸೂಚನೆಗಳು

1. ಈ ಕ್ವಿಜ್ 10-15 ವರ್ಷ ವಯಸ್ಸಿನ ಮಕ್ಕಳು ಹಿಂದೂವಾಗಿರಬೇಕು.
2. ಈ ಕ್ವಿಜ್‌ನಲ್ಲಿ ಪಾಲ್ಗೊಳ್ಳುವ ಮಕ್ಕಳ ತಂದೆ ತಾಯಿ ತಪ್ಪದೇ ಸಪ್ತಗಿರಿ ಮಾಸಪತ್ರಿಕೆಯ ಚಂದಾದಾರರಾಗಿರಬೇಕು.
3. ಕ್ವಿಜ್ ಪ್ರಶ್ನಾಪತ್ರಿಕೆಯಲ್ಲಿ ತಪ್ಪದೇ ತಮ್ಮ ಚಂದಾ ಸಂಖ್ಯೆ, ಹೆಸರು, ವಿಳಾಸ, ಪಿನ್‌ಕೋಡ್, ಫೋನ್ ನಂಬರ್ ಸ್ಪಷ್ಟವಾಗಿ ಬರೆಯಬೇಕು.
4. ಕ್ವಿಜ್ ಉತ್ತರಗಳನ್ನು ಪ್ರಶ್ನೆಯ ಕೆಳಗೆ ನಿರ್ದೇಶಿಸಿದ ಸ್ಥಳದಲ್ಲಿಯೇ ಬರೆದು ಕಳುಹಿಸಬೇಕು.
5. ಕ್ವಿಜ್ ಉತ್ತರದ ಜೆರಾಕ್ಸ್ ಅನ್ನು ತೆಗೆದುಕೊಂಡು ಕಳಿಹಿಸಿದವರು ಖಚಿತವಾಗಿ ಚಂದಾನಂಬರ್‌ನ್ನು ಕಳುಹಿಸಬೇಕು. ಒಬ್ಬ ಚಂದಾದಾರರು ಒಂದು ಉತ್ತರವನ್ನು ಮಾತ್ರವೇ ಕಳುಹಿಸತಕ್ಕದ್ದು.
6. ಉತ್ತರ ಬರೆಯುವಾಗ ಅಳಿಸುವುದು,ತಿದ್ದುವುದು ಮಾಡಬಾರದು.
7. ಉತ್ತರಗಳನ್ನು ನಮಗೆ ಕಳುಹಿಸುವ ಕೊನೆಯ ದಿನಾಂಕ 25.08.2023
8. ಈ ಕ್ವಿಜ್‌ನಲ್ಲಿ ಎಲ್ಲಾ ಉತ್ತರಗಳನ್ನು ಸರಿಯಾಗಿ ಬರೆದ ಮೂರು ಮಕ್ಕಳನ್ನು ಮಾತ್ರವೇ ವಿಜೇತರಾಗಿ ಲಕ್ಕಿ ಡಿಪ್ ಮುಖಾಂತರ ಆಯ್ಕೆ ಮಾಡಲಾಗುತ್ತದೆ.
9. ವಿಜೇತರಾದ ಮಕ್ಕಳ ಹೆಸರನ್ನು ಮುಂದಿನ ತಿಂಗಳ ಸಪ್ತಗಿರಿ ಮಾಸ ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.
10. ತಿ.ತಿ.ದೇ. ಪ್ರಧಾನ ಸಂಪಾದಕರ ಕಾರ್ಯಾಲಯದಲ್ಲಿ ಕೆಲಸ ಮಾಡುವ ಉದ್ಯೋಗಿಗಳ ಮಕ್ಕಳು ಈ ಕ್ವಿಜ್‌ನಲ್ಲಿ ಪಾಲ್ಗೊಳ್ಳಬಾರದು.
11. ಕ್ವಿಜ್‌ಗೆ ಸಂಬಂಧಿಸಿದ ಯಾವ ಸಮಾಚಾರವನ್ನು ಫೋನ್ ಮುಖಾಂತರ ನೀಡಲಾಗುವುದಿಲ್ಲ.

**ನಿಮ್ಮ ಉತ್ತರಗಳನ್ನು ಕಳುಹಿಸಬೇಕಾದ ವಿಳಾಸ**

ಪ್ರಧಾನ ಸಂಪಾದಕರು
ಸಪ್ತಗಿರಿ ಮಾಸಪ್ರತಿಕೆ
**ತಿ.ತಿ.ದೇ. ಪ್ರೆಸ್ ಕಾಂಪೌಂಡ್**
**ಕೆ.ಟಿ. ರಸ್ತೆ ತಿರುಪತಿ : 517 507**
**ಆಂಧ್ರ ಪ್ರದೇಶ್**

| | |
|---|---|
| **ಹೆಸರು :** | **ವಿಳಾಸ :** |
| **ಚಂದಾ ಸಂಖ್ಯೆ :** | |
| **ತಂದೆಯ ಹೆಸರು :** | |
| **ತಾಯಿಯ ಹೆಸರು:** | **ದೂರವಾಣಿ ಸಂಖ್ಯೆ:** |

## ಇದರಲ್ಲಿ ಹೋಲಿಕೆ ಇಲ್ಲದ ಚಿತ್ರ ಯಾವುದು



..........................................



..........................................



..........................................



..........................................

ಮಲೆಯಪ್ಪಸ್ವಾಮಿಯ ವಾಹನ, ಲಕ್ಷ್ಮೀದೇವಿ, ವ್ರತ, ಶ್ರಾವಣಮಾಸ, ಸಂಬಂಧಿಸಿದ ವಸ್ತುಗಳು ಇವುಗಳಿಗೆ ಸಂಬಂಧವಿಲ್ಲದ ಚಿತ್ರವನ್ನು ಕಂಡು ಹಿಡಿಯಿರಿ.



ಈ ಚಿತ್ರದಲ್ಲಿ ಒಟ್ಟು 7 ವ್ಯತ್ಯಾಸಗಳಿವೆ.

ಮಕ್ಕಳೇ ಇದನ್ನು ಕಂಡು ಹಿಡಿಯಿರಿ ನೋಡೋಣ.



ದೀಪ, ದೀಪ, ಹೂ, ಮಂಗಳಆರತಿ, ದೀಪದ ಚೈನ್, ಹಣ್ಣುಗಳ ತಟ್ಟೆ, ಮತ್ತು ತುಳಸಿಮಾಲೆಯ ಬುಟ್ಟಿ

# ಕಾಳೀಯ ಮರ್ದನ ಚಿತ್ರಕಥೆ

**ಕಥೆ: ತೆಲುಗು ಮೂಲ** : ಶ್ರೀನಿವಾಸದೀಕ್ಷಿತರು
**ಅನುವಾದ** : ಆರ್.ಕೆ.ವಿ.
**ಚಿತ್ರಗಳು** : ಕೆ.ದ್ವಾರಕಾನಾಥ್

ಒಂದು ದಿನ ಗೋಪಾಲಕರು ಯಮುನಾ ನದಿಯ ಬಳಿ ಹಸುಗಳನ್ನು ಮೇಯುತ್ತಿದ್ದರು. ಅವರ ಜೊತೆಯಲ್ಲಿ ಶ್ರೀಕೃಷ್ಣ, ಬಲರಾಮ ಕೂಡ ಇದ್ದರು. ಇದೇ ವೇಳೆ ಹಸುಗಳು ನದಿಯಲ್ಲಿ ನೀರು ಕುಡಿದು ಸಾವನ್ನಪ್ಪಿದವು. ಗೋಪಾಲಕರು ಭಯಗೊಂಡರು.....






ಸರ್ವೇ ಜನಾಃ ಸುಖಿನೋ ಭವಂತು

ತಿರುಮಲೆ ತಿರುಪತಿ ದೇವಸ್ಥಾನಗಳು, ತಿರುಪತಿ

# ಸಪ್ತಗಿರಿ

(ಆಧ್ಯಾತ್ಮಿಕ ಮಾಸಪತ್ರಿಕೆ)

## ಚಂದಾ ನಮೂನೆ ಪತ್ರ

ಹೆಸರು ಮತ್ತು ವಿಳಾಸ :
(ಬಿಡಿಬಿಡಿ ಅಕ್ಷರಗಳಲ್ಲಿ ಅರ್ಥವಾಗುವಂತೆ ಇಂಗ್ಲೀಷಿನಲ್ಲಿ ಬರಿಯಿರಿ. ಪಿನ್ ಕೋಡ್ ತಪ್ಪದೇ ನಮೂದಿಸಿ)

(ಪಿನ್ ಕೋಡ್ ತಪ್ಪದೇ ನಮೂದಿಸಿ)

ಬೇಕಾಗುವ ಭಾಷೆ : ☐ ಕನ್ನಡ ☐ ತೆಲುಗು ☐ ಹಿಂದೀ ☐ ತಮಿಳು ☐ ಇಂಗ್ಲೀಷು ☐ ಸಂಸ್ಕೃತ

ವಾರ್ಷಿಕ /ಆಜೀವಚಂದಾ : ☐ ರೂ.240/- ☐ ರೂ.2,400/-( 12 ವರ್ಷ),

ವಿದೇಶಿ ವಾರ್ಷಿಕ ಚಂದಾ ☐ ರೂ. 1030/-

ಚಂದಾ ನವೀಕರಣ :

(ಅ) ಚಂದಾ ನಂಬರು :

(ಆ) ಭಾಷೆ :

ಸಲ್ಲಿಸಿದ ಹಣ :

ಡಿ. ಡಿ. ಸಂಖ್ಯೆ/ಈ.ಎಂ.ಓ/ಐ.ಪಿ.ಓ./
ಅಟ್‌ಪರ್ ಚೆಕ್ಕು ಮಾತ್ರವೇ :

ಸ್ಥಳ :

ದಿನಾಂಕ: ಚಂದಾದಾರರ ಸಹಿ

ಸಪ್ತಗಿರಿ ವಾರ್ಷಿಕ ಚಂದಾ ರೂ.240/-, ಆಜೀವಚಂದಾ (12 ವರ್ಷ) ರೂ.2,400/- ಗಳು ಡಿ. ಡಿ. ಸಂಖ್ಯೆ/ಈ.ಎಂ.ಓ/ಐ.ಪಿ.ಓ./ ಅಟ್‌ಪರ್ ಚೆಕ್ಕು ಅನ್ನು ಪ್ರಧಾನ ಸಂಪಾದಕರು, ಸಪ್ತಗಿರಿ, ತಿ.ತಿ.ದೇ. ತಿರುಪತಿ. ಅವರ ಹೆಸರಿನಲ್ಲಿ ತೆಗೆಯ ಬೇಕು. ಸಪ್ತಗಿರಿ ಚಂದಾದಾರರಾಗಿ ಸೇರ ಬಯಸುವವರು/ತಮ್ಮ ಚಂದಾ ನವೀಕರಿಸುವವರು ಈ ಕೂಪನ್‌ನಲ್ಲಿ ಅಥವಾ ಬಿಳಿಹಾಳಿಯಲ್ಲಿ ಮೇಲೆ ತಿಳಿಸಿದಂತೆ ವಿವರಗಳನ್ನು ಬರೆದು ಕಳುಹಿಸಬೇಕು. ಎಂ.ಓ. ಕಳುಹಿಸುವವರು ಅದರಲ್ಲಿ ನಿಮ್ಮ ಚಂದಾ ವಿವರಗಳನ್ನು ಬರೆದು ಈ ಕೆಳಗಿನ ವಿಳಾಸಕ್ಕೆ ಕಳಿಸಿ.

ನಮ್ಮ ವಿಳಾಸ -"ಪ್ರಧಾನ ಸಂಪಾಕರು, ಸಪ್ತಗಿರಿ ಕಾರ್ಯಾಲಯ, ತಿ.ತಿ.ದೇ ಪ್ರೆಸ್ ಕಾಂಪೌಂಡ್, ಕೆ. ಟಿ.ರೋಡ್ಡು, ತಿರುಪತಿ - 517 507".

ಸಪ್ತಗಿರಿ ಚಂದಾ ವಿವರಣೆಗಾಗಿ ಪೋನ್‌ನಂಬರ್:0877- 2264359,0877-2264543

ತಿರುಮಲೆ ತಿರುಪತಿ ದೇವಸ್ಥಾನಗಳು

## ಟೋಲ್ ಫ್ರಿ ನಂಬರ್

ಸ್ವಾಮಿಯ ದರ್ಶನಾರ್ಥ ತಿರುಮಲೆಗೆ ಬರುವ ಭಕ್ತರ ಸೌಕರ್ಯಾರ್ಕಾಗಿ ತಿರುಮಲೆ ತಿರುಪತಿ ದೇವಸ್ಥಾನದವರು **ಟೋಲ್ ಫ್ರಿ ನಂಬರ್** ಅನ್ನು ಏರ್ಪಡಿಸಿದ್ದಾರೆ.

ಯಾತ್ರಿಕರು, ಭಕ್ತರು ದೇವಸ್ಥಾನಕ್ಕೆ ಸಂಬಂಧಿಸಿದ ಸೂಚನೆ /ದೂರುಗಳನ್ನು ಮತ್ತು ಇತರ ಸಮಾಚಾರಕ್ಕಾಗಿ ಈ ನಂಬರನ್ನು ಸಂಪರ್ಕಿಸಬಹುದು.

**ತಿರುಮಲೆ ತಿರುಪತಿ ದೇವಸ್ಥಾನವು ಯಾತ್ರಿಕರಿಗೆ ಮತ್ತಷ್ಟು ಸೇವೆಯನ್ನು ನೀಡಲು ನಿಮ್ಮ ಸೂಚನೆಗಳನ್ನು ನೀಡಿರಿ.**

**ಟೋಲ್ ಫ್ರಿ ನಂಬರ್**

**18004254141**

0877-2233333,
0877-2277777

Printed by Sri P. Ramaraju, M.A., and Published by Dr. K. Radha Ramana, M.A., M.Phil., Ph.D., on behalf of Tirumala Tirupati Devasthanams and Printed and Published at Tirumala Tirupati Devasthanams Press, K.T.Road, Tirupati - 517 507.
Editor : Dr. V. G. Chokkalingam, M.A., Ph.D.

## ಬೀಳ್ಕೊಡುಗೆ



ಗೌ॥ ಶ್ರೀ . ವೈ.ವಿ. ಸುಬ್ಬಾರೆಡ್ಡಿ ಅವರು 22-06-2019 ರಿಂದ 07-08-2023 ರ ವರೆಗೆ ತಿರುಮಲೆ ತಿರುಪತಿ ದೇವಸ್ಥಾನಗಳ ಆಡಳಿತ ಮಂಡಳಿಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ನಾಲ್ಕು ವರ್ಷಗಳ ಸೇವಾವಧಿಯಲ್ಲಿ ಶ್ರೀ ವೆಂಕಟೇಶ್ವರ ಸ್ವಾಮಿಯವರ ದರ್ಶನವನ್ನು ಬಹು ಪಾಲು ಸಾಮಾನ್ಯ ಭಕ್ತರಿಗೆ ಒದಗಿಸಲು,ಸ್ವಾಮಿಯ ಪ್ರಥಮ ದರ್ಶನವನ್ನು ನೀಡಲು L1, L2, L3 ಟಿಕೆಟ್‌ಗಳನ್ನು ರದ್ದು ಗೊಳಿಸಲಾಯಿತು.

ವಿ.ಐ.ಪಿ. ಬ್ರೇಕ್ ವೇಳೆಯನ್ನು ಬದಲಿಸಿ ತೆಗೆದು ಕೊಂಡಿರುವ ನಿರ್ಧಾರ ಅತ್ಯಂತ ತೃಪ್ತಿ ತಂದಿದೆ ಎಂದರು. ತಿರುಮಲೆಗೆ ಭೇಟಿ ನೀಡುವ ಸಾಮಾನ್ಯ ಭಕ್ತರಿಗೆ ವಸತಿ ಮತ್ತು ಇತರ ಸೌಲಭ್ಯಗಳನ್ನು ಸುಧಾರಿಸಲು ಅನೇಕ ತೀರ್ಮಾನಗಳನ್ನು ಕೈಗೊಂಡರು.ಶ್ರೀ ಪದ್ಮಾವತಿ ಚಿಕ್ಕ ಮಕ್ಕಳ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ಶ್ರೀ ವೆಂಕಟೇಶ್ವರ ಆಯುರ್ವೇದಿಕ್ ಆಸ್ಪತ್ರೆಯ ಹೆಚ್ಚುವರಿ ಮಹಡಿ ನಿರ್ಮಾಣ, ನೆಲ ಅಂತಸ್ತಿನ ಅಭಿವೃದ್ಧಿ ಕಾಮಗಾರಿಗಳು,ಆಯುರ್ವೇದ ಕಾಲೇಜಿನ ವಿದ್ಯಾರ್ಥಿ ನಿಲಯ ಅಭಿವೃದ್ಧಿ ಕಾಮಗಾರಿಗಳು, ಆಯುರ್ವೇದ ಕಾಲೇಜಿನ ವಿದ್ಯಾರ್ಥಿ ನಿಲಯ ಕಟ್ಟಡದಲ್ಲಿ ಇನ್ನೂ ಎರಡು ಮಹಡಿಗಳ ನಿರ್ಮಾಣ, ತೆಲುಗು ರಾಜ್ಯಗಳಲ್ಲಿ ಶ್ರೀವಾಣಿ ಟ್ರಸ್ಟ್‌ನೊಂದಿಗೆ 26 ದೇವಾಲಯಗಳ ಅಭಿವೃದ್ಧಿ ಇತ್ಯಾದಿ.

ನಾಲ್ಕು ವರ್ಷಗಳ ಕಾಲ ಸ್ವಾಮಿಯವರ ಭಕ್ತರೊಂದಿಗೆ ಕೆಲಸ ಮಾಡುವ ಭಾಗ್ಯ ನೀಡಿದ ಶ್ರೀವೆಂಕಟೇಶ್ವರ ಸ್ವಾಮಿಯವರಿಗೆ ಕೃತಜ್ಞತೆಗಳನ್ನು ತಿಳಿಸುತ್ತಿದ್ದೇನೆ.

ಅವರಿಗೆ ಧನ್ಯವಾದಗಳು.

## ಸ್ವಾಗತ



ತಿರುಮಲೆ ತಿರುಪತಿ ದೇವಸ್ಥಾನಗಳ ನೂತನ ಆಡಳಿತ ಮಂಡಳಿಯ ಅಧ್ಯಕ್ಷರಾಗಿ ತಿರುಪತಿ ಶಾಸಕರಾದ ಗೌ॥ ಶ್ರೀ ಭೂಮನ ಕರುಣಾಕರ ರೆಡ್ಡಿ ಅವರನ್ನು ನೇಮಿಸಲಾಯಿತು.

ಅವರೊಂದಿಗೆ 10-08-2023 ರಂದು ಬೆಳಿಗ್ಗೆ ಸ್ವಾಮಿಯವರ ಆಲಯದಲ್ಲಿರುವ ಗರುಡಾಳ್ವಾರ್ ಸನ್ನಿಧಿಯಲ್ಲಿ ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ ಶ್ರೀ ಎ.ವಿ. ಧರ್ಮಾರೆಡ್ಡಿ ಐ.ಡಿ.ಇ.ಎಸ್. ಅವರು ಪ್ರಮಾಣ ಸ್ವೀಕಾರ ಮಾಡಿಸಿದರು.ಈ ಸಂದರ್ಭದಲ್ಲಿ ಅಧ್ಯಕ್ಷರು ಮಾತನಾಡುತ್ತಾ ಸ್ವಾಮಿಯವರ ದರ್ಶನಕ್ಕೆ ಸಾಮಾನ್ಯ ಭಕ್ತರಿಗೆ ಮೊದಲ ಆದ್ಯತೆ ನೀಡುತ್ತೇನೆ ಹೊರತು, ಶ್ರೀಮಂತರ ಸೇವೆಗೆ ಆದ್ಯತೆ ನೀಡುವುದಿಲ್ಲ ಎಂದು ನೂತನ ಆಡಳಿತ ಮಂಡಳಿಯ ಅಧ್ಯಕ್ಷರು ಸ್ಪಷ್ಟಪಡಿಸಿದರು.

ವಿ.ಐ.ಪಿ.ಗಳು ದರ್ಶನಕ್ಕೆ ತಾಪತ್ರಯ ಪಟ್ಟರೆ ಸ್ವಾಮಿಯವರ ಆಶೀರ್ವಾದ ಸಿಗುವುದಿಲ್ಲ ಎಂಬ ಸತ್ಯವನ್ನು ಗುರುತಿಸಬೇಕು ಎಂದು ಮನವಿ ಮಾಡಿದರು.

ಆಡಳಿತ ಮಂಡಳಿಯ ಅಧ್ಯಕ್ಷರು, ಕಾರ್ಯನಿರ್ವಹಣಾಧಿಕಾರಿಗಳು, ಉದ್ಯೋಗಿಗಳು ಸ್ವಾಮಿಯವರ ಬಗ್ಗೆ ಶ್ರದ್ಧೆ, ನಂಬಿಕೆಯಿಂದ ಕೆಲಸ ಮಾಡಿದರು. ಉತ್ತಮ ವ್ಯವಸ್ಥೆಯನ್ನು ರೂಪಿಸಲಾಗಿದೆ. ತಮ್ಮ ಆಡಳಿತ ಮಂಡಳಿಯು ಇದನ್ನು ಇನ್ನೂ ಮುಂದೆ ತೆಗೆದುಕೊಂಡು ಹೋಗಿ ಸನಾತನ ಹಿಂದೂ ಧರ್ಮವನ್ನು ವಿಶ್ವ ವ್ಯಾಪ್ತಿಯಾಗಿ ಪ್ರಚಾರ ಮಾಡಿ, ಸಾಮಾಜಿಕ ಸೇವಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವಂತೆ ಆಡಳಿತ ಮಂಡಳಿಯು ಕೃಷಿ ಮಾಡುತ್ತದೆ.

ದೇಶ ವಿದೇಶದಲ್ಲಿರುವ ಎಲ್ಲ ಹಿಂದೂಗಳನ್ನು ಒಗ್ಗೂಡಿಸಿ ಹಿಂದೂ ಧರ್ಮ ಪ್ರಚಾರ ಮಾಡಲು ತಿ.ತಿ.ದೇ., ಮುಂದಾಗಲಿದೆ ಎಂದರು.

ಇವರಿಗೆ ಶುಭಾಷಯಗಳು

SAPTHAGIRI (KANNADA) SPIRITUAL ILLUSTRATED MONTHLY Published by Tirumala Tirupati Devasthanams Printing on 25-08-2023 and Posting at Tirupati RMS.Regd. with the Registrar of Newspapers for India underRNI. No. APKAN/2021/80589. Postal Regd.No.TRP/156/2021-2023 "Licenced toPost Without Prepayment No. PMGK/RNP/WPP-04(6)/2021-2023" Posting on 20th of Every Month.

